ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 9 ಭಾನುವಾರ 2022

ಸಂಪುಟ: 43 | ಸಂಚಿಕೆ: 173 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇಂದು ಚಾಮುಂಡೇಶ್ವರಿ ಮಹಾ ರಥೋತ್ಸವ
ಅ.11ರಂದು ತೆಪ್ಪೋತ್ಸವ



ಮೈಸೂರು, ಅ.8(ಆರ್‌ಕೆ)–ನಾಳೆ (ಅ.9) ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಮಹಾ ರಥೋತ್ಸವ ಜರುಗಲಿದೆ.

ಧಾರ್ಮಿಕ ದತ್ತಿ ಇಲಾಖೆ ಹಾಗೂ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ವತಿಯಿಂದ ಭಾನುವಾರ ಬೆಳಗ್ಗೆ 7.50 ರಿಂದ 8.10 ಗಂಟೆಯೊಳಗೆ ಸಲ್ಲುವ ಶುಭ ಮುಹೂರ್ತದಲ್ಲಿ ಶ್ರೀಮದ್ ದಿವ್ಯ ರಥಾರೋಹಣ ಮಂಟಪೋತ್ಸವವನ್ನು ಆಯೋಜಿಸಲಾಗಿದೆ. ಅ.11ರಂದು ಮಂಗಳವಾರ ಸಂಜೆ 7 ಗಂಟೆಗೆ ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ತೆಪ್ಪೋತ್ಸವ ಆಂದೋಳಿಕಾರೋಹಣ ಹಾಗೂ ಧ್ವಜಾರೋಹಣ ನಡೆಯಲಿದೆ.

ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಹೆಚ್ಚಳ
ಸಂಪುಟ ಅಸ್ತು



- ನ್ಯಾ. ನಾಗಮೋಹನದಾಸ್ ನೇತೃತ್ವದ ಸಮಿತಿ ಶಿಫಾರಸ್ಸಿನಂತೆ ಎಸ್‌ಸಿ ಶೇ.15ರಿಂದ 17, ಎಸ್‌ಟಿ ಶೇ.3ರಿಂದ 7ಕ್ಕೆ ಏರಿಸಲು ನಿರ್ಧಾರ
- ಶೀಘ್ರವೇ ಸರ್ಕಾರಿ ಆದೇಶ ಹೊರಡಿಸಿ, ಪರಿಷ್ಕೃತ ಮೀಸಲಾತಿ ಅನುಷ್ಠಾನಕ್ಕೆ ತೀರ್ಮಾನ
- ನ್ಯಾಯಮೂರ್ತಿ ಸದಾಶಿವ ಆಯೋಗದ ಶಿಫಾರಸಿನಂತೆ ಒಳ ಮೀಸಲಾತಿ ಅನುಷ್ಠಾನ ಸಂಬಂಧ ಅಧ್ಯಯನಕ್ಕೆ ಸಂಪುಟ ಉಪಸಮಿತಿ ರಚನೆ

ಬೆಂಗಳೂರು, ಅ.8(ಕೆಎಂಶಿ)–ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ನೀಡಿರುವ ವರದಿಯ ಶಿಫಾರಸ್ಸಿನಂತೆ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿ ಶೀಘ್ರವೇ ಸರ್ಕಾರದ ಆದೇಶ ಹೊರಡಿಸಿ, ಅನುಷ್ಠಾನಗೊಳಿಸಲು ಇಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಒಳ ಮೀಸಲಾತಿ ಕಲ್ಪಿಸುವ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯ ಅಧ್ಯಯನಕ್ಕೂ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಿದೆ.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ನ್ಯಾಯಮೂರ್ತಿ ಸದಾಶಿವ ಆಯೋಗದ ಶಿಫಾರಸ್ಸಿನಂತೆ ಒಳಮೀಸಲಾತಿ ಅನುಷ್ಠಾನಗೊಳಿಸುವ ಸಂಬಂಧ ವರದಿಯ ಅಧ್ಯಯನ ನಡೆಸಿ ▶ 9ನೇ ಪುಟಕ್ಕೆ


ಮೀಸಲಾತಿ ಹೆಚ್ಚಳಕ್ಕೆ ಕಾನೂನು ರಕ್ಷಣೆ: ಸಿಎಂ

ಬೆಂಗಳೂರು, ಅ. 8(ಕೆಎಂಶಿ)– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳ ಮಾಡಿರುವ ಸರ್ಕಾರದ ನಿರ್ಣಯಕ್ಕೆ ಕಾನೂನಿನ ರಕ್ಷಣೆ ಕೊಡುವ ಪ್ರಯತ್ನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ಸಮಿತಿ ವರದಿಯನ್ನೇ ಸರ್ಕಾರ ಒಪ್ಪಿಕೊಂಡಿದ್ದು, ಎಸ್ಸಿ ಮೀಸಲಾತಿಯನ್ನು ಶೇ.15ರಿಂದ 17ಕ್ಕೆ ಹಾಗೂ ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಹೆಚ್ಚಳ ಮಾಡಲು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯ ಲಾಗಿದೆ. ಕೂಡಲೇ ರಾಜ್ಯಪತ್ರದಲ್ಲಿ ಈ ವಿಷಯವನ್ನು ಅಧಿಸೂಚನೆ ಹೊರಡಿಸಲಾಗುವುದು ಎಂದರು.

ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿರುವುದಕ್ಕೆ ಕಾನೂನಿನ ರಕ್ಷಣೆ ಕೊಡಲು ಸಂವಿಧಾನದ ಷೆಡ್ಯೂಲ್ 9ರ ಅಡಿ ಸೇರಿಸಬೇಕಾಗಿದೆ. ಅಲ್ಲಿಯವರೆಗೂ ಎಸ್ಸಿ–ಎಸ್ಟಿ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯ ದೊರೆಯಬೇಕೆಂದು ಈ ಆದೇಶ ಹೊರಡಿಸಲಾಗುತ್ತಿದೆ ಎಂದು ಹೇಳಿದರು. ಸಂವಿಧಾನದ ಷೆಡ್ಯೂಲ್ 9ರಲ್ಲಿ ಸೇರಿಸಲು ಸಮಯಬೇಕಾಗುತ್ತದೆ ಎಂದ ಅವರು, ಯಾವ ರೀತಿ ಸೇರಿಸಬೇಕೆಂಬ ವಿಧಿ, ವಿಧಾನಗಳ ಬಗ್ಗೆ ಕಾನೂನು ಸಚಿವರು, ಕಾನೂನು ಆಯೋಗ, ಅಡ್ವೋಕೇಟ್ ಜನರಲ್ ಮತ್ತು ಕಾನೂನು ಪರಿಣಿತರ ಜೊತೆ ಚರ್ಚೆ ಮಾಡಿ ▶ 9ನೇ ಪುಟಕ್ಕೆ

ನವೆಂಬರ್ ಅಂತ್ಯದೊಳಗೆ ರಿಂಗ್ ರಸ್ತೆಯಲ್ಲಿ ದೀಪಗಳು ಬೆಳಗಲಿವೆ
ಸಂಸದ ಪ್ರತಾಪ್ ಸಿಂಹ ವಾಗ್ದಾನ







ಮೈಸೂರು, ಅ. 8(ಆರ್‌ಕೆ)– ನವೆಂಬರ್ 30 ರೊಳಗೆ ಮೈಸೂರಿನ ರಿಂಗ್ ರಸ್ತೆ ಬೀದಿ ದೀಪ ಅಳವಡಿಸುವ ಯೋಜನೆಯನ್ನು ಪೂರ್ಣಗೊಳಿಸುವುದಾಗಿ ಸಂಸದ ಪ್ರತಾಪ್ ಸಿಂಹ ವಾಗ್ದಾನ ಮಾಡಿದ್ದಾರೆ.

'ಮೈಸೂರು ಮಿತ್ರ'ನಲ್ಲಿ ಇಂದು ಮೈಸೂರು ನಗರ ಜಗಮಗಿಸುತ್ತಿರಲೂ... ರಿಂಗ್ ರಸ್ತೆಯಲ್ಲಿ ನೀಗದೂ ಕಗ್ಗತ್ತಲು' ಶೀರ್ಷಿಕೆಯಡಿ ಪ್ರಕಟವಾದ ಸುದ್ದಿಗೆ ಪ್ರತಿಕ್ರಿಯೆ ನೀಡಿರುವ ಅವರು, ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ. ಸೋಮಣ್ಣ, ಈಗಿನ ಉಸ್ತುವಾರಿ ಎಸ್.ಟಿ.ಸೋಮಶೇಖರ್, ರಿಂಗ್ ರಸ್ತೆ ದೀಪಗಳಿಗೆ ಎಲ್‌ಇಡಿ ಬಲ್ಬ್ ಅಳವಡಿಸಲು ಕ್ರಮ ಕೈಗೊಂಡಿದ್ದಾರೆ. 42.5 ಕಿ.ಮೀ. ಉದ್ದದ ರಿಂಗ್ ರಸ್ತೆಯುದ್ದಕ್ಕೂ ಗುಂಡಿ ತೆಗೆದು ಅಂಡರ್ ಗ್ರೌಂಡ್ ಕೇಬಲ್ ಹಾಕಿ, ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲು ಮುಡಾದಿಂದ 12 ಕೋಟಿ ರೂ.ಗಳನ್ನು ಮಂಜೂರು ಮಾಡಿಸಲಾಗಿದೆ ಎಂದರು. ಮೈಸೂರು ಮಹಾನಗರ ಪಾಲಿಕೆಯು ಕಾಮಗಾರಿ ನಡೆಸಿ ಚೆಸ್ಕಾಂಗೆ ಪ್ರತೀ ತಿಂಗಳೂ ರಿಂಗ್ ರಸ್ತೆ ದೀಪಗಳ ವಿದ್ಯುತ್ ಬಿಲ್ ಪಾವತಿಸುವುದರೊಂದಿಗೆ ನಿರ್ವಹಣೆ ಮಾಡುವುದೆಂದು ನಿರ್ಧರಿಸ ಲಾಗಿತ್ತು. ಅದರಂತೆ ಟೆಂಡರ್ ಕರೆದಾಗ ಒಬ್ಬರೇ ಪಾಲ್ಗೊಂಡಿದ್ದರು. ಮತ್ತೊಮ್ಮೆ ಟೆಂಡರ್ ಕರೆದಾಗಲೂ ಒಬ್ಬರೇ ಪಾಲ್ಗೊಂಡಿದ್ದರಿಂದ ಪಾಲಿಕೆ ಅಧಿಕಾರಿಗಳು ಅದೇ ವ್ಯಕ್ತಿಗೆ ಕಾಮಗಾರಿಯನ್ನು ಒಪ್ಪಿಸಿದ್ದಾರೆ ಎಂದು ಪ್ರತಾಪ್ ಸಿಂಹ ತಿಳಿಸಿದರು. ಈಗಾಗಲೇ ಅಂಡರ್ ಗ್ರೌಂಡ್ ಕೇಬಲ್ ಅಳವಡಿಸಲಾಗಿದೆ. ಹಾಳಾಗಿರುವ ಕಂಬಗಳನ್ನು ಸರಿಪಡಿಸಿ, ಎಲ್‌ಇಡಿ ಬಲ್ಬ್ ಅಳವಡಿಸುವ ಕೆಲಸ ಶೀಘ್ರದಲ್ಲೇ ಆರಂಭವಾಗಲಿದ್ದು, ನವೆಂಬರ್ 30 ರೊಳಗೆ ದೀಪಗಳನ್ನು ಬೆಳಗಿಸುತ್ತೇವೆ ಎಂದು ಅವರು ಇದೇ ಸಂದರ್ಭ ಭರವಸೆ ನೀಡಿದರು.

ನ.10ಕ್ಕೆ ಪ್ರಧಾನಿ ಮೋದಿಯಿಂದ ಕೆಂಪೇಗೌಡ ಪ್ರತಿಮೆ ಲೋಕಾರ್ಪಣೆ



ದೇವನಹಳ್ಳಿ, ಅ.8– ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಸ್ಥಾಪಿಸಿರುವ 108 ಅಡಿ ಎತ್ತರದ ಕೆಂಪೇಗೌಡ ಪ್ರತಿಮೆ ಅನಾವರಣ ಕಾರ್ಯಕ್ರಮ ನವೆಂಬರ್ 10ರಂದು ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿಯವರು ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ಈ ವೇಳೆ ಅವರು ಬೃಹತ್ ಸಾರ್ವಜನಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಲಿದ್ದಾರೆ.

ಚುನಾವಣೆಯಲ್ಲಿ ಗೆದ್ದ ನಂತರವೇ ಮುಖ್ಯಮಂತ್ರಿ ಬಗ್ಗೆ ನಿರ್ಧಾರ


- ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ಪಷ್ಟನೆ
- ಭಾರತ ಒಗ್ಗೂಡಿಸುವುದು ಯಾತ್ರೆಯ ಉದ್ದೇಶವೇ ಹೊರತು ಚುನಾವಣೆ ಗೆಲ್ಲುವುದಲ್ಲ...



ತುಮಕೂರು, ಅ.8– ರಾಜ್ಯದಲ್ಲಿ ಮುಂದಿನ ವರ್ಷ ನಮ್ಮದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಶ್ವಾಸ ವ್ಯಕ್ತಪಡಿಸಿದರು. ಭಾರತ ಐಕ್ಯತಾ ಯಾತ್ರೆ ಶನಿವಾರ ಜಿಲ್ಲೆ ಪ್ರವೇಶಿಸಿತು. ತುರುವೇಕೆರೆ ತಾಲೂಕಿನ ಅರಳೀಕೆರೆಪಾಳ್ಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಗಾಂಧಿ ಮಾತನಾಡಿದರು.


ರಾಜ್ಯದ ನಾಯಕರ ನಡುವೆ ಯಾವುದೇ ತಿಕ್ಕಾಟ, ಭಿನ್ನಮತವಿಲ್ಲ. ನಮ್ಮದು ಸರ್ವಾಧಿಕಾರಿ ಮನಸ್ಥಿತಿಯ ಪಕ್ಷವಲ್ಲ. ಎಲ್ಲರ ಭಾವನೆ, ಅಭಿಪ್ರಾಯಗಳಿಗೆ ಮನ್ನಣೆ ಇದೆ. ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಎಲ್ಲಾ ನಾಯಕರು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ಗೆದ್ದ ನಂತರ ಪಕ್ಷದ ವೇದಿಕೆಯಲ್ಲಿ ಮುಖ್ಯ ಮಂತ್ರಿ ಯಾರಾಗಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ. ಸಮರ್ಥರೊಬ್ಬರು ಮುಖ್ಯಮಂತ್ರಿ ಆಗುತ್ತಾರೆ ಎಂದು ▶ 6ನೇ ಪುಟಕ್ಕೆ

ಹಾಲಿ ಮೀಸಲಾತಿ ಪ್ರಮಾಣ ಹೆಚ್ಚಳದಿಂದ ಚುನಾವಣೆಯಲ್ಲಿ
ಯಾವ ಪಕ್ಷಕ್ಕೂ ಅನುಕೂಲ ಆಗಲ್ಲ



ಮೈಸೂರು, ಅ. 8(ಆರ್‌ಕೆ)–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಿರುವುದರಿಂದ ಯಾವ ಪಕ್ಷಕ್ಕೂ ಚುನಾವಣೆಯಲ್ಲಿ ಅನುಕೂಲ ಆಗಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್‌ನಲ್ಲಿ ಮಾಧ್ಯಮಗಳಿಗೆ ಇಂದು ಪ್ರತಿಕ್ರಿಯೆ ನೀಡಿದ ಅವರು, ಹಲವು ವರ್ಷಗಳ ಕಾಲ ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳು ಸರ್ಕಾರದ ಸೌಲಭ್ಯಗಳಿಂದ ವಂಚಿತವಾಗಿದ್ದವು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮೀಸಲಾತಿ ದೊರಕಿಸಿಕೊಟ್ಟಿದ್ದರಿಂದಾಗಿ ಎಂಎಲ್‌ಎ, ಎಂಪಿಗಳು ಮೀಸಲಾತಿ ಅವಕಾಶ ಪಡೆದು ▶ 9ನೇ ಪುಟಕ್ಕೆ

ಜೆಡಿಎಸ್‌ಗೆ ಜನರೇ ಶಕ್ತಿ ಕೊಡಬೇಕು



ಬೆಂಗಳೂರು: ಜೆಡಿಎಸ್ ಪಕ್ಷ ಉಳಿಸಲು ಜನರು ಶಕ್ತಿ ಕೊಡಬೇಕು ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಹೇಳಿದ್ದಾರೆ. ಬಸವನಗುಡಿ ಮೈದಾನದಲ್ಲಿಂದು ನಡೆದ ಜೆಡಿಎಸ್ ಸಮಾವೇಶದಲ್ಲಿ ಮಾತನಾಡಿದ ಅವರು, ನನಗೆ ಇನ್ನು ಹೋರಾಟ ಮಾಡುವ ಶಕ್ತಿ ಇದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡುತ್ತೇನೆ, ಎಲ್ಲರೂ ಸೇರಿ ಪಕ್ಷ ಉಳಿಸಬೇಕಿದೆ. ಈ ನಿಟ್ಟಿನಲ್ಲಿ ಜನರು ಪಕ್ಷಕ್ಕೆ ಶಕ್ತಿ ನೀಡಿ ಎಂದು ಪುನರುಚ್ಚರಿಸಿದರು. ಮುಂಬರುವ ಕಾರ್ಯಕಾರಿಣಿ ಸಭೆಯಲ್ಲೂ ಭಾಗಿಯಾಗ್ತೀನಿ. ಯಾವುದೇ ಒಂದು ಸಮಾಜಕ್ಕೆ ನೋವಾಗಲು ಬಿಡುವುದಿಲ್ಲ, ಜೊತೆಗೆ ಹೇಳಿದ ಮೇಲೆ ನಾವು ಕಾರ್ಯಗತ ಮಾಡಲೇಬೇಕು, ಮುಸ್ಲಿಂರಿಗೆ ▶ 9ನೇ ಪುಟಕ್ಕೆ

ಸತತ 241 ದಿನಗಳ ಹೋರಾಟ ಕೈಬಿಟ್ಟು ಮುಖ್ಯಮಂತ್ರಿ ಅಭಿನಂದಿಸಿದ ವಾಲ್ಮೀಕಿ ಶ್ರೀಗಳು



ಬೆಂಗಳೂರು, ಅ.8– ಎಸ್‌ಸಿ, ಎಸ್‌ಟಿಗೆ ಮೀಸಲಾತಿ ಹೆಚ್ಚಳ ಮಾಡಲು ರಾಜ್ಯ ಸಚಿವ ಸಂಪುಟ ಗ್ರೀನ್ ಸಿಗ್ನಲ್ ನೀಡಿದೆ. ಈ ಹಿನ್ನೆಲೆಯಲ್ಲಿ ಬರೋಬ್ಬರಿ 241 ದಿನಗಳಿಂದ ಪ್ರತಿಭಟನೆ ಮಾಡುತ್ತಿದ್ದ ವಾಲ್ಮೀಕಿ ಸ್ವಾಮೀಜಿಗಳು ಧರಣಿಯನ್ನು ಕೈಬಿಟ್ಟಿದ್ದಾರೆ. ನಂತರ ವಾಲ್ಮೀಕಿ ಸಮಾಜದ ಮುಖಂಡರು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನ ಭೇಟಿಯಾಗಿ ಅಭಿನಂದಿಸಿದರು. ಈ ವೇಳೆ ಮುಖ್ಯಮಂತ್ರಿಗಳಿಗೆ ಸ್ವಾಮೀಜಿ ಸಿಹಿ ತಿನ್ನಿಸಿ, ಖುಷಿಪಟ್ಟರು. ಈ ವೇಳೆ ಮಾತನಾಡಿದ ಸ್ವಾಮೀಜಿ, ಮೀಸಲಾತಿ ಹೆಚ್ಚಿಸಿರುವುದಕ್ಕೆ ಸಮುದಾಯದ ಒಂದೂವರೆ ▶ 9ನೇ ಪುಟಕ್ಕೆ

ಮೈಸೂರಿನ ರಸ್ತೆ ಕಾಮಗಾರಿ 3 ದಿನದಲ್ಲಿ ಆರಂಭ
ದಸರಾ ಸಂದರ್ಭ 15 ಕೋಟಿ ರೂ. ಕೆಲಸ ಮುಗಿದಿದೆ; ಉಳಿದ 250 ಕೋಟಿ ಕಾಮಗಾರಿಗಳ 2 ತಿಂಗಳೊಳಗೆ ಪೂರ್ಣಗೊಳಿಸುವ ಉದ್ದೇಶ



ಮೈಸೂರು, ಅ.8(ಆರ್‌ಕೆ)–ಮೈಸೂರಿನ ರಸ್ತೆಗಳ ಗುಂಡಿ ಮುಚ್ಚಿ, ಡಾಂಬರೀಕರಣ ಮಾಡುವ 250 ಕೋಟಿ ರೂ.ಗಳ ಕಾಮಗಾರಿಗೆ ಮರು ಚಾಲನೆ ನೀಡಲು ಮೈಸೂರು ಮಹಾನಗರ ಪಾಲಿಕೆ ಸಿದ್ಧತೆ ಮಾಡಿಕೊಂಡಿದೆ. ದಸರಾ ಮಹೋತ್ಸವಕ್ಕೆ ಪ್ರಮುಖ ರಸ್ತೆ ಸೇರಿದಂತೆ ಮೈಸೂರಿನ ಎಲ್ಲಾ ವಾರ್ಡ್‌ಗಳ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಟೆಂಡರ್ ಮಾಡಲಾಗಿತ್ತಾದರೂ, ಮಳೆಯಿಂದಾಗಿ ನಗರದ ಹೃದಯ ಭಾಗದ ಪ್ರಮುಖ ರಸ್ತೆಗಳನ್ನಷ್ಟೇ ಡಾಂಬರಿಕರಣ ಮಾಡಲು ಸಾಧ್ಯವಾಗಿತ್ತು. ಇದೀಗ ದಸರಾ ಮಹೋತ್ಸವ ಮುಗಿದಿದ್ದು, ಮಳೆಯೂ ಬಿಡುವು ನೀಡಿರುವುದರಿಂದ 3 ದಿನದೊಳಗಾಗಿ ಬಾಕಿ ಉಳಿದಿರುವ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ತಿಳಿಸಿದ್ದಾರೆ. ದಸರಾ ವೇಳೆ ನಾರಾಯಣ ಶಾಸ್ತ್ರಿ ರಸ್ತೆ, ಕುವೆಂಪು ನಗರದ ಉದಯ ರವಿ ರಸ್ತೆ, ಪಂಚಮಂತ್ರ ರಸ್ತೆ, ಕಾಂತರಾಜ ಅರಸ್ ರಸ್ತೆ, ಸಬರ್ಬನ್ ಬಸ್ ನಿಲ್ದಾಣದ ಎದುರಿನ ಬಿ.ಎನ್.ರಸ್ತೆ, ರಾಮಾನುಜ ರಸ್ತೆ ಸೇರಿದಂತೆ ಇನ್ನಿತರ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು 15 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ ಎಂದು ಅವರು ತಿಳಿಸಿದರು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರು ಸುಮಾರು 200 ಕೋಟಿ ರೂ., ಕೆ.ಆರ್.ಕ್ಷೇತ್ರದ ಶಾಸಕ ▶ 9ನೇ ಪುಟಕ್ಕೆ



"ಮಳೆ ಮತ್ತು ದಸರಾ ಮಹೋತ್ಸವದಿಂದಾಗಿ ರಸ್ತೆ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ಉಳಿದ ಎಲ್ಲಾ ರಸ್ತೆಗಳಿಗೂ ಡಾಂಬರ್ ಹಾಕುವ ಕೆಲಸವನ್ನು ಶೀಘ್ರ ಮತ್ತೆ ಆರಂಭಿಸುತ್ತೇವೆ. ಸೋಮವಾರ ಆಯುಕ್ತರ ಜೊತೆ ಪರಿಶೀಲನೆ ನಡೆಸಿ ಯಾವ ಯಾವ ರಸ್ತೆ ಗಳನ್ನು ಕೈಗೆತ್ತಿಕೊಳ್ಳ ಬೇಕೆಂಬುದನ್ನು ಗುರ್ತಿಸುತ್ತೇವೆ. ಕೆಲವೆಡೆ ಮಳೆ ನೀರು, ಚರಂಡಿ, ಉದ್ಯಾನ ವನಗಳ ಅಭಿವೃದ್ಧಿ ಕಾಮಗಾರಿ ಗಳಿಗೂ ಟೆಂಡರ್ ಮಾಡಲಾ ಗಿದೆ. ಒಟ್ಟಾರೆ ಇನ್ನೆರಡು ತಿಂಗ ಳೊಳಗಾಗಿ ಮೈಸೂರಿನ ಎಲ್ಲಾ ರಸ್ತೆಗಳನ್ನು ಡಾಂಬರೀ ಕರಣ ಮಾಡುತ್ತೇವೆ.

–ಶಿವಕುಮಾರ್, ಮೇಯರ್

ಈ ಬಾರಿಯ ದಸರಾ ಅದ್ಧೂರಿಯಾಗಿತ್ತು...! ಹಾಗೆಯೇ ಅಧ್ವಾನದಿಂದಲೂ ಕೂಡಿತ್ತು...!!

- ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತೀವ್ರ ಬೇಸರ
- ಲೋಪದೋಷಗಳ ಬಗ್ಗೆ ಶ್ವೇತಪತ್ರಕ್ಕೆ ಆಗ್ರಹ
- ಜನರ ಆಕರ್ಷಿಸುವ ಯಾವೊಂದು ಕಾರ್ಯಕ್ರಮವಿಲ್ಲ
- ಸ್ಥಳೀಯ ನಾಯಕರ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ
- ದಸರಾ ಅರ್ಥಪೂರ್ಣ ಆಚರಣೆಗೆ ಪ್ರಾಧಿಕಾರ ರಚನೆ ಆಗಬೇಕು
- ದಸರಾ ಕವಿಗೋಷ್ಠಿ ಸತ್ತ ಗೋಷ್ಠಿಯಾಗಿತ್ತು!





ಮೈಸೂರು,ಅ.8(ಎಂಟಿವೈ)– ಈ ಬಾರಿ ನಾಡಹಬ್ಬ ದಸರಾ ಅದ್ಧೂರಿ ಯಾಗಿಯೂ ಇತ್ತು. ಅಧ್ವಾನವೂ ಆಗಿತ್ತು. ಪೂರ್ಣ ಪ್ರಮಾಣದಲ್ಲಿ ಪುನರ್ ವಿಮರ್ಶೆಗೆ ಒಳಪಡಿಸುವುದರೊಂದಿಗೆ ಆಗಿರುವ ಲೋಪದೋಷಗಳ ಕುರಿತಂತೆಯೂ ಶ್ವೇತ ಪತ್ರ ಹೊರಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಆಗ್ರಹಿಸಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಅದ್ಧೂರಿಯಾಗಿ ನೆರವೇರಿದೆ. ಅಪಾರ ಸಂಖ್ಯೆಯ ಜನರು ಜಂಬೂಸವಾರಿ ವೀಕ್ಷಿಸಿದ್ದಾರೆ. ಲಕ್ಷಾಂತರ ಜನರನ್ನು ಆಕರ್ಷಿಸಿದ್ದು, ದಸರಾದ ಯಾವುದೇ ಕಾರ್ಯಕ್ರಮವಲ್ಲ. ಎರಡು ವರ್ಷದ ನಂತರ ನಡೆದ ಜಂಬೂಸವಾರಿಯನ್ನು ಕಣ್ತುಂಬಿಕೊಳ್ಳಲು ಜನ ಸ್ವಯಂ ಪ್ರೇರಣೆಯಿಂದ ಆಗಮಿಸಿದ್ದಾರೆ. ಜನರನ್ನು ಆಕರ್ಷಿಸುವ ಯಾವ ಕಾರ್ಯಕ್ರಮವೂ ಈ ಬಾರಿ ನಡೆದಿಲ್ಲ ಎಂದು ವಿಷಾಧಿಸಿದರು.

ದಸರಾ ಲೆಕ್ಕ ಕೊಡುವುದಕ್ಕೆ ಮಾತ್ರ ಸೀಮಿತವಾಗಬಾರದು. 2022ನೇ ಸಾಲಿನ ದಸರಾ ಮಹೋತ್ಸವವನ್ನು ಸಂಪೂರ್ಣವಾಗಿ ಪರಾಮರ್ಶಿಸಬೇಕು. ಎಲ್ಲಿ ಲೋಪವಾಯಿತು ಎಂದು ಗುರುತಿಸಬೇಕು. ಪುನರ್ ವಿಮರ್ಶೆ ಮಾಡಿದಾಗ ಆಗಿರುವ ಲೋಪಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಮುಂದಿನ ದಸರಾಗಳಲ್ಲಿ ಅಂತಹ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಲು ಸಾಧ್ಯವಾಗಲಿದೆ. ಆಗಿರುವ ಲೋಪವನ್ನು ಮುಂದಿನ ದಿನಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಲೇಬೇಕು ಎಂದರು.

ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ: ದಸರಾ ಮಹೋತ್ಸವದಲ್ಲಿ ಮೈಸೂರಿನ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ನಾನು 5 ಬಾರಿ ದಸರಾ ಮಹೋತ್ಸವ ನಡೆಸಿದ್ದೇನೆ. ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ತನ್ವೀರ್ ಸೇಠ್ ಸಹ ದಸರಾ ನಡೆಸಿದ್ದಾರೆ. ಆದರೆ, ಈ ಬಾರಿ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಶಾಸಕ ಎಸ್.ಎ.ರಾಮದಾಸ್ ದಸರಾ ಕಾರ್ಯಕ್ರಮದಿಂದ ದೂರವುಳಿದರು. ಸಂಸದ ಪ್ರತಾಪಸಿಂಹ ಒಂದೆರಡು ▶ 6ನೇ ಪುಟಕ್ಕೆ

ಜಂಬೂಸವಾರಿಯಲ್ಲೂ ಕಳ್ಳರ ಕೈಚಳಕ: ಗೃಹಿಣಿಯರ ಸರ, ಪರ್ಸ್ ಕಳವು

ಮೈಸೂರು, ಅ. 8– ದಸರಾ ಜಂಬೂ ಸವಾರಿ ಹಾಗೂ ಆಯುಧ ಪೂಜೆ ವೇಳೆ ಜನಸಂದಣಿ ನಡುವೆ ಖದೀಮರು ಹಲವೆಡೆ ಕೈಚಳಕ ತೋರಿದ್ದು, ವಿವಿಧ ಠಾಣೆಗಳಲ್ಲಿ ಒಟ್ಟು 4 ಪ್ರಕರಣಗಳು ದಾಖಲಾಗಿವೆ.



ಅರಮನೆ: ಕೊಪ್ಪಳದಿಂದ ಮೈಸೂರಿಗೆ ಬಂದಿದ್ದ ಅನ್ನದಾನೇಶ್ವರಿ(45) ಎಂಬುವರು ಆಯುಧ ಪೂಜೆ ದಿನವಾದ ಅ.4ರಂದು ಅರಮನೆಗೆ ಹೋಗಿ ಹಿಂತಿರುಗುತ್ತಿದ್ದ ವೇಳೆ ವರಹಾ ಗೇಟ್‌ನಲ್ಲಿ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಚಿಕ್ಕ ಪರ್ಸ್ ಅನ್ನು ಖದೀಮರು ಎಗರಿಸಿದ್ದು, 70 ಸಾವಿರ ನಗದು, ಆಧಾರ್ ಕಾರ್ಡ್, ವೋಟರ್ ಐಡಿ, ಮನೆಯ ಕೀಲಿ ಸೇರಿದಂತೆ ಕೆಲವು ದಾಖಲೆಗಳು ಕಳುವಾಗಿದ್ದು, ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಂಬೂಸವಾರಿ ವೀಕ್ಷಿಸಲು ಪತಿಯೊಂದಿಗೆ ಮೈಸೂರಿಗೆ ಬಂದಿದ್ದ ಮದ್ದೂರು ತಾಲೂಕು ದೊಡ್ಡಅರಸಿನಕೆರೆ ಗ್ರಾಮದ ಗೃಹಿಣಿ ಶಾರದಮ್ಮ ಅವರು ಸಂಜೆ ಊರಿಗೆ ವಾಪಸ್ಸಾಗಲು ಸಾರಿಗೆ ಬಸ್ ನಿಲ್ದಾಣಕ್ಕೆ ಬಂದು ಬಸ್ ಹತ್ತುತ್ತಿದ್ದ ವೇಳೆ ಖದೀಮರು ಮಾಂಗಲ್ಯ ಸರ ತುಂಡರಿಸಿದ್ದಾರೆ. ಅದನ್ನು ಗಮನಿಸಿದ ಅವರು, ಸರ ತೆಗೆದು ತಮ್ಮ ಬ್ಯಾಗ್‌ನಲ್ಲಿ ಇಟ್ಟುಕೊಂಡಿದ್ದಾರೆ. ಮತ್ತೆ ಬೇರೆ ಬಸ್ ಹತ್ತುವ ವೇಳೆ ಅವರ ಬ್ಯಾಗ್‌ನಲ್ಲಿದ್ದ ಅದೇ 40 ಗ್ರಾಂ ತೂಕದ ಮಾಂಗಲ್ಯ ಸರವನ್ನು ಖದೀಮರು ಎಗರಿಸಿದ್ದಾರೆ.

ಮೈಸೂರಿನ ವಸಂತನಗರ ನಿವಾಸಿ ರಾಜೇಶ್ವರಿ(60) ಅವರು ಮೈಸೂರಿನ ಬನ್ನಿ ಮಂಟಪದ ಬಳಿ ಶಿವಳ್ಳಿ ರೆಸ್ಟೋರೆಂಟ್ ಮುಂಭಾಗ ಜಂಬೂ ಸವಾರಿ ವೀಕ್ಷಿಸಲು ನಿಂತಿದ್ದಾಗ ಜನಜಂಗುಳಿ ನಡುವೆ ಅವರ 31 ಗ್ರಾಂ ತೂಕದ ಮಾಂಗಲ್ಯ ಸರವನ್ನು ಖದೀಮರು ಅಪಹರಿಸಿದ್ದಾರೆ. ಇದೇ ರಸ್ತೆಯ ಬ್ಯಾಂಕ್ ಆಫ್ ಬರೋಡಾ ಮುಂಭಾಗ ನಿಂತು ಜಂಬೂಸವಾರಿ ವೀಕ್ಷಿಸುತ್ತಿದ್ದ ಸಿದ್ದಲಿಂಗಾಪುರ ಗ್ರಾಮದ ಗೃಹಿಣಿ ರಾಜಮ್ಮ (44) ಎಂಬುವರ ಕತ್ತಿನಲ್ಲಿದ್ದ 35 ಗ್ರಾಂ ತೂಕದ ಮಾಂಗಲ್ಯ ಸರವನ್ನು ಸಹ ಖದೀಮರು ಕಸಿದಿದ್ದಾರೆ. ಇವೆರಡೂ ಪ್ರಕರಣಗಳು ನರಸಿಂಹರಾಜ ಠಾಣೆಯಲ್ಲಿ ದಾಖಲಾಗಿವೆ.

ಚಾಮುಂಡೇಶ್ವರಿ ರೈಲ್ವೇ ಲೇಔಟ್‌ನಲ್ಲಿ ಮನೆ ಕಳವು

ಮೈಸೂರು,ಅ.8(ಆರ್‌ಕೆ)–ಮನೆಯ ಹಿಂಬಾಗಿಲು ಮೀಟಿ ನಗದು, ಟಿವಿ ಹಾಗೂ ಬೆಳ್ಳಿ ಆಭರಣಗಳನ್ನು ಜೆ.ಕೆ.ಟೈಯರ್ಸ್ ಎದುರಿನ ಚಾಮುಂಡೇಶ್ವರಿ ರೈಲ್ವೇ ಬಡಾವಣೆಯಲ್ಲಿ ಕಳವು ಮಾಡಲಾಗಿದೆ. ಬಡಾವಣೆಯ ನಿವಾಸಿ, ರೈಲ್ವೇ ನೌಕರ ಗುರುಲಿಂಗು ಅವರ ಮನೆಯ ಹಿಂದಿನ ಬಾಗಿಲು ಮೀಟಿ ಒಳಗೆ ನುಗ್ಗಿದ ಕಳ್ಳರು, 1.5 ಲಕ್ಷ ರೂ. ಮೌಲ್ಯದ ಎಲ್‌ಇಡಿ ಟಿವಿ, ಸುಮಾರು 30,000 ರೂ. ನಗದು ಹಾಗೂ ಬೆಳ್ಳಿ ಪದಾರ್ಥಗಳನ್ನು ದೋಚಿದ್ದಾರೆ. ಮಗಳ ಮನೆಯ ಗೃಹ ಪ್ರವೇಶಕ್ಕೆಂದು ಶುಕ್ರವಾರ ಕುಟುಂಬ ಸಮೇತ ಒಂಟಿಕೊಪ್ಪಲಿಗೆ ಹೋಗಿದ್ದ ಗುರುಲಿಂಗು ಅವರು, ರಾತ್ರಿ ಅಲ್ಲಿಯೇ ತಂಗಿದ್ದು, ಶನಿವಾರ ಸಂಜೆ ವಾಪಸ್ಸಾದಾಗ ಮನೆಯಲ್ಲಿ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಮೇಟಗಳ್ಳಿ ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಳೆದ ವರ್ಷ ದಿಂದೀಚೆಗೆ ಆ ಬಡಾವಣೆಯಲ್ಲಿ 6 ಮನೆ ಕಳ್ಳತನಗಳಾಗಿವೆ ಎಂದು ನಿವಾಸಿಗಳು ದೂರಿದ್ದಾರೆ.



ಇತ್ತೀಚೆಗೆ ನಿಧನರಾದ ಕನ್ನಡ ಸಾರಸ್ವತ ಲೋಕದ ಮೂರು ತಲೆಮಾರಿನ ಇತಿಹಾಸವುಳ್ಳ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಾಶನ ಸಂಸ್ಥೆಯ ಪ್ರಕಾಶಕರಾದ ಟಿ.ಎಸ್. ಛಾಯಾಪತಿ ಅವರಿಗೆ ಗೋಕುಲಂನ ಕೆಂಪೀರೇಗೌಡರ ಉದ್ಯಾನವನದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಚಾಮರಾಜ ಬಿಜೆಪಿ ಉಪಾಧ್ಯಕ್ಷ ಮೃತ್ಯುಂಜಯ, ಸಿದ್ದರಾಮಣ್ಣ, ಕುಮಾರ್, ಬಿ.ಕುಮಾರ್, ಸಂತೋಷ್, ಕಿಟ್ಟಿ ಉಪಸ್ಥಿತರಿದ್ದರು.

ನಾಳೆ ಆಯಿಷ್‌ನಲ್ಲಿ ಸಾಲುಮರದ ತಿಮ್ಮಕ್ಕರೊಂದಿಗೆ ಸಂವಾದ



ಮೈಸೂರು, ಅ.8(ಆರ್‌ಕೆ)–ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (AIISH)ಯಲ್ಲಿ ಅ.10ರಂದು ಬೆಳಗ್ಗೆ 10 ಗಂಟೆಗೆ ಪದ್ಮಶ್ರೀ ಡಾ.ಸಾಲುಮರದ ತಿಮ್ಮಕ್ಕ ಅವರೊಂದಿಗೆ ಸಂವಾದ ಆಯೋಜಿಸಲಾಗಿದೆ. ಪರಿಸರ ಸಂರಕ್ಷಣೆ ಕುರಿತಂತೆ ಅವರು ಸಂಸ್ಥೆ ವಿದ್ಯಾರ್ಥಿಗಳು ಹಾಗೂ ವೈದ್ಯರೊಂದಿಗೆ ಸಂವಾದ ನಡೆಸುವರು.

ನ.16, 17ಕ್ಕೆ ಮೈಸೂರಲ್ಲಿ ಹಿರಿಯ ನಾಗರಿಕರ ರಾಷ್ಟ್ರೀಯ ಸಮ್ಮೇಳನ

ಮೈಸೂರು,ಅ.8(ಪಿಎಂ)–ಅಖಿಲ ಭಾರತ ಹಿರಿಯ ನಾಗರಿಕರ ಒಕ್ಕೂಟದ 20ನೇ ರಾಷ್ಟ್ರೀಯ ಸಮ್ಮೇಳನ ನ.16 ಮತ್ತು 17ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಡಿ.ರವೀಂದ್ರನಾಥ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಹಿರಿಯ ನಾಗರಿಕರ ಸಂಘ, ರಾಜ್ಯ ವಿಶ್ರಾಂತ ಉದ್ಯೋಗಿಗಳ ಸಂಘದ ಸಹಯೋಗದೊಂದಿಗೆ ಈ ಸಮ್ಮೇಳನ ಆಯೋಜಿಸಲಾಗಿದೆ. ನ.16ರಂದು ಬೆಳಗ್ಗೆ 9ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದರು. ಹಿರಿಯ ನಾಗರಿಕರಿಗೆ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳು ಹಾಗೂ ಕುಂದು ಕೊರತೆಗಳ ಮೇಲೆ ಸಮ್ಮೇಳನ ಬೆಳಕು ಚೆಲ್ಲಲಿದೆ. ಬೆಳಗ್ಗೆ–ಮಧ್ಯಾಹ್ನ ಸಭೆ ನಡೆಯಲಿದ್ದು, ಸಂಜೆ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದ ಪ್ರಯುಕ್ತ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಗುತ್ತಿದ್ದು, ಆಸಕ್ತರು ಸಂಚಿಕೆಗೆ ಜಾಹೀರಾತು ನೀಡಬಹುದು ಎಂದು ಹೇಳಿದರು.

ಸಮ್ಮೇಳನದಲ್ಲಿ ಭಾಗವಹಿಸಲಿಚ್ಛಿಸುವವರು 2 ಸಾವಿರ ರೂ. ಶುಲ್ಕ ಪಾವತಿಸಿ ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ ಮೊ.ಸಂ. 94486 01155 ಅನ್ನು ಸಂಪರ್ಕಿಸಬಹುದು ಎಂದರು. ರಾಜ್ಯ ಹಿರಿಯ ನಾಗರಿಕರ ಸಂಘ ಮೈಸೂರು ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಬಿ.ಆರ್.ಉಮಾಕಾಂತ್, ಹೆಚ್.ಎಸ್.ಲಕ್ಷ್ಮೀಗೌಡ, ಪ್ರಧಾನ ಕಾರ್ಯದರ್ಶಿ ಆರ್.ಜಯರಾಮು, ಖಜಾಂಚಿ ಆರ್.ನಾಗೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

'ವಾಸಂತಿ ನಲಿದಾಗ' ಶೀಘ್ರ ತೆರೆಗೆ

ಮೈಸೂರು,ಅ.8(ಪಿಎಂ)– ಜೇನುಗೂಡು ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣಗೊಂಡ 'ವಾಸಂತಿ ನಲಿದಾಗ' ಕನ್ನಡ ಸಿನಿಮಾ ಅ.14ರ ನಂತರದಲ್ಲಿ ರಾಜ್ಯಾದ್ಯಂತ 80ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆ ಕಾಣಲಿದೆ ಎಂದು ಸಿನಿಮಾದ ನಿರ್ದೇಶಕ ರವೀಂದ್ರ ವಂಶಿ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಜನರ ಪ್ರೀತಿ–ಪ್ರೇಮ, ತಂದೆ–ತಾಯಿಯ ಆದರ್ಶಗಳನ್ನು ಒಳಗೊಂಡ ಮನಮುಟ್ಟುವ ಕಥಾಧಾರಿತ ಸಿನಿಮಾ ಇದಾಗಿದೆ. ಕುಟುಂಬ ಸಮೇತ ನೋಡಬಹುದಾದ ಮನರಂಜನೆಯನ್ನು ಈ ಸಿನಿಮಾ ಒಳಗೊಂಡಿದೆ ಎಂದರು. ಸಿನಿಮಾದ ನಾಯಕ ನಟ ರೋಹಿತ್ ಶ್ರೀಧರ್, ನಟಿ ಜೀವಿತ ವಶಿಷ್ಠ, ಧನಂಜಯ್ ಗೋಷ್ಠಿಯಲ್ಲಿದ್ದರು.

3.0 ಸಿನಿಮಾ ಅ.14ರಂದು ತೆರೆಗೆ

ಮೈಸೂರು,ಅ.8(ಪಿಎಂ)– ಮೂವರು ಯುವಕರು ಹಾಗೂ ಯುವತಿಯೊಬ್ಬಳ ಸುತ್ತ ನಡೆಯುವ ಕ್ರೈಂ, ಥ್ರಿಲ್ಲರ್ ಕಥಾನಕ ಹೊಂದಿರುವ ಕನ್ನಡ ಸಿನಿಮಾ '3.0' ಅ.14ರಂದು ರಾಜ್ಯಾದ್ಯಂತ 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ ಎಂದು ಸಿನಿಮಾದ ನಿರ್ದೇಶಕ ಇಂದ್ರಜಿತ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿನಿಮಾ ನಾಯಕಿ ಕೊಲೆಯ ಸುತ್ತ ಕಥೆ ಸಾಗುತ್ತದೆ. ಚಿತ್ರವು ಕೊನೆವರೆಗೆ ಪ್ರೇಕ್ಷಕರಲ್ಲಿ ಕೌತುಕ ಮೂಡಿಸಲಿದೆ ಎಂದರು. ಚಿತ್ರದ ನಾಯಕರಾದ ಶಶಿಕಿರಣ್, ಶಿವರಾಜ್, ಲೋಹಿತ್ ಸುದ್ದಿಗೋಷ್ಠಿಯಲ್ಲಿದ್ದರು.



ಮೀಸಲಾತಿ ಹೆಚ್ಚಳಕ್ಕೆ ಹೋರಾಟ ಆರಂಭಿಸಿದ ರಾಜಕೀಯ ಮುಖಂಡರೇ ಈಗ ಇಕ್ಕಟ್ಟಿನ ಪರಿಸ್ಥಿತಿಗೀಡಾಗಿದ್ದಾರೆ...!

ಮುಂದೆ ಏನಾಗುತ್ತೋ....: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭವಿಷ್ಯ

ಮೈಸೂರು,ಅ.8(ಎಂಟಿವೈ)–ಮೀಸಲಾತಿ ಹೆಚ್ಚಳ ಹೋರಾಟವನ್ನು ರಾಜಕೀಯ ಮುಖಂಡರೇ ಆರಂಭಿಸಿ, ಇದೀಗ ತಮ್ಮ ಕುತ್ತಿಗೆಗೆ ತಂದುಕೊಂಡಿದ್ದಾರೆ. ಮುಂದೆ ಏನಾಗುತ್ತದೋ... ಕಾದು ನೋಡೋಣ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳದಿಂದ ರಾಜ್ಯ ಬಿಜೆಪಿ ಸರ್ಕಾರಕ್ಕೆ ರಾಜಕೀಯ ಲಾಭವೇನು ಆಗುವುದಿಲ್ಲ. ಮುಂದೆ ಇದು ಅವರಿಗೆ ತಿರುಗು ಬಾಣವಾಗಲಿದೆ. ಮೀಸಲಾತಿ ಹೋರಾಟವನ್ನು ರಾಜಕೀಯ ಮುಖಂಡರೇ ಪ್ರಾರಂಭಿಸಿ ಇದೀಗ ತಮ್ಮ ಕುತ್ತಿಗೆಗೆ ತಂದುಕೊಂಡಿದ್ದಾರೆ. ಮೀಸಲಾತಿ ಹೆಚ್ಚಳ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆಯಾಗಬೇಕು. ತರಾತುರಿಯಲ್ಲಿ ನಿರ್ಧಾರ ಕೈಗೊಳ್ಳುವುದು ಸರಿಯಲ್ಲ. ಸ್ವಾತಂತ್ರ್ಯ ಬಂದು ಏಳು ದಶಕ ಕಳೆದಿದೆ. ಈ ಸುದೀರ್ಘ ಅವಧಿಯಲ್ಲಿ ಯಾವ ಸಮುದಾಯ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿದೆ ಎಂಬುದನ್ನು ಗಮನಿಸಿ ನಿರ್ಧಾರ ಕೈಗೊಳ್ಳಬೇಕಾಗಿತ್ತು ಎಂದು ಹೇಳಿದರು.

ಚುನಾವಣೆ ಸಂದರ್ಭದಲ್ಲಿ ನಿರ್ಧಾರ ಸರಿಯೇ: ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಸುದೀರ್ಘ ವರದಿಯನ್ನು ಎರಡೂ ವರ್ಷದ ಹಿಂದೆಯೇ ನೀಡಿದ್ದರು. ಆದರೆ, ಮುಂಬರುವ ಚುನಾವಣೆಗೆ ಇನ್ನು 6 ತಿಂಗಳು ಬಾಕಿ ಇರುವಾಗಲೇ ತರಾತುರಿಯಲ್ಲಿ ವರದಿ ಜಾರಿಗೆ ತರುವ ಅವಶ್ಯಕತೆ ಏನಿತ್ತು?. ಇದರ ಕ್ರೆಡಿಟ್ ಪಡೆಯುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಆದರೆ, ಇದರಿಂದ ಜನರನ್ನು ಸೆಳೆಯಲು ಸಾಧ್ಯವಿಲ್ಲ. ನಾಯಕ ಸಮುದಾಯವನ್ನು ಎಸ್ಟಿ ಪಟ್ಟಿಗೆ ಸೇರಿಸುವಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಮುಖ ಪಾತ್ರ ವಹಿಸಿದ್ದರು. ಆದರೆ, ಎಷ್ಟು ಜನರು ಅವರನ್ನು ನೆನಪಿಸಿಕೊಳ್ಳುತ್ತಾರೆ? ಹಾಗಾಗಿ ಸರ್ಕಾರದ ತೀರ್ಮಾನದಿಂದ ರಾಜಕೀಯ ಲಾಭ ದೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಹಿಂದಿ ಹೇರಿಕೆ: ಯುಪಿಎಸ್‌ಸಿ ಪರೀಕ್ಷೆಯನ್ನು ಎಲ್ಲ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡಲಾಗಿದೆ. ಆದರೆ, ಕೇಂದ್ರ ಸರ್ಕಾರ ಇದೀಗ 20 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಲು ಮುಂದಾಗಿದ್ದು, ಈ ನೇಮಕಾತಿ ಪರೀಕ್ಷೆ ಕೇವಲ ಹಿಂದಿ, ಇಂಗ್ಲಿಷ್ ಭಾಷೆಗೆ ಸೀಮಿತಗೊಳಿಸಲಾಗಿದೆ. ಈ ನಿಲುವಿನಿಂದ ಕನ್ನಡಿಗರಿಗೆ ಮಾತ್ರವಲ್ಲದೆ ಅನ್ಯ ಭಾಷಿಗರಿಗೆ ಅನ್ಯಾಯವಾಗುತ್ತಿದೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ನಮ್ಮ ಮೇಲೆ ನಿರಂತರವಾಗಿ ಹಿಂದಿ ಹೇರಿಕೆ ಮಾಡುತ್ತಲೇ ಇದೆ. ದೇಶದ ಹಲವಾರು ಭಾಷೆಗಳ ಇತಿಹಾಸವನ್ನು ನಾಶ ಮಾಡುವ ಹುನ್ನಾರವನ್ನು ಕೇಂದ್ರ ಸರ್ಕಾರ ನಡೆಸುತ್ತಿದೆ. ಈ ಹಿಂದೆ ಡಿಟಿಹೆಚ್ ರೀಚಾರ್ಜ್ ಅವಧಿ ಮುಗಿದರೆ ಕನ್ನಡದಲ್ಲಿ ಸೂಚನೆ ಬರುತ್ತಿತ್ತು ಆದರೆ, ಹಿಂದಿ ಹೇರಿಕೆಯ ಪರಿಣಾಮವಾಗಿ ಇದೀಗ ಡಿಟಿಹೆಚ್ ರೀಚಾರ್ಜ್ ಸೂಚನೆಯೂ ಹಿಂದಿಮಯವಾಗಿದೆ. ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ದೇಶವನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿದ್ದಾರೋ ತಿಳಿಯದಾಗಿದೆ. ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ದೇಶದ ಜನರ ಭಾವನೆಗಳಿಗೆ ಧಕ್ಕೆಯಾಗದ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಂಚರತ್ನ ರಥಯಾತ್ರೆ ರಾಜ್ಯದಲ್ಲಿ ಜೆಡಿಎಸ್ ಸಂಘಟಿಸುವ ನಿಟ್ಟಿನಲ್ಲಿ ನ.1ರಿಂದ ಪಂಚರತ್ನ ರಥಯಾತ್ರೆಯನ್ನು ಆರಂಭಿಸಲು ಉದ್ದೇಶಿಸಲಾಗಿದೆ. ನಾವು ನಡೆಸುವ ಯಾತ್ರೆ ಕಾಂಗ್ರೆಸ್‌ನ ಭಾರತ್ ಜೋಡೊ, ಬಿಜೆಪಿಯ ವಿಜಯಯಾತ್ರೆಗಿಂತ ಭಿನ್ನವಾಗಿರುತ್ತದೆ. ವಿಷಯಾಧಾರಿತವಾಗಿ ಜನರ ಮುಂದೆ ನಾವು ಹೋಗುತ್ತೇವೆ. ಯಾರನ್ನೋ ಬೈಯ್ಯುವ ಉದ್ದೇಶದಿಂದ ಯಾತ್ರೆ ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸೆಂಟಿಮೆಂಟ್ ಆಧಾರದಲ್ಲಿ ಮತ ಪಡೆಯುವ ಹುನ್ನಾರ



ರಾಜ್ಯದ ಬಿಜೆಪಿ ಸರ್ಕಾರ ಕೆಲವು ಹೆಸರುಗಳನ್ನು ಬದಲಿಸುವ ಮೂಲಕ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳಲು ಸಂಚು ನಡೆಸುತ್ತಿದೆ. ರಾಜಧಾನಿ ಬೆಂಗಳೂರಿನ ಹಲವು ಬಡಾವಣೆಗಳಿಗೆ ಬ್ರಿಟಿಷರ ಹೆಸರಿದೆ. ಆ ಹೆಸರನ್ನು ಹಂತ ಹಂತವಾಗಿ ಬದಲಾಯಿಸುವ ಕಾರ್ಯವನ್ನು ಸರ್ಕಾರ ಮಾಡುತ್ತಿದೆ. ಆ ಮೂಲಕ ಸೆಂಟಿಮೆಂಟ್ ಆಧಾರದಲ್ಲಿ ಮತ ಪಡೆಯುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಹೆಸರು ಬದಲಾವಣೆ ಮಾಡಿದರೆ ಜನರ ಬದುಕು ಬದಲಾಗುವುದೇ? ಆರ್‌ಎಸ್‌ಎಸ್ ಮುಖ್ಯಸ್ಥರು ದೇಶದ ಬಡವರ್ಗದ ಸ್ಥಿತಿಗತಿಯ ಕುರಿತು ಮಾತನಾಡಿದ್ದಾರೆ. ಮೊದಲು ಬಡ ವರ್ಗದವರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಹೆಸರು ಬದಲಾವಣೆಯಿಂದ ಜನರ ಹೊಟ್ಟೆ ತುಂಬುವುದಿಲ್ಲ. ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಬದಲಾವಣೆಯಿಂದ ಅವರಿಗೆ ಯಾವ ರೀತಿ ರಾಜಕೀಯ ಲಾಭ ವಾಗುತ್ತದೋ ಮುಂದೆ ಕಾದು ನೋಡೋಣ.

–ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ



ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಶನಿವಾರ ಮೈಸೂರಿಗೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್‌ನಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಆತ್ಮೀಯವಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್‌ನ ಜಿಲ್ಲಾ ಹಿಂದುಳಿದ ವರ್ಗಗಳ ಅಧ್ಯಕ್ಷ ಡಿ.ಶ್ರೀನಿವಾಸ್, ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಅಬ್ದುಲ್ಲಾ ಇನ್ನಿತರರು ಉಪಸ್ಥಿತರಿದ್ದರು.

ಇಂದು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ

ಮೈಸೂರು, ಅ.8(ಆರ್‌ಕೆ)–ಮೈಸೂರಿನ ಶಿವರಾಂಪೇಟೆಯ ಆಲಮ್ಮ ಛತ್ರದಲ್ಲಿ ನಾಳೆ (ಅ.9) ಬೆಳಗ್ಗೆ 10.30 ಗಂಟೆಗೆ ಸಂಸದ ಪ್ರತಾಪ್ ಸಿಂಹ ಅವರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘವನ್ನು ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿರುವ ಸಮಾರಂಭದಲ್ಲಿ ಮಾಜಿ ಶಾಸಕ ವಾಸು, ಮೇಯರ್ ಶಿವಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಂಘದ ಅಧ್ಯಕ್ಷ ಪಿ. ಪ್ರಶಾಂತ್‌ಗೌಡ, ಪಾಲಿಕೆ ಸದಸ್ಯರಾದ ಎಂ.ಡಿ. ನಾಗರಾಜು, ಪ್ರಮೀಳಾ ಭರತ್, ಮೈಸೂರು ಗ್ರೈನ್ಸ್ ಮರ್ಚೆಂಟ್ ಅಸೋಸಿಯೇಷನ್ ಕಾರ್ಯದರ್ಶಿ ಆರ್.ಆನಂದ್ ಹಾಗೂ ಇತರರು ಉಪಸ್ಥಿತರಿರುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.10.2022 ಭಾನುವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಪೂರ್ಣಿಮಾ, ನಕ್ಷತ್ರ : ಉಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರೋಟರಿ ಮೈಸೂರು ಉತ್ತರ:** ಸೈಕ್ಲಿಂಗ್ ರೋಟೆರಿಯನ್ನರ ಅಂತಾರಾಷ್ಟ್ರೀಯ ಒಡನಾಟ ಮತ್ತು ಹೆರಿಟೇಜ್ ಸೈಕ್ಲಿಂಗ್ ರೈಡ್ ಮತ್ತು ಸ್ವಚ್ಛ ಭಾರತ ಅಭಿಯಾನ, ಮುಖ್ಯ ಅತಿಥಿಗಳು: ಮಾಜಿ ಜಿಲ್ಲಾ ಗವರ್ನರ್ ಲಕ್ಷ್ಮಿನಾರಾಯಣ್, ಗೌರವ ಅತಿಥಿಗಳು: ಶ್ರೀಧರ್, ಎಂ.ಎಸ್.ಪ್ರದೀಪ್‌ರಾವ್, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ಜಗದೀಶ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7ಕ್ಕೆ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಇವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ನಾಯಕರ ಪಡೆ :** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ, ಉಪಸ್ಥಿತರು : ಶಾಸಕ ಎಲ್. ನಾಗೇಂದ್ರ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಾಯಕರ ಪಡೆ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ಸ್ಥಳ: ಚಾಮರಾಜ ಕ್ಷೇತ್ರದ ಶಾಸಕರ ಕಛೇರಿ ಬಳಿ, ಜಲದರ್ಶಿನಿ ಅತಿಥಿಗೃಹ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ವಿಶೇಷ ಉಪನ್ಯಾಸ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಕೃಷ್ಣ ಹೊಂಬಾಳ್, ಸ್ಥಳ: ವಿಜ್ಞಾನ ಭವನ ಸೆಮಿನಾರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ಬ್ರಹ್ಮೋತ್ಸವ, ನಿತ್ಯಾರ್ಚನೆ, ಬೆಳ್ಳಿ ತೇರೋತ್ಸವ, ನಿವೇದನ, ಮಹಾಮಂಗಳಾರತಿ, ಸಂಜೆ ವೈಭವಶಯನೋತ್ಸವ, ಸಂಗೀತ, ವಸ್ತ್ರಾಲಂಕಾರ, ಕ್ಷೀರಭಕ್ಷ್ಯಾದಿಗಳ ಸಮರ್ಪಣೆ ಸ್ಥಳ: ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, ವಿ.ವಿ.ಮೊಹಲ್ಲಾ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ :** ಮೈಸೂರು ಜಿಲ್ಲಾ ಕದಳಿ ಮಹಿಳಾ ಸಮಾವೇಶ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ತೋಂಟದ ಸಿದ್ದರಾಮ ಸ್ವಾಮೀಜಿ, ಉದ್ಘಾಟನೆ : ಅದಮ್ಯ ಚೇತನ ಮ್ಯಾನೇಜಿಂಗ್ ಟ್ರಸ್ಟಿ ಡಾ. ತೇಜಸ್ವಿನಿ ಅನಂತಕುಮಾರ್, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, 'ಧಾರಿಣಿ' ಸವಿ ಸಂಚಿಕೆ ಬಿಡುಗಡೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಗೌರವ ಸಲಹೆಗಾರ ಡಾ. ಗೊ.ರು. ಚನ್ನಬಸಪ್ಪ, ಉಪಸ್ಥಿತರು : ಕದಳಿ ಮಹಿಳಾ ವೇದಿಕೆ ರಾಜ್ಯ ಸಂಚಾಲಕಿ ಶ್ರೀಮತಿ ಸುಶೀಲಾ ಸೋಮಶೇಖರ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ :** ಶ್ರೀ ನಿರಂಜನ ಮಠ–ಒಂದು ಅವಲೋಕನ, ಸಾನ್ನಿಧ್ಯ: ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಮಹಾಸಭಾ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, ಮುಖ್ಯ ಅತಿಥಿಗಳು : ರಾಷ್ಟ್ರೀಯ ಉಪಾಧ್ಯಕ್ಷ ಶಂಕರ ಮಹಾದೇವ ಬಿದರಿ, ಹಿರಿಯ ನ್ಯಾಯವಾದಿ ಗಂಗಾಧರ ಆರ್. ಗುರುಮಠ್, ಅಧ್ಯಕ್ಷತೆ: ಶ್ರೀ ನಿರಂಜನ ಮಠ ಸಂರಕ್ಷಣಾ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು ಹಿನಕಲ್, ಉಪಸ್ಥಿತರು: ಕೆ.ಎಸ್.ಮಹದೇವಪ್ರಸಾದ್, ಎಂ.ಎಚ್. ಚಂದ್ರಶೇಖರ್, ಎಲ್.ಎಸ್.ಮಹದೇವಸ್ವಾಮಿ, ಬಿ.ಕೆ. ನಾಗರಾಜು, ಸ್ಥಳ: ಶ್ರೀ ನಿರಂಜನ ಮಠದ ಆವರಣ, ಬೆಳಗ್ಗೆ 10.30ಕ್ಕೆ

■ **ಜಮಾಅತೆ ಇಸ್ಲಾಮಿ ಹಿಂದ್ :** ಪ್ರವಾದಿ ಮುಹಮ್ಮದ್‌ರನ್ನು ಅರಿಯೋಣ, ಸೀರತ್ ಅಭಿಯಾನ, ವಿಚಾರ ಗೋಷ್ಠಿ ಮತ್ತು ಕೃತಿ ಬಿಡುಗಡೆ, ಸಾನ್ನಿಧ್ಯ : ಶ್ರೀ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಕೃತಿ ಬಿಡುಗಡೆ : ಹಿರಿಯ ಸಾಹಿತಿ ಪ್ರೊ. ಎಸ್. ಶಿವರಾಜಪ್ಪ, ಅಧ್ಯಕ್ಷತೆ : ಹಿರಾ ಮೀಡಿಯಾ ಅಧ್ಯಕ್ಷ ಜನಾಬ್ ಮುಹಮ್ಮದ್ ಇಸಾಖ್, ಸ್ಥಳ: ಹೋಟೆಲ್ ಪ್ರೆಸಿಡೆಂಟ್, ಬೆಂಗಳೂರು–ನೀಲಗಿರಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘ :** ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಲಾಂಛನ ಬಿಡುಗಡೆ : ಮಾಜಿ ಶಾಸಕ ವಾಸು, ಮೇಯರ್ ಶಿವಕುಮಾರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಾಸ್ತಾವಿಕ ನುಡಿ : ಸಂಘದ ಅಧ್ಯಕ್ಷ ಪಿ. ಪ್ರಶಾಂತ್‌ಗೌಡ, ಮುಖ್ಯ ಅತಿಥಿಗಳು : ಪಾಲಿಕೆ ಸದಸ್ಯರಾದ ಎಂ.ಡಿ. ನಾಗರಾಜು, ಪ್ರಮೀಳಾ ಭರತ್, ಮೈಸೂರು ಗ್ರೈನ್ಸ್ ಮರ್ಚೆಂಟ್ ಅಸೋಸಿಯೇಷನ್ ಕಾರ್ಯದರ್ಶಿ ಆರ್. ಆನಂದ್, ಸ್ಥಳ: ಆಲಮ್ಮ ಛತ್ರ, ಶಿವರಾಂಪೇಟೆ, ಬೆಳಗ್ಗೆ 11.30ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ :** ನಾಡಪ್ರಭು ಕೆಂಪೇಗೌಡ ಮತ್ತು ಒಕ್ಕಲಿಗ ರಾಜಮನೆತನದ ಇತಿಹಾಸ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಶಿರಾ ಸ್ಫಟಿಕಪುರಿ ಮಹಾಸಂಸ್ಥಾನ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಮಹಾಸ್ವಾಮೀಜಿ, ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀಚಂದ್ರಶೇಖರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಮಾಜಿ ಸಚಿವ ಸಿ.ಪಿ. ಯೋಗೇಶ್ವರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಜಯರಾಮ್ ರಾಯಪುರ, ಕಾಂಗ್ರೆಸ್ ಯುವ ಮುಖಂಡ ವಿ. ಕವೀಶ್‌ಗೌಡ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಧ್ಯಾಹ್ನ 3.45ಕ್ಕೆ.

■ **ತನುಮನ ಸಂಸ್ಥೆ :** ಖ್ಯಾತ ಗಾಯಕ ಲಕ್ಷ್ಮಿರಾಮ್ ಅವರ ಸಾರಥ್ಯದಲ್ಲಿ ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಸಾನ್ನಿಧ್ಯ : ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಕೆ. ಶಿವಕುಮಾರ್, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು : ಜಿಪಂ ಉಪ ಕಾರ್ಯದರ್ಶಿ ಡಾ. ಕೃಷ್ಣರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ.ಆರ್. ವೆಂಕಟೇಶ್, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಸದಸ್ಯ ಎಂ. ನರಸಿಂಹಮೂರ್ತಿ, ಕೆ.ಆರ್. ಆಸ್ಪತ್ರೆ ವೈದ್ಯ ಡಾ. ಪ್ರಸಾದ್, ವಕೀಲ ದೇವರಾಜ ಪಾಳೇಗಾರ್, ಎಂ.ವಿ. ಚಂದ್ರಶೇಖರ್, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ದ್ಯಾವಪ್ಪ ನಾಯಕ, ಎಸ್‌ಬಿಐ ಉದ್ಬೂರು ಶಾಖೆ ವ್ಯವಸ್ಥಾಪಕ ನಾಗಮೂರ್ತಿ, ಪತ್ರಕರ್ತ ಸೋಮಯ್ಯ ಮಲೆಯೂರು, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಸಂಜೆ 5.30ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ–247, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಬಿ.ಎನ್.ಎಸ್.ಮುರಳಿ ಅವರಿಂದ ಗಾಯನ, ವಿದ್ವಾನ್ ಎಂ.ವಿ. ಶಾಂತಕುಮಾರ್–ವಯೋಲಿನ್, ವಿದ್ವಾನ್ ಎಂ.ಆರ್. ಮಂಜುನಾಥ್ –ಮೃದಂಗ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ: ಆರ್.ನಾಗೇಶ್, ರಂಗ ವಿನ್ಯಾಸ: ಹೆಚ್.ಕೆ.ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಕರ್ನಾಟಕ ಕ್ಷತ್ರಿಯ ಒಕ್ಕೂಟ :** ಶ್ರೀ ಚಾಮುಂಡೇಶ್ವರಿ ಉತ್ಸವ ರಥೋತ್ಸವದ ಪ್ರಯುಕ್ತ ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ, ಲಲಿತ ಸಹಸ್ರನಾಮ, ಕುಂಕುಮ ಅರ್ಚನೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕರ್ನಾಟಕ ಕ್ಷತ್ರಿಯ ಒಕ್ಕೂಟದ ರಾಜ್ಯಾಧ್ಯಕ್ಷ ಉದಯ್ ಸಿಂಗ್, ತಾರಾ ಸಿಂಗ್, ಮಹಿಳಾ ರಾಜ್ಯಾಧ್ಯಕ್ಷೆ ಡಾ. ಎಸ್. ಉಮಾಮೂರ್ತಿರಾವ್, ವಿದ್ವಾನ್ ಪ್ರಹ್ಲಾದ್‌ರಾವ್, ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಸ್ಥಳ: ಮೈಸೂರು ಶಿವಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದ, ಮಧ್ಯಾಹ್ನ 12.30ಕ್ಕೆ.

■ **ಭಾವಸಾರ್ ವಿಷನ್ ಇಂಡಿಯಾ :** ರಾಜ್ಯ ಮಟ್ಟದ ಗುರುವಂದನ ಕಾರ್ಯಕ್ರಮ, ಧ್ವಜಾರೋಹಣ: ಭಾವಸಾರ್ ವಿಷನ್ ಇಂಡಿಯಾ ಸಂಸ್ಥಾಪಕ ಎಸ್.ಬಿ. ನಾರಾಯಣ್ ರಾವ್ ಟಟುಷ್ಕರ್, ಉಪಸ್ಥಿತರು: ರಾಷ್ಟ್ರೀಯ ಅಧ್ಯಕ್ಷ ಸತೀಶ್ ಜಾದವ್, ರಾಜ್ಯಾಧ್ಯಕ್ಷ ಉದಯ್ ಸಿಂಗ್, ಅಖಿಲ ಭಾರತ ಭಾವಸಾರ್ ಕ್ಷತ್ರೀಯ ಮಹಾಸಭಾ ರಾಜ್ಯಾಧ್ಯಕ್ಷ ಶ್ರೀನಿವಾಸ ರಾವ್ ಪಿಸ್ಸೆ, ಶಾಸಕ ಎಲ್.ನಾಗೇಂದ್ರ, ಕಾಂಗ್ರೆಸ್ ಮುಖಂಡ ಹರೀಶ್ ಗೌಡ, ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ, ಭಾವಸಾರ್ ಕ್ಷತ್ರಿಯ ಮಂಡಳಿ ಅಧ್ಯಕ್ಷ ಆರ್.ವಿ. ಶಿವಾಜಿರಾವ್ ರಾಂಪುರೆ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಡಿ. ಸಂಜೀವಯ್ಯ ಮೆಮೋರಿಯಲ್ ಎಜುಕೇಷನ್ ಸೊಸೈಟಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಪ್ರೊ. ಡಿ. ನಂಜುಂಡಯ್ಯ, ಸ್ಥಳ: ಸೊಸೈಟಿ ಆವರಣ, ವಿಜಯನಗರ 1ನೇ ಹಂತ, ಮಧ್ಯಾಹ್ನ 12ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ, ಸಾಂಸ್ಕೃತಿಕ ವೇದಿಕೆ :** ವಾಲ್ಮೀಕಿ ಜಯಂತಿ, ಮುಖ್ಯ ಭಾಷಣ : ಸಹ ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಶ್ರೀನಿವಾಸ, ಸ್ಥಳ: ಜಯಲಕ್ಷ್ಮಮ್ಮಣ್ಣಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ :** ವೀರಶೈವ–ಲಿಂಗಾಯಿತ ವಧು–ವರರ ಸಮಾವೇಶ, ಉದ್ಘಾಟನೆ: ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಮಾಲಂಗಿ ಸುರೇಶ್, ಅಧ್ಯಕ್ಷತೆ : ಲಿಂಗಾಯಿತ ಗೌಡ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ವಚನ ಕುಮಾರಸ್ವಾಮಿ, ಎಸ್. ಮತಿದೇವ ಕುಮಾರ್, ಕೆ.ಪಿ. ನಾಗರಾಜು, ಡಾ. ಸುನಂದ ಭೂಪಾಲಿ, ಸ್ಥಳ: ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 2 ರಿಂದ.

■ **ನಿರಂತರ ಫೌಂಡೇಷನ್ :** ಸಹಜ ರಂಗ ತರಬೇತಿ ಶಿಬಿರ, ಉಪಸ್ಥಿತರು : ಗಾಂಧಿ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಂ. ಶಂಕರ್, ಹಸಿರು ಫೌಂಡೇಷನ್‌ನ ಹೊನ್ನಳ್ಳಿ ಗಂಗಾಧರ್, ನಿರಂತರದ ಪ್ರಸಾದ್ ಕುಂದೂರು, ಸ್ಥಳ: ಗಾಂಧಿ ಭವನ, ಮಾನಸಗಂಗೋತ್ರಿ, ಸಂಜೆ 6ಕ್ಕೆ

■ **ಸನ್ನಿತಿ ಪ್ರಕಾಶನ :** ಬಸಪ್ಪ ಸಿ. ಸಾಲುಂಡಿ ಅವರ 'ಕನ್ನಡದ ಕನ್ನಡಿ' ಪ್ರಶ್ನೋತ್ತರ ಮಾಲೆ ಬಿಡುಗಡೆ, ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಜಿ.ಎಚ್. ಮಹದೇವಸ್ವಾಮಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪುಸ್ತಕ ಬಿಡುಗಡೆ : ಬಿಇಒ ಕಂದವೇಲು, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ, ಉಪಸ್ಥಿತರು: ಮೇಯರ್ ಶಿವಕುಮಾರ್, ಪೊಲೀಸ್ ಉಪ ಆಯುಕ್ತೆ ಗೀತಾಪ್ರಸನ್ನ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಡಾ. ಬಿ.ಎನ್. ನಂದಿನಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರೊ. ಎಸ್. ಶಿವರಾಜಪ್ಪ, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಸಿಂಡಿಕೇಟ್ ಸದಸ್ಯ ದಾಮೋದರ್, ಡಾ. ಹೆಚ್.ಪಿ. ಜ್ಯೋತಿ, ಡಾ. ಹೆಚ್.ಸಿ. ದೇವರಾಜೇಗೌಡ, ಡಾ. ಮಾರುತಿ, ಡಾ. ಎಂ.ಎಸ್. ಸ್ವಪ್ನ, ಉಮೇಶ್, ಸ್ಥಳ: ವಿವಿ ಸಂಜೆ ಕಾಲೇಜು ಮುಂಭಾಗ, ಬೆಳಗ್ಗೆ 10.30ಕ್ಕೆ.

■ **ಭಾರತ ವಿಕಾಸ ಪರಿಷದ್, ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ದಸರಾ ಬೊಂಬೆ ಜೋಡಣೆ ಸ್ಪರ್ಧೆ, ಮುಖ್ಯ ಅತಿಥಿಗಳು : ಎಂಐಟಿ ಅಧ್ಯಕ್ಷ ಡಾ. ಮುರಳಿ, ಶಾರದಾ ವಿಲಾಸ ಫಾರ್ಮಸಿ ವಿದ್ಯಾಲಯ ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಬಹುಮಾನ ವಿತರಣೆ : ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಆರ್.ಜಿ. ಸಿಂಗ್, ಅಧ್ಯಕ್ಷತೆ : ಭಾರತ ವಿಕಾಸ್ ಪರಿಷದ್‌ನ ಡಾ. ಬಿ.ಎನ್. ರಂಗನಾಥರಾವ್, ಸ್ಥಳ: ಬೊಂಬೆ ಮನೆ, ಪ್ರತಿಮಾ ಗ್ಯಾಲರಿ, ನಜರ್‌ಬಾದ್, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ. ಏಜಾಸುದ್ದೀನ್ ಫೈರೋಜ್, 6.20 ಗೀತಾರಾಧನ, 6.35 'ಬದುಕು ಬದಲಿಸಿದ ಶೋಧ' ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಸಿ.ವಿಶ್ವನಾಥ್, ಪಿ.ಎಸ್.ರಂಜನಿ ವ್ಯಾಖ್ಯಾನ– ಡಾ.ಬಿ.ವಿ.ವಸಂತಕುಮಾರ್, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ "ಸಂತಾನ ಹೀನತೆಗೆ ಕಾರಣಗಳು ಮತ್ತು ಪರಿಹಾರ" ಕುರಿತು ಮೈಸೂರಿನ ಗೈನಕಾಲಜಿಸ್ಟ್ ಮತ್ತು ಫರ್ಟಿಲಿಟಿ ಸ್ಪೆಷಲಿಸ್ಟ್ ಡಾ.ಮಾಧುರಿ ಎನ್. ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟಾ– ಬಿ.ಜಿ.ಶಾಂತಾ ಅವರಿಂದ ಪಂಚತಂತ್ರದ ಕಥೆ, 10.30 ಮಕ್ಕಳ ಮಂಟಪ –"ಪ್ರತಿಭಾ ಪಲ್ಲವ"–ಬಹುಮುಖ ಪ್ರತಿಭೆ ತ್ರಿಜಲ್ ಪರಿಚಯ **ಮಧ್ಯಾಹ್ನ:** 12.05 ವನಿತಾ ವಿಹಾರ ಗಾಂಧಿ ಮತ್ತು ಮೀರಾ–ಗಾಂಧೀಜಿ ಯವರ ಸ್ತ್ರೀ ತತ್ವಗಳನ್ನು ಆಧರಿಸಿದ ಕಾರ್ಯಕ್ರಮ, 12.30 ದೇವರನಾಮ–ಡಾ.ರಾಜ್‌ಕುಮಾರ್, ಕೆ.ಎಂ.ಕುಸುಮ, 12.45 ಜನಪದ ಸಂಗೀತ–ಕೆಂಚಮ್ಮ ಮತ್ತು ತಂಡ, 1.20 ಭಾವಗೀತೆ–ಬಿ.ಆರ್. ಅನುರಾಧಾ, 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಾಜ್ ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–"ಅಂಗದ ಸಂಧಾನ", ಪ್ರಸ್ತುತಿ– ಪೆರ್ಲ ಕೃಷ್ಣ ಭಟ್ ಮತ್ತು ತಂಡ, ಕೊಡಪದವು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ. ಮೀನಾ, 6.50ಕೃಷಿರಂಗ–ಕೃಷಿಲೋಕ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ದುರ್ಗಾ ಶರ್ಮ–ವಯೋಲಿನ್, ಪಂಡಿತ್ ತಾತಲಿಂಗಪ್ಪ ದೇಸಾಯ್ ಕಲ್ಲೂರು– ತಬಲಾ ಸೋಲೋ

PUBLIC NOTICE

This is to notify to the General Public that our client Smt. Srimathi, daughter of Sri Srinivasa and Wife of Sri Abhiraj, Aged about 37 years, Residing at #156, R.M.S. Layout, Shakth nagar, Kalyangiri, Mysuru had obtained a decree for partition of her 1/4 Share in respect of the schedule property in O.S. No.:29/2020 on the file of Senior Civil Judge at Periyapatna as against Sri Srinivasa and 3 others and also as against Sri Harshad, son of Sri Razak, residing at Kolathekkate House, Nattka Beach Road, near Natikjuma Masjid, Nattika Thrissur, Chavakkad, Kerala.

Now it is reliably learnt that Sri Harshad, son of Sri Razak without disclosing the decreetor partition in favor of our client in respect of the schedule property, is trying to alienate thesame in favor of third party. In spite of this notice if anyone enters into any type of sale transaction with respect to the schedule property with Sri Harshad, son of Sri Razak, then the said third party will not get any right over the schedule property. Wherefore, our client thereby intimates to the public not to enter into any type of sale transaction with respect tothe schedule property with Sri Harshad, son of Sri Razak

SCHEDULE

All that piece and parcel of agriculture landed property bearing survey no.110/1 measuring 6 Acre 20 Guntas including kharab land situated at Komalapura Village, Bettadapura Hobli, Periyapatna Taluk and bounded on: East by : Land bearing survey no.:111/2 West by . : Land bearing survey no.:109 North by : Land belonging to Subbegowda, Sri Ramesha, Sri Srinivas South by : Land bearing survey no.:110/2

Sri. P.K Ponraiah, Sri. B.P.Vignesh, Sri. Naveen, Ponnaiah Advocate
No.1662/1A, First floor Radha madhav Connect, Narayana Shastry Road, Beside Secure Hospital, (Old Seetha ranga Hospital) Mysore - 570004.

ನಕ್ಕರೆ ಅದೇ ಸ್ವರ್ಗ

ಗುಂಡ : "ನಂಗೇನಾಗಿದೆ ಡಾಕ್ಟ್ರೇ?"
ಡಾಕ್ಟರ್ : "ಸಾರಿ ಗುಂಡ... ನೀವು ಇನ್ನು ಎರಡು ಗಂಟೇಲಿ ಸಾಯ್ತೀರಿ. ಅದಕ್ಕೂ ಮುಂಚೆ ಯಾರನ್ನಾದ್ರೂ ನೋಡ್ಬೇಕಾ?"
ಗುಂಡ : "ಹೌದು ಸಾರ್... ಒಳ್ಳೆ ಡಾಕ್ಟರನ್ನು ನೋಡ್ಬೇಕು ಅಂತಿದ್ದೀನಿ!"

ಮೈಸೂರು ಮಿತ್ರ
ಭಾನುವಾರ, 9 ಅಕ್ಟೋಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕಷ್ಟಪಟ್ಟು ದುಡಿಯುವುದರಲ್ಲಿ ಯಾವ ಅನುಮಾನವೂ ಇಲ್ಲ.

–ಜಮುನಾಲಾಲ್ ಬಜಾಜ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಂಬಿ ತುಂಬಿ ಹೊಯ್ದರೂ ಹಂಬಲ ಮಾತ್ರ ಹೋಗದು

ನಿಮ್ಮ ಪತ್ರಗಳು

ಕಾಡಾನೆಗಳಿಂದ ನಮ್ಮನ್ನು ರಕ್ಷಿಸಿ

ಮಾನ್ಯರೆ,

ನಂಜನಗೂಡು ತಾಲೂಕಿನ ಹೆಡಿಯಾಲ ವ್ಯಾಪ್ತಿಯ ಬಂಡೀಪುರ ಅರಣ್ಯ ಪ್ರದೇಶದ ಓಂಕಾರ ಕಾಡಂಚಿ ನಲ್ಲಿರುವ ಬಳ್ಳೂರುಹುಂಡಿ, ನಾಗಣಪುರ ಮುಂತಾದ



ಗ್ರಾಮಗಳಲ್ಲಿ ಕಾಡಾನೆ ಹಾವಳಿ ಜಾಸ್ತಿಯಾಗಿದೆ. ಗ್ರಾಮದಲ್ಲಿ ರೈತರು ಬೆಳೆದ ಬೆಳೆಗಳನ್ನು ತಿಂದು ನಾಶ ಮಾಡುತ್ತಿವೆ. ನೀರಾವರಿ ಫಸಲುಗಳನ್ನು ಬೆಳೆದಿರುವ ರೈತರು ಭಯದಿಂದ ಬದುಕ ಬೇಕಿದೆ. ಜಮೀನಿನಲ್ಲಿ ತೆಂಗು, ಅಡಿಕೆ, ಮಾವು ಮುಂತಾದ ಸಸಿಗಳನ್ನು ಬೆಳೆದಿದ್ದಾರೆ. ಈಗಾಗಲೇ ಆನೆಗಳು ಕೆಲ ರೈತರ ಸಸಿಗಳನ್ನು ನಾಶ ಮಾಡಿವೆ ಮತ್ತು ರೈತರು ದಿನವಿಡೀ ಹೊಲದಲ್ಲಿ ಕೆಲಸ ಮಾಡಿ ರಾತ್ರಿಯು ಸಹ ನಿದ್ದೆಗೆಟ್ಟು ಕಾವಲು ಕಾಯಬೇಕಿದೆ. ಬೆಳೆ ನಷ್ಟ ಹೊಂದಿದ ರೈತರು ಪರಿಹಾರಕ್ಕೆ ಅರ್ಜಿಗಳನ್ನು ಹಾಕಿದರೂ ಸರಿಯಾದ ಪರಿಹಾರ ಸಿಕ್ಕಿಲ್ಲ.

ರೈತರು ಕಾಡು ಪ್ರಾಣಿಗಳಿಗೆ ಹೆದರಿ ತಮ್ಮ ಜಮೀನಿನ ಸುತ್ತ ಮುಳ್ಳು ತಂತಿ, ಸೋಲಾರ್ ಪೆನ್ಸ್ ಮುಂತಾದ ರೀತಿಯಲ್ಲಿ ಬಿಗಿಭದ್ರತೆ ಮಾಡಿಕೊಂಡಿದ್ದಾರೆ. ಅದನ್ನು ಸಹ ನಾಶ ಮಾಡಿ ಕಾಡು ಪ್ರಾಣಿಗಳು ಒಳಗೆ ನುಗ್ಗುತ್ತಿವೆ. ಅರಣ್ಯಾಧಿಕಾರಿಗಳು ನಮ್ಮ ಮಾತಿಗೆ ಸ್ಪಂದಿಸುತ್ತಿಲ್ಲ. ಈಗಾಗಲೇ ಅರಣ್ಯದ ಸುತ್ತ ಎರಡು ಸಾಲಿನ ಕಬ್ಬಿಣದ ಕಂಬಿಗಳನ್ನು ಅಳವಡಿಸಲಾಗಿದೆ. ಆದರೂ ಆನೆಗಳು ಅದರ ಒಳಗೆ ನುಗ್ಗಿ ಇಲ್ಲವೆ ಬೇಲಿ ಕೆಳಗೆ ತೆವಳಿಕೊಂಡು ಬರುತ್ತವೆ ಮತ್ತು ಇನ್ನಿತರ ಪ್ರಾಣಿಗಳು ಅಂದರೆ ಹಂದಿ, ಜಿಂಕೆ, ಕಡವೆ ಮುಂತಾದ ಪ್ರಾಣಿಗಳು ಬೆಳೆಯನ್ನು ತಿನ್ನುತ್ತಿವೆ. ಅರಣ್ಯಾಧಿಕಾರಿಗಳು "ನಮ್ಮಿಂದ ಕಾಡನ್ನು ರಕ್ಷಿಸುತ್ತಾರೆಯೇ ಹೊರತು ಕಾಡುಪ್ರಾಣಿಗಳಿಂದ ನಮ್ಮನು ರಕ್ಷಿಸುತ್ತಿಲ್ಲ". ದಯುವಿಟ್ಟು ಅರಣ್ಯಾಧಿಕಾರಿಗಳು ಎರಡು ಸಾಲಿನ ಕಂಬಿಗಳ ಮಧ್ಯೆ ಇನ್ನೊಂದು ಕಂಬಿ ಅಥವಾ ಜಾಲ್ರಿ ಅನ್ನು ಹಾಕಿಸಬೇಕು. ಕ್ಷೇತ್ರದ ಶಾಸಕರು ದಯವಿಟ್ಟು ಗಮನಿಸಿ, ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕೆಂದು ಮನವಿ.

■ ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ॥

ಮಕ್ಕಳ ದಸರಾ ರಜೆಯ ಮಜಾ ಹೀಗಿರಲಿ!

ಮಾನ್ಯರೆ,

ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ ಕೋವಿಡ್ ಭಯದಿಂದಾಗಿ ಶಾಲೆಗೆ ರಜೆ ನೀಡಿ ಮಕ್ಕಳು ಗಳಿಸಬೇಕಾದ ಸಾಮರ್ಥ್ಯಗಳೆಲ್ಲವನ್ನು ಪಡೆಯಲು ಸಾಧ್ಯ ವಾಗಿಲ್ಲದ ಕಾರಣ ಈ ಬಾರಿಯ 2022–23 ರ ಶೈಕ್ಷಣಿಕ ವರ್ಷವನ್ನು ಕಲಿಕಾ ಚೇತರಿಕಾ ವರ್ಷವನ್ನಾಗಿ ಸರ್ಕಾರ ಆಚರಿಸುತ್ತಿದೆ. ಈ ಕಾರಣದಿಂದಾಗಿಯೇ ಈ ಹಿಂದೆ ಇದ್ದಂತಹ ಒಂದು ತಿಂಗಳ ದಸರಾ ರಜೆಯನ್ನು 14 ದಿನಗಳಿಗೆ ಕಡಿತಗೊಳಿಸಿ ಮಕ್ಕಳ ಕಲಿಕೆಗೆ ಹೆಚ್ಚು ಒತ್ತನ್ನು ಸರ್ಕಾರ ನೀಡಿದೆ. ಶಾಲೆಯಲ್ಲಿ ಮಕ್ಕಳು ಇದ್ದಾಗ ಶಾಲಾ ಪಠ್ಯ ವಿಷಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ನಿರಂತರ ಕಲಿಕೆ ಇದ್ದೇ ಇರುತ್ತದೆ. ಆದರೆ ದಸರ ರಜೆಯ ಮಜವನ್ನು ಮಕ್ಕಳು ಅರ್ಥಪೂರ್ಣವಾಗಿ ಆಚರಿಸದೆ ಇದ್ದರೆ ಹೇಗೆ?

ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್, ದೂರದರ್ಶನ ಹಾಗೂ ಕಂಪ್ಯೂಟರ್‌ಗಳ ಹಾವಳಿ ಪ್ರತಿ ಮನೆ ಮನಗಳನ್ನು ಆವರಿಸಿದೆ. ಮಕ್ಕಳು ರಜಾ ಅವಧಿಯಲ್ಲಿ ಇವುಗಳ ಮುಂದೆ ಕೂತು ಗೇಮ್‌ಗಳನ್ನು ಆಡುತ್ತಾ ಮತ್ತಷ್ಟು ಮಾನಸಿಕ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಇದು ತಪ್ಪಬೇಕು. ರಜಾ ಅವಧಿಯಲ್ಲಿ ಮಕ್ಕಳಿಗೆ ಒಳಾಂಗಣ ಕ್ರೀಡೆಗಳಿಗಿಂತ ಹೊರಾಂಗಣ ಕ್ರೀಡೆಗಳಿಗೆ ಹೆಚ್ಚಿನ ಒತ್ತನ್ನು ನೀಡಬೇಕು. ಗಾಳಿಪಟ ಆಡಿಸುವುದು, ಗೋಲಿ, ಗಜಗ ಆಡುವುದು, ಚಿನ್ನಿದಾಂಡು, ಸಂಬಂಧಿಕರ ಊರುಗಳಿಗೆ ಸುತ್ತಾಟ, ಅಜ್ಜ ಅಜ್ಜಿಯರಿಂದ ಕಥೆ ಕಲಿಯುವುದು, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿಕೆ, ಜಾತ್ರೆ ಹಾಗೂ ಉತ್ಸವಗಳಲ್ಲಿ ನಾಟಕವನ್ನು ನೋಡಿ ಸಂಭ್ರಮಿಸುವುದು... ಈ ರೀತಿಯ ಹತ್ತು ಹಲವು ಕಾರ್ಯ ಚಟುವಟಿಕೆಗಳಲ್ಲಿ ಮಕ್ಕಳು ರಜಾ ಅವಧಿಯಲ್ಲಿ ಭಾಗಿಯಾದರೆ ಎಷ್ಟೊಂದು ಚೆಂದ ಅಲ್ಲವೇ?

ಇದರಿಂದ ಮಕ್ಕಳು ಒತ್ತಡ ರಹಿತವಾಗಿ ಮೋಜಿನ ಜೊತೆ ರಜೆಯ ಮಜವನ್ನು ಅನುಭವಿಸಿದಂತಾಗುತ್ತದೆ. ಮಕ್ಕಳ ಚಿಂತನಾಲಹರಿ ಬದಲಾಗಿ ಅವರ ಜ್ಞಾನ ಯೋಜನೆಯು ಮತ್ತಷ್ಟು ವಿಸ್ತಾರವಾಗುತ್ತದೆ. ಸ್ನೇಹ ಬಾಂಧವ್ಯ ಹೆಚ್ಚಾಗಿ ಮಕ್ಕಳ ಏಕಾಂಗಿತನ ದೂರವಾಗುತ್ತದೆ. ಇಷ್ಟೇ ಅಲ್ಲದೆ ಕೂಡು ಕುಟುಂಬದ ಜೊತೆ ಅನೇಕ ಸಂಬಂಧಿಕರ ಊರುಗಳಿಗೆ ಹೋಗುವುದರ ಪರಿಣಾಮ ವಿವಿಧ ಸ್ಥಳಗಳ ಪರಿಚಯ ಹಾಗೂ ವಿವಿಧ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳು ಮತ್ತು ಬದುಕಿನ ವೃತ್ತಿಗಳ ಅರಿವು ಮಕ್ಕಳಿಗೆ ಸಿಕ್ಕಂತಾಗುತ್ತದೆ. ಈ ರೀತಿ ರಜಾ ಅವಧಿಯಲ್ಲಿ ಮಕ್ಕಳ ಮನಸ್ಸನ್ನು ಪ್ರಪುಲ್ಲಿತಗೊಳಿಸಲು ಪ್ರತಿಯೊಬ್ಬ ಪೋಷಕರು ಮುಂದಾಗಬೇಕಿದೆ.

■ ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಹಬ್ಬಗಳಲ್ಲಿ....


ಮಾನ್ಯರೆ,

ಹಿರಿಯ ಸಾಹಿತಿಗಳೂ, ಸ್ವಾತಂತ್ರ್ಯ ಸಮರ ಯೋಧರೂ, ಕರ್ನಾಟಕ ಏಕೀಕರಣ ಧುರೀಣರೂ ಆಗಿದ್ದ ಕೋ. ಚೆನ್ನಬಸಪ್ಪನವರ ಜನ್ಮ ಶತಮಾನೋತ್ಸವ ವರ್ಷವಿದು. ಇದೊಂದು ನೆನಪು : ನಾನು 2011 ರಲ್ಲಿ 78ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿದ್ದೆ. ಕೋ.ಚೆ. ಅವರು 79ನೆಯ ಸಮ್ಮೇಳನದ ಅಧ್ಯಕ್ಷರಾದರು. ಅವರು ಆಯ್ಕೆಗೊಂಡಾಗ ನಾನು ಅಭಿನಂದನಾ ಭಾಷಣ ಮಾಡುತ್ತಾ ಹೇಳಿದೆ : "ನಾನು ಕೋ.ಚೆ. ಅವರಿಗಿಂತ ಕಿರಿಯ; ಅವರು ನನಗಿಂತ ಮೊದಲು ಅಧ್ಯಕ್ಷರಾಗಬೇಕಿತ್ತು". ಅದಕ್ಕೆ ಉತ್ತರವಾಗಿ ಕೋ.ಚೆ. ಹೇಳಿದರು. "ನಮ್ಮ ಮನೆಗಳಲ್ಲಿ ಹಬ್ಬ ಮಾಡಿದಾಗ, ಮೊದಲು ಮಕ್ಕಳಿಗೆ ತಿಂಡಿ ಕೊಡುತ್ತೇವೆ; ಆ ಮೇಲೆ ದೊಡ್ಡವರಿಗೆ! ಆದ್ದರಿಂದ ಇದೇನೂ ಅಸಹಜವಲ್ಲ!" (ಮಾಸ್ತಿಯವರೂ ಇಂಥದೇ ಮಾತನ್ನು ಯಾವುದೋ ಪ್ರಶಸ್ತಿ ಸಂಬಂಧವಾಗಿ ಆಡಿದ್ದರು. ಇದೆಲ್ಲ ದೊಡ್ಡವರ ಔದಾರ್ಯ). ಕೋ.ಚೆ. ಯಾವುದೇ ಬಗೆಯ 'ಕೊಳಚೆ'ಯಿಲ್ಲದೆ ತುಷಾರ ಶುಭ್ರವಾದ ಬದುಕು ನಡೆಸಿದವರು!

ಧೂಳೀಪಟ : ಉಕ್ರೇನನ್ನು ಧೂಳೀಪಟ ಮಾಡುತ್ತೇನೆಂದು ಹೊರಟ ರಷ್ಯಾಕ್ಕೆ ಈಗ ಹಿನ್ನಡೆಯಂತೆ!

ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ : "ಕೇವಲ ಧೂಳು ಎಂದು ತಿರಸ್ಕಾರ ಪೂರ್ವಕ ಕಾಲಿನಿಂದೊದ್ದಾಗ ಅದು ಹಾರಿ ತಲೆಯ ಮೇಲೆ ಕುಳಿತುಕೊಳ್ಳುತ್ತದೆ!"

■ ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಭವಿಷ್ಯದ ಎಚ್ಚರಿಕೆಯಿಂದಲೇ ವರ್ತಮಾನದಲ್ಲಿ ಬದುಕಬೇಕು

ನಮಗೆ ಮುಂದಾಲೋಚನೆ ಇದ್ದರೆ ಮಾತ್ರ ಜೀವನ ಸುಗಮವಾಗಿ ನಡೆಯುತ್ತದೆ. ಇವತ್ತು ಕೈಯ್ಯಲ್ಲಿದ್ದುದನ್ನು ಖರ್ಚು ಮಾಡೋಣ, ನಾಳೆ ಏನಾಗುವುದೋ ನೋಡೋಣ, ಯಾವುದಕ್ಕೂ ದೇವರಿದ್ದಾನಲ್ಲಾ, ನಮ್ಮನ್ನು ಕೈ ಹಿಡಿತಾನೆ... ಕಾಪಾಡ್ತಾನೆ... ಎಂದು ಹೇಳುವವರು ತಮ್ಮ ಜೀವನವನ್ನು ಬವಣೆಯಲ್ಲೇ ಕಳೆಯಬೇಕಾಗುತ್ತದೆ. ಯೋಜನೆ ರೂಪಿಸುವುದು ಹಾಗೂ ಮುಂದಾಲೋಚನೆ ಮಾಡುವುದು ಅತ್ಯಂತ ಅನಿವಾರ್ಯ, ಅವಶ್ಯಕವೂ ಹೌದು.

ನಮ್ಮ ಮನೆಯ ಹೆಣ್ಣ ಮಕ್ಕಳು ಈ ನಿಟ್ಟಿನಲ್ಲಿ ಬಹಳ ಚಾಣಾಕ್ಷರೂ, ಬುದ್ಧಿವಂತರು ಎಂದು ಹೇಳಬಹುದು. ಅವರು ಸಾಸಿವೆ ಡಬ್ಬಿಯಲ್ಲಿ ಹಣ ಕೂಡಿಡುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮನೆಯ ಯಜಮಾನನ ಬಳಿ ಹಣವಿಲ್ಲದಿದ್ದಾಗ, ಮಡದಿಯು ಹೀಗೆ ತಾನು ಕೂಡಿಟ್ಟ ಹಣವನ್ನು ಅವನಿಗೆ ನೀಡಿ ಬಂದಿರುವ ಸಂಕಷ್ಟವನ್ನು ಪರಿಹರಿಸಿಕೊಳ್ಳಲು ನೆರವಾಗುವುದನ್ನು ನಾವು ಹಲವಾರು ಬಾರಿ ನೋಡಿದ್ದೇವೆ. ಇದೊಂದು ರೀತಿಯ ಆಪದ್ಧನ. ಅದು ಮನೆಯ ತೊಂದರೆಯ ಸಮಯದಲ್ಲಿ ಸಹಕಾರಿಯಾಗುತ್ತದೆ.

ನಮ್ಮ ಹಿಂದಿನ ವ್ಯಾಪಾರಿಗಳು (ಈ ಹಿಂದೆ ವ್ಯಾಪಾರಿ ಎಂದರೆ ಶೆಟ್ಟರು ಎನ್ನಲಾಗುತ್ತಿತ್ತು, ಏಕೆಂದರೆ ಅವರಿಗೆ ವ್ಯಾಪಾರದ ಒಳ–ಹೊರಗು ಗೊತ್ತಾಗಿರುತ್ತಿತ್ತು. ಅದರಿಂದ ಅವರಿಗೆ ವ್ಯಾಪಾರ ಕೈ ಹಿಡಿಯುತ್ತಿತ್ತು) ಅವರು ತಮ್ಮ ಆದಾಯ ಅಥವಾ ಲಾಭವನ್ನು ಲೆಕ್ಕಹಾಕಿ, ಬಂದ ಲಾಭವನ್ನು ಯಾವುದಕ್ಕೆ ಎಷ್ಟು ಎಂದು ಎತ್ತಿಡುತ್ತಿದ್ದರು. ಮನೆ ಖರ್ಚು, ಮಕ್ಕಳ ವಿದ್ಯಾಭ್ಯಾಸ, ಮನೆ ಕಟ್ಟುವುದು ಇತ್ಯಾದಿಗಳಿಗೆ ಅವರು ಲಾಭದ ಹಣ ಹಂಚಿಕೆ ಮಾಡುತ್ತಿದ್ದರು. ಅದನ್ನು ಯಾವುದೇ ಕಾರಣಕ್ಕೂ ಇತರೆ ಉದ್ದೇಶಗಳಿಗೆ ಬಳಸುತ್ತಿರಲಿಲ್ಲ. ಅಂಗಡಿಯ ಮೂಲ ಬಂಡವಾಳ ತೆಗೆಯುತ್ತಿರಲಿಲ್ಲ. ಹಾಗಾಗಿ ಅವರು ನೆಮ್ಮದಿಯ ಜೀವನ ನಡೆಸುತ್ತಿದ್ದರು. ಇದು ತಲೆತಲಾಂತರದಿಂದ ನಡೆದುಕೊಂಡು ಬಂದ ವಿಧಾನವಾಗಿರುತ್ತಿತ್ತು. ಅಲ್ಲದೆ ಅವರಿಗೆ ಒಮ್ಮೆಲೆ ಹೆಚ್ಚು ಲಾಭ ಮಾಡಿಬಿಡಬೇಕು ಎಂಬ ಮನೋಭಾವವೂ ಇರಲಿಲ್ಲ, ಅಲ್ಲದೆ ಅವರು ಸಮಾಜದಲ್ಲಿ ಒಂದಾಗಿ ಇರಲು ಪ್ರಯತ್ನಿಸುತ್ತಿದ್ದರು. ಇದರಿಂದ ಅವರು ಎಲ್ಲರಿಗೂ ಬೇಕಾದವರಾಗಿರುತ್ತಿದ್ದರು. ವ್ಯಾಪಾರ ಹಾಗೂ ಉಳಿತಾಯ ಹೇಗಿರಬೇಕು? ಎಂಬುದಕ್ಕೆ ಅವರು ಉದಾಹರಣೆ ರೂಪದಲ್ಲಿರುತ್ತಿದ್ದರು. ಆದರೆ ಈ ಮನೋಭಾವ ಈಗಿನ ವ್ಯಾಪಾರಿ ವೃಂದದಲ್ಲಿ ಕಡಿಮೆಯಾಗುತ್ತಿದೆ ಎಂದು ಕಂಡುಬರುತ್ತದೆ. ವ್ಯಾಪಾರ ಎಂದರೆ ಲಾಭ ಮಾಡುವುದು ಎಂಬ ಮನೋಭಾವ ಈಗ ಎಲ್ಲೆಡೆ ಎದ್ದು ಕಾಣುತ್ತಿದೆ. ಆದರೆ ಎಲ್ಲಾ ವ್ಯಾಪಾರಿಗಳು ಲಾಭಕೋರರು ಎಂದೇನಲ್ಲ, ಅನೇಕರು ದಾನಧರ್ಮಗಳಲ್ಲಿ ಈಗಲೂ ಮುಂದಿದ್ದಾರೆ. ಇಲ್ಲಿ ಮುಖ್ಯವಾಗಿ ಉಳಿತಾಯದ ಮನೋಭಾವವನ್ನು ಗುರುತಿಸಬೇಕು. ಇಂದು ಉಳಿತಾಯ ಮಾಡಿದರೆ ನಾಳಿನ ಜೀವನ ಸುಗಮ, ಸುರಕ್ಷಿತ ಎಂದು ಕಂಡುಕೊಂಡಿದ್ದರ ಪರಿಣಾಮ ಅವರು ನಿರಾಳವಾದ ಜೀವನ ಮಾಡುತ್ತಿದ್ದರು.

ಇತ್ತೀಚೆಗೆ ಇಡೀ ವಿಶ್ವ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾಗ ಭಾರತ ಅಂತಹ ತೊಂದರೆ ಎದುರಿಸಲಿಲ್ಲ, ಅಂದರೆ ಇಲ್ಲಿ ಆರ್ಥಿಕ ದುಸ್ಥಿತಿ ಇರಲಿಲ್ಲ ಎಂದಲ್ಲ, ಆದರೆ ಜನರಲ್ಲಿನ ಉಳಿತಾಯದ ಮನೋಭಾವದಿಂದ, ಅವರ ಮುಂದಾಲೋಚನೆಯ ಕಾರಣ, ದೇಶ ಅಂತಹ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಿತು.

ನಮ್ಮಲ್ಲಿ ಮುಖ್ಯವಾಗಿ ಹೇಳುವ ಮಾತೆಂದರೆ ಬಿತ್ತಿದಂತೆ ಬೆಳೆ ಎಂದು. ನಾವು ಹೇಗೆ ಸಮಯಕ್ಕೆ ಸರಿಯಾಗಿ ಭೂಮಿ ಹದ ಮಾಡಿ, ಉತ್ತಮ ಬೀಜ ಬಿತ್ತಿದರೆ ಒಳ್ಳೆಯ ಬೆಳೆ ಬಂದೇ ಬರುತ್ತದೆ ಎಂಬುದು ಈ ಮಾತಿನ ಅರ್ಥ. ಎಚ್ಚರಿಕೆಗಾಗಿ ಹಾಗೂ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಈ ಮಾತನ್ನು ಹೇಳಲಾಗುತ್ತದೆ. ಇದು ಮನುಷ್ಯನಿಗೂ ಅನ್ವಯಿಸುತ್ತದೆ. ಮೊದಲನೆಯದಾಗಿ ನಾವು ಮಕ್ಕಳನ್ನು ಹೇಗೆ ಬೆಳೆಸುತ್ತೇವೆಯೋ, ಮಕ್ಕಳು ಹಾಗೇ ಬೆಳೆಯುತ್ತಾರೆ. ಅವರಿಗೆ ದುರ್ಬುದ್ಧಿ ಕಲಿಸುತ್ತಾ ಹೋದರೆ ಅವರು ಅಂತಹ ದುರ್ಬುದ್ಧಿಯೇ ಸರಿ ಎಂದು ಭಾವಿಸಿ ಅದನ್ನೇ ಜೀವನ ಕ್ರಮವಾಗಿಸಿ ಕೊಳ್ಳುತ್ತಾರೆ. ಅವರಿಗೆ ಸತ್ಕರ್ಮವನ್ನು ಹೇಳಿಕೊಡುತ್ತಾ ಹೋದರೆ ಅವರು ಸತ್ಕರ್ಮಿಗಳಾಗುತ್ತಾ ಹೋಗುತ್ತಾರೆ. ಇದನ್ನು ನಾವು ಮನೆಮನೆಗಳಲ್ಲಿ ನೋಡುತ್ತೇವೆ. ಅಕ್ಕಪಕ್ಕದ ಮನೆಯವರ ಸ್ವಭಾವ ಒಂದೇ ರೀತಿಯಾಗಿರುವುದಿಲ್ಲ, ಇದಕ್ಕೆ ಕಾರಣ ಅವರ ಮನೆಯ ನಡವಳಿಕೆಯೇ ಆಗಿರುತ್ತದೆ.

ಈ ಮಾತು ಉಳಿತಾಯಕ್ಕೂ ಅನ್ವಯವಾಗುತ್ತದೆ. ಯಾವುದನ್ನೂ

> ನಾವು ಮಾಡುವ ಪ್ರತಿಯೊಂದು ಕೆಲಸವೂ ಮುಂದೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಯೋಚಿಸಬೇಕಾಗುತ್ತದೆ. ವಿಜ್ಞಾನಿಗಳು ಇಂತಹ ಮನೋಭಾವದಿಂದಲೇ ಪ್ರಯೋಗಗಳನ್ನು ಮಾಡುತ್ತಾರೆ. ಒಂದು ಪ್ರಯೋಗ ವಿಫಲವಾಯಿತು ಎಂದರೆ ಎಲ್ಲಿ ತಪ್ಪಾಯಿತು? ಎಂದು ಹುಡುಕಿ ಅದನ್ನು ಸರಿಪಡಿಸಿ ಪ್ರಯೋಗ ಮುಂದುವರೆಸುತ್ತಾರೆ. ಅಂದುಕೊಂಡ ಫಲಿತಾಂಶ ಸಿಗುವವರೆಗೂ ಪ್ರಯೋಗ ಮುಂದುವರೆಸುತ್ತಾರೆ. ನಮ್ಮ ಜೀವನವೂ ಹಾಗೆ ನಿಗದಿತ ಫಲಿತಾಂಶ ದೊರಕುವವರೆಗೆ, ಆಗಿರುವ, ಆಗುತ್ತಿರುವ ತಪ್ಪು ಯಾವುದು ಎಂದು ಕಂಡುಕೊಂಡು ಆ ತಪ್ಪುಗಳನ್ನು ತಿದ್ದುತ್ತಾ ಜೀವನವನ್ನು ಸರಿದಾರಿಗೆ ತಂದುಕೊಳ್ಳಬೇಕು.

ವ್ಯರ್ಥ ಮಾಡಬಾರದು ಎಂಬ ಮನೋಭಾವ ಕಲಿಸಿದರೆ ಮಕ್ಕಳು ಎಚ್ಚರಿಕೆಯ ಜೀವನ ಕಲಿಯುತ್ತಾರೆ. ಅಂದರೆ ಬಿತ್ತಿದ ಬೆಳೆಯೇ ಬರುತ್ತದೆ ಎಂಬುದು ಇದಕ್ಕೆ ಅನ್ವಯಿಸುತ್ತದೆ. ನಮ್ಮಲ್ಲಿ ಹಿಂದಿ ನಿಂದಲೂ ಮಕ್ಕಳಿಗೆ ಹೇಳುತ್ತಿದ್ದ ಕಥೆಗಳಲ್ಲಿಯೂ ಇಂತಹುದೇ ವಿಷಯಗಳು ಇರುತ್ತಿದ್ದವು. ಯಾರೂ ಮಕ್ಕಳಿಗೆ ಕೆಟ್ಟದ್ದನ್ನು ಹೇಳಿಕೊಡುತ್ತಿರಲಿಲ್ಲ. ಆದರೆ ಹೇಳುವುದು ಒಂದು, ಮಾಡುವುದು ಮತ್ತೊಂದು ಎಂಬಂತೆ ಮಕ್ಕಳಿಗೆ ಉಪದೇಶ ಮಾಡಿದ್ದರ ವಿರುದ್ಧವಾದ ನಡವಳಿಕೆಯನ್ನು ಪೋಷಕರು ಹೊಂದಿದ್ದರೆ ಮಕ್ಕಳೂ ಸಹಜವಾಗಿ ನಡವಳಿಕೆಯನ್ನೇ ಅನುಕರಿಸುತ್ತಾರೆ. ಮಕ್ಕಳನ್ನು ಬೆಳೆಸುವಾಗ ಎರಡು ರೀತಿಯ ಎಚ್ಚರಿಕೆ ವಹಿಸಬೇಕಾಗುತ್ತದೆ. ಅವರು ಮನೆಗೆ ಉಪಕಾರಿಯಾಗುವಂತೆ ಮಾಡುವುದರ ಜೊತೆಗೆ ಅವರು ಸಮಾಜದ್ರೋಹಿಗಳಾಗದಂತೆಯೂ ಬೆಳೆಸಬೇಕಾದುದರ ಕಡೆಗೂ ಗಮನ ಕೊಡಬೇಕು. ಅದರಲ್ಲೂ ಮಕ್ಕಳು ಸಮಾಜಮುಖಿ ಜೀವನ ನಡೆಸುವ ಕಡೆಗೆ ಗಮನ ಹರಿಸಬೇಕಾದುದು ಅಗತ್ಯ.


ಮಕ್ಕಳಲ್ಲಿ ಜ್ಞಾನದ ಹಂಬಲ ಮೂಡುವಂತೆ ಮಾಡುವುದೂ ಅಗತ್ಯ. ಅವರು ಕೇವಲ ತಿಂದುಂಡುಕೊಂಡು ಜೀವನ ಮಾಡಬಾರದು. ಜೀವನಕ್ಕೆ ಒಂದು ಉದ್ದೇಶವಿದೆ ಎಂಬುದನ್ನು ಅವರಿಗೆ ಕಲಿಸಿಕೊಡಬೇಕು. ಅವರು ಜ್ಞಾನಿಗಳಾಗುವುದರಿಂದ ಅವರಿಗೆ ಹಾಗೂ ಸಮಾಜಕ್ಕೆ ಅನುಕೂಲವಾಗುತ್ತದೆ. ಜ್ಞಾನತೃಷೆ ಇರುವವನಿಗೆ ಜ್ಞಾನದ ಬಗ್ಗೆ ವ್ಯಾಮೋಹ ಇರುತ್ತದೆ. ಅವರಿಗೆ ಆಹಾರದ ಹಸಿವು ಇರುವುದಿಲ್ಲ. ಆ ರೀತಿಯಾಗಿ ಮಕ್ಕಳನ್ನು ಬೆಳೆಸಬೇಕು. ಇದಕ್ಕೆ ಪೂರಕವಾದ ಒಂದು ಕಥೆ ಇದೆ. ಅದು ಐನಸ್ಟಿನ್ ಅವರಿಗೆ ಸಂಬಂಧಿಸಿದ್ದು. ಐನ್‌ಸ್ಟಿನ್ ಜ್ಞಾನದಾಹಿಯಾಗಿದ್ದರು. ಅವರು ಸಂಶೋಧನೆಯಲ್ಲಿ, ಪ್ರಯೋಗಶಾಲೆಯಲ್ಲಿ ನಿರತರಾಗಿರುವಾಗ ಅವರಿಗೆ ಹಸಿವು, ನೀರಡಿಕೆಯೇ ಆಗುತ್ತಿರಲಿಲ್ಲ. ಒಮ್ಮೆ ಅವರು ಹೀಗೆ ಪ್ರಯೋಗಶಾಲೆಯಲ್ಲಿ ಸಂಶೋಧನೆಯಲ್ಲಿ ಮಗ್ನರಾಗಿದ್ದರು. ಕೆಲಸದ ಆಳು ಬಂದು ಊಟದ ತಟ್ಟೆ ಇರಿಸಿ ತೆರಳಿದ. ಆನಂತರ ಸ್ವಲ್ಪ ಹೊತ್ತಿನಲ್ಲಿ ಐನ್‌ಸ್ಟಿನ್ ಅವರ ಸ್ನೇಹಿತ, ಅವರನ್ನು ಭೇಟಿಯಾಗಲು ಬಂದ. ಐನ್‌ಸ್ಟಿನ್ ಪ್ರಯೋಗದಲ್ಲಿ ಮಗ್ನರಾಗಿದ್ದರು. ಗೆಳೆಯ ಬಂದುದನ್ನೂ ಗಮನಿಸಲಿಲ್ಲ, ಪ್ರಯೋಗಾಲಯದಿಂದ ಹೊರಗೂ ಬರಲಿಲ್ಲ. ಆ ಗೆಳೆಯನಿಗೆ ಊಟದ ತಟ್ಟೆ ಕಣ್ಣಿಗೆ ಕಂಡಿತು. ಮುಚ್ಚಿದ್ದ ತಟ್ಟೆಯನ್ನು ತೆಗೆದು ನೋಡಿದ ಊಟವಿತ್ತು. ಅವನಿಗೆ ಹಸಿವಾಗಿತ್ತು. ಆ ಊಟವನ್ನು ಮಾಡಿ, ಮೊದಲಿನ ಹಾಗೆಯೇ ತಟ್ಟೆ ಮುಚ್ಚಿಟ್ಟು, ಮತ್ತಷ್ಟು ಸಮಯ ಗೆಳೆಯನಿಗಾಗಿ ಕಾದು, ಕೊನೆಗೆ ಮರುದಿನ ಭೇಟಿಯಾದರಾಯಿತು ಎಂದು ಹೊರಟುಹೋದ. ಸ್ವಲ್ಪ ಸಮಯದ ನಂತರ ಐನ್‌ಸ್ಟಿನ್ ಅವರಿಗೆ ಹಸಿವು ಎನಿಸಿತು. ಊಟಕ್ಕಾಗಿ ಪ್ರಯೋಗಾಲಯದಿಂದ ಹೊರಗೆ ಬಂದರು. ಮುಚ್ಚಿಟ್ಟ ತಟ್ಟೆಯನ್ನು ನೋಡಿದರು. ತೆಗೆದು ನೋಡಿದರೆ ಖಾಲಿ. 'ಓಹೋ! ನಾನು ಆಗಲೇ ಊಟಮಾಡಿ ಮುಗಿಸಿದ್ದೇನೆ' ಎಂದುಕೊಂಡು ಮತ್ತೆ ಪ್ರಯೋಗಾಲಯಕ್ಕೆ ಮರಳಿದರು. ಆನಂತರ ಅವರಿಗೆ ಹಸಿವು ಗೊತ್ತಾಗಲೇ ಇಲ್ಲ. ಅಂದರೆ ಹಸಿವು ಎಂಬುದು ಒಂದು ರೀತಿಯ ಭ್ರಮೆ. ಊಟವಿಲ್ಲದಿದ್ದರೂ ಬದುಕಬಹುದು, ಆದರೆ ಜ್ಞಾನಕ್ಕಾಗಿ ಹಪಹಪಿಸುವ ಮನೋಭಾವ ಇರಬೇಕು. ಇದು ಅಂತಹವರಿಗೆ ತಾನಾಗೇ ಒಲಿದು ಬರುವುದಿಲ್ಲ. ಅದರಲ್ಲಿ ಪೋಷಕರ ಪಾತ್ರವೂ ಮುಖ್ಯವಾಗಿರುತ್ತದೆ. ಮಕ್ಕಳಿಗೆ ಯಾವುದು ಮುಖ್ಯ? ಊಟ–ತಿಂಡಿಯೇ? ಅಥವಾ ಜ್ಞಾನಾರ್ಜನೆಯೇ ಎಂಬುದನ್ನು ಅವರು ಮಕ್ಕಳಿಗೆ ಕಲಿಸಿಕೊಟ್ಟರೆ ಮಕ್ಕಳು ಅದರಂತೆ ಬೆಳೆದು ಐನ್‌ಸ್ಟಿನ್ ರಂತಹ ವಿಜ್ಞಾನಿಯಾಗಿ ಸಮಾಜಕ್ಕೆ ಕೊಡುಗೆಯಾಗುತ್ತಾರೆ. ಜ್ಞಾನತೃಷೆ ಇರುವವನೇ ಜೀವನದಲ್ಲಿ ಉನ್ನತ ಸ್ಥಾನ ಗಳಿಸುತ್ತಾನೆ ಎಂಬ ಅರಿವು ನಮಗಿರಬೇಕಾಗುತ್ತದೆ.

ನಾವು ಇಂದಿಗಾಗಿ ಅಲ್ಲ, ನಾಳೆಗಾಗಿಯೂ ಬದುಕಬೇಕು. ಇದನ್ನು ಮುಂದಾಲೋಚನೆ ಎಂದು ಕರೆಯಲಾಗುತ್ತದೆ. ಬಿತ್ತಿದ ಬೆಳೆ ಆ ಕೂಡಲೇ ಫಲವಾಗಿ ಕೈಗೆ ಬರುವುದಿಲ್ಲ. ಅದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಅಲ್ಲಿಯವರೆಗೆ ಆ ಗಿಡಕ್ಕೆ ನೀರು, ಗೊಬ್ಬರ ಹಾಕುತ್ತಿರಬೇಕು, ಆರೈಕೆ ಮಾಡಬೇಕು. ಆಗ ಆ ಗಿಡ ಉತ್ತಮ ಫಲ ನೀಡುತ್ತದೆ. ಇದು ಮಕ್ಕಳ ಪಾಲನೆಗೂ ಅನ್ವಯಿಸುತ್ತದೆ. ಮಕ್ಕಳು ಬೆಳೆದು ವಿದ್ಯಾವಂತರಾಗಬೇಕು, ಗಣ್ಯ ವ್ಯಕ್ತಿಯಾಗಿ ಬೆಳೆಯಬೇಕು ಎಂದು ಅಂದುಕೊಂಡರೆ ಆಗುವುದಿಲ್ಲ. ಅದಕ್ಕೆ ಪೂರಕವಾದ ವಾತಾವರಣ ನಿರ್ಮಿಸುವುದೂ ಪೋಷಕರ ಹೊಣೆಯಾಗಿರುತ್ತದೆ. ಮಕ್ಕಳು ಬೆಳೆದು ಪೋಷಕರನ್ನು ಸಲಹಬೇಕು ಎಂದು ಬಯಸುವುದಾದರೆ, ಪೋಷಕರು ಮಕ್ಕಳ ಹಿತಚಿಂತಕರಾಗಿರಬೇಕಾಗುತ್ತದೆ. ಕೇವಲ ಅವರು ದೊಡ್ಡ ವ್ಯಕ್ತಿಗಳಾಗಲಿ ಎಂದು ಬಯಸುವುದರಿಂದ ಅವರು ದೊಡ್ಡವರಾಗುವುದು ಸಾಧ್ಯವಿಲ್ಲ. ಅಲ್ಲದೆ ಮಕ್ಕಳು ತಾವು ದೊಡ್ಡವರಾದ ನಂತರ ತನ್ನ ತಂದೆತಾಯಿಯರು ತನ್ನೊಡನೆ ಹೇಗೆ ನಡೆದುಕೊಂಡಿದ್ದರು? ನನ್ನ ಬೆಳವಣಿಗೆಯಲ್ಲಿ ಅವರ ಪಾತ್ರ ಏನಿತ್ತು? ಎಂಬ ಬಗ್ಗೆ ವಿಮರ್ಶಿಸುತ್ತಾರೆ. ಅದೇ ರೀತಿ ಹೆತ್ತವರೊಡನೆ ತಾವೂ ನಡೆದುಕೊಳ್ಳುತ್ತಾರೆ. ಇತ್ತೀಚೆಗೆ ಒಬ್ಬರು ಹೇಳಿದ ಮಾತು ನೆನಪಾಗುತ್ತದೆ. ನಾವು ಮಕ್ಕಳನ್ನು ಹೇಗೆ ಬೆಳೆಸುತ್ತೇವೆ ಎಂದರೆ, ಮಕ್ಕಳನ್ನು ನಮ್ಮೊಡನೆ ಹೆಚ್ಚು ಹೊತ್ತು ಇಟ್ಟುಕೊಳ್ಳಲು ಬಯಸುವುದಿಲ್ಲ. ಅವರು ಚಿಕ್ಕವರಿರುವಾಗಲೇ ಮಕ್ಕಳು ಕಿರಿಕಿರಿ ಮಾಡುವವರು ಎಂದು ಭಾವಿಸಿ ಯಾವುದಾದರೂ ಕಿಂಡರ್‌ಗಾರ್ಟನ್‌ಗೆ ಸೇರಿಸಿಬಿಡುತ್ತಾರೆ. ಹೆಚ್ಚು ದುಡ್ಡು ಖರ್ಚಾದರೂ ಪರವಾಗಿಲ್ಲ ಎಂದು ಹೆಚ್ಚು ಹಣ ತೆಗೆದುಕೊಳ್ಳುವ ಶಾಲೆಗೆ ಸೇರಿಸಿಬಿಡುತ್ತಾರೆ. ಅವರಿಗೆ ತಮ್ಮ ಮಕ್ಕಳನ್ನೇ ತಾವು ನೋಡಿಕೊಳ್ಳಲಾಗುವುದಿಲ್ಲ. ಇದು ಮಕ್ಕಳ ಮೇಲೆ ಗೊತ್ತಿಲ್ಲದೇ ಪರಿಣಾಮ ಬೀರಿರುತ್ತದೆ. ಅವರು ದೊಡ್ಡವರಾದ ಮೇಲೆ ಅವರಿಗೆ ತಂದೆತಾಯಿಯರು ಹೊರೆ ಎನಿಸುತ್ತಾರೆ. ಹಾಗಾಗಿ ಅವರನ್ನು ವೃದ್ಧಾಶ್ರಮಕ್ಕೆ ಸೇರಿಸಿಬಿಡುತ್ತಾರೆ. ತಮ್ಮ ಬಾಲ್ಯದಲ್ಲಿ ತಂದೆತಾಯಿ ಯೋಚಿಸಿದಂತೆ, ಸ್ವಲ್ಪ ಹೆಚ್ಚು ದುಡ್ಡಾದರೂ ಪರವಾಗಿಲ್ಲ ಎಂದು ಅಂತಹದೇ ವೃದ್ಧಾಶ್ರಮಕ್ಕೆ ಸೇರಿಸಿಬಿಡುತ್ತಾರೆ. ಆಗ ತಂದೆ ತಾಯಿಗೆ ಜ್ಞಾನೋದಯವಾಗುತ್ತದೆ. ಹಿಂದೆ ತಾವು ಮಾಡಿದ ತಪ್ಪಿನ ಅರಿವಾಗುತ್ತದೆ. ಆದರೆ ಕಾಲ ಮೀರಿರುತ್ತದೆ. ಇದೂ ಬಿತ್ತಿದಂತೇ ಬೆಳೆ ಎಂಬುದಕ್ಕೆ ಉದಾಹರಣೆ. ಮಕ್ಕಳೊಡನೆ ಬಾಲ್ಯದಿಂದಲೂ ಒಳ್ಳೆಯ ಒಡನಾಟ, ಪ್ರೀತಿ ಇದ್ದಲ್ಲಿ ಇಂತಹ ಪರಿಸ್ಥಿತಿ ಬರುವುದಿಲ್ಲ. ನಾವು ಮಕ್ಕಳನ್ನು ಮುಂದೆ ನಮಗೆ ಆಸರೆಯಾಗುತ್ತಾರೆ ಎಂದು ಭಾವಿಸುವುದಾದರೆ, ಮೊದಲಿನಿಂದಲೂ ಪೂರಕವಾಗಿ ಬೆಳೆಸಬೇಕಾಗುತ್ತದೆ. ಮಕ್ಕಳನ್ನು ಬೆಳೆಸುವುದು ಎಂದರೆ ಅವರಿಗೆ ಬೇಕಾದ್ದನ್ನು ಕೊಡಿಸುವುದು ಎಂದಲ್ಲ, ಅವರನ್ನು ಬೆಳೆಸಬೇಕಾದುದು ಪ್ರೀತಿ ವಿಶ್ವಾಸಗಳಿಂದ. ಇದು ಅರ್ಥವಾಗಬೇಕು.

ನಾವು ಮಾಡುವ ಪ್ರತಿಯೊಂದು ಕೆಲಸವೂ ಮುಂದೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಯೋಚಿಸಬೇಕಾಗುತ್ತದೆ. ವಿಜ್ಞಾನಿಗಳು ಇಂತಹ ಮನೋಭಾವದಿಂದಲೇ ಪ್ರಯೋಗ ಗಳನ್ನು ಮಾಡುತ್ತಾರೆ. ಒಂದು ಪ್ರಯೋಗ ವಿಫಲವಾಯಿತು ಎಂದರೆ ಎಲ್ಲಿ ತಪ್ಪಾಯಿತು? ಎಂದು ಹುಡುಕಿ ಅದನ್ನು ಸರಿಪಡಿಸಿ ಪ್ರಯೋಗ ಮುಂದುವರೆಸುತ್ತಾರೆ. ಅಂದುಕೊಂಡ ಫಲಿತಾಂಶ ಸಿಗುವವರೆಗೂ ಪ್ರಯೋಗ ಮುಂದುವರೆಸುತ್ತಾರೆ. ನಮ್ಮ ಜೀವನವೂ ಹಾಗೆ ನಿಗದಿತ ಫಲಿತಾಂಶ ದೊರಕುವವರೆಗೆ, ಆಗಿರುವ, ಆಗುತ್ತಿರುವ ತಪ್ಪು ಯಾವುದು ಎಂದು ಕಂಡುಕೊಂಡು ಆ ತಪ್ಪುಗಳನ್ನು ತಿದ್ದುತ್ತಾ ಜೀವನವನ್ನು ಸರಿದಾರಿಗೆ ತಂದುಕೊಳ್ಳಬೇಕು. ನಾವು ಮಾಡುತ್ತಿರುವುದರಿಂದ ಭವಿಷ್ಯದಲ್ಲಿ ಯಾವ ಫಲ ನೀಡುತ್ತದೆ ಎಂಬ ಅವಲೋಕನ ಮಾಡಬೇಕು. ಇದನ್ನು ಚಿಕಿತ್ಸಾ ಬುದ್ಧಿ ಎಂದು ಕರೆಯಲಾಗುತ್ತದೆ.

ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಳ: ವಿಶ್ವನಾಥ್ ಸ್ವಾಗತ

ಮೈಸೂರು,ಅ.8(ಎಂಟಿವೈ)– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ಈ ಪ್ರಕ್ರಿಯೆಯನ್ನು ವಿಸ್ತೃತವಾಗಿ ಚರ್ಚಿಸಿ, ಕಾನೂನಾಗಿ ಪರಿವರ್ತಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಇಂದಿಲ್ಲಿ ಸಲಹೆ ನೀಡಿದ್ದಾರೆ.



ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಳಕ್ಕಾಗಿ ಹಲವು ವರ್ಷ ಹೋರಾಟ ನಡೆಯುತ್ತಲೇ ಇತ್ತು. ವಾಲ್ಮೀಕಿ ಶ್ರೀಗಳು 240 ದಿನಗಳಿಂದ ಪ್ರತಿಭಟನೆ ನಡೆಸುತ್ತಲೇ ಇದ್ದಾರೆ. ಇದರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ವ ಪಕ್ಷಗಳ ಸಭೆ ಕರೆದು ಎಲ್ಲರ ಒಪ್ಪಿಗೆ ಪಡೆದು ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಲು ನಿರ್ಧರಿಸಿದ್ದಾರೆ. ಈ ಹೋರಾಟಕ್ಕೆ ಯಶಸ್ಸು ಸಿಗಬೇಕಾದರೆ ಈ ಹಿಂದೆ ಪ್ರಯತ್ನ ಪಟ್ಟವರನ್ನು ನಾವು ನೆನೆಸಿಕೊಳ್ಳಬೇಕು. ವಾಲ್ಮೀಕಿ ಶ್ರೀಗಳು, ಈ ಹಿಂದೆ ಹುಣಸೂರು ಶಾಸಕರಾಗಿದ್ದ ಚಿಕ್ಕಮಾದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ನೆನೆಸಿಕೊಳ್ಳಬೇಕಾಗಿದೆ ಎಂದರು.

ಮೀಸಲಾತಿ ಪ್ರಮಾಣ ಹೆಚ್ಚಳದ ಬಗ್ಗೆ ತಜ್ಞರೊಂದಿಗೆ ವಿಸ್ತೃತ ಚರ್ಚೆ ನಡೆಸಬೇಕಾಗಿದೆ. ಮಹಾರಾಷ್ಟ್ರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಹೆಚ್ಚಳವಾದ ಮೀಸಲಾತಿ ಆದೇಶವನ್ನು ನ್ಯಾಯಾಲಯ ತಿರಸ್ಕರಿಸಿದೆ. ರಾಜ್ಯದಲ್ಲೂ ಮೀಸಲಾತಿ ಹೆಚ್ಚಳ ಆದೇಶ ತಿರಸ್ಕೃತಗೊಳ್ಳದಂತೆ ಕಟ್ಟೆಚ್ಚರ ವಹಿಸುವಂತೆ ಮಾಜಿ ಮುಖ್ಯಮಂತ್ರಿಗಳೂ ಹಾಗೂ ವಿಪಕ್ಷಗಳ ನಾಯಕರಾದ ಸಿದ್ದರಾಮಯ್ಯ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಸಲಹೆ ನೀಡಿದ್ದಾರೆ.

ಮೀಸಲಾತಿ ಒಮ್ಮೆ ಸಿಕ್ಕವರಿಗೆ ಮತ್ತೆ ಸಿಗದಂತೆ ನೋಡಿಕೊಳ್ಳಬೇಕು. ವಿಶ್ವನಾಥ್ ಮಗ, ಮಲ್ಲಿಕಾರ್ಜುನ ಖರ್ಗೆ ಮಕ್ಕಳಿಗೆ ಮೀಸಲಾತಿ ಸೌಲಭ್ಯ ದೊರೆಯದಂತೆ ನೋಡಿಕೊಳ್ಳಬೇಕಿದೆ. ಈ ಭರಾಟೆಯಲ್ಲಿ ಹಿಂದುಳಿದ ವರ್ಗದ ಮೀಸಲಾತಿ ಕಸಿಯುವ ಕೆಲಸ ಆಗಬಾರದು. ಮಲ ಹೊರುವವನು ಎಸ್ಸಿ ಆದರೆ, ಅದನ್ನು ತೊಳೆಯುವ ಮಡಿವಾಳ ಸಮಾಜದವರನ್ನು ಎಲ್ಲಿ ಇಟ್ಟಿದ್ದೀರಾ? ಸವಿತಾ ಸಮಾಜವನ್ನು ಸಹ ಯಾರು ಮರೆಯಬಾರದು ಎಂದರು.

ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗ 2ಎ ಮೀಸಲಾತಿ ಪಟ್ಟಿಗೆ ಸೇರಿಸುವ ಕುರಿತು ಪ್ರತಿಕ್ರಿಯಿಸಿದ ಅವರು, ಮೀಸಲಾತಿ ಸೌಲಭ್ಯ ಕೇಳುವು ದಕ್ಕೆ ಎಲ್ಲರಿಗೂ ಹಕ್ಕಿದೆ. ಹಾಗಾಗಿ ಎಲ್ಲ ಸಮಾಜದವರು ಮೀಸಲಾತಿ ಕೇಳುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವದಲ್ಲಿ ಮತದಾರರು ಮಾಲೀಕರಾಗಿ ಉಳಿದಿಲ್ಲ ನಮ್ಮ ಮಾಲೀಕರು ಮಠ ಹಾಗೂ ಮಾಧ್ಯಮಗಳಾಗಿದೆ. ಮಠಗಳಲ್ಲೇ ಈಗ ಯಾರು ಸಿಎಂ ಎಂಬುದು ನಿರ್ಧಾರವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಟಿಪ್ಪು ಎಕ್ಸ್‌ಪ್ರೆಸ್ ರೈಲಿಗೆ ಒಡೆಯರ್ ಹೆಸರು ಬದಲಾವಣೆಗೆ ನಾನು ಆಕ್ಷೇಪ ಮಾಡುವುದಿಲ್ಲ. ಟಿಪ್ಪುವಿನ ಹೆಸರನ್ನು ಮನಸ್ಸಿನಿಂದ ತೆಗೆದು ಹಾಕಲು ಸಾಧ್ಯವಿಲ್ಲ. ಆತನ ಹೋರಾಟ ಅಜರಾಮರ. ಯದುವಂಶದ ಹೋರಾಟ ಕೂಡ ಅಜರಾಮರ. ಹೆಸರು ಬದಲಾವಣೆಯಿಂದ ಏನು ಪ್ರಯೋಜನವಾಗುವುದಿಲ್ಲ. ಈಗ ಜನರ ಮನಸ್ಥಿತಿ ಏನು ಬೇಕಾದರೂ ಮಾಡಿಕೊಂಡು ಹೋಗಲಿ ಅನುವಂತಾಗಿದೆ. ಯಾವ ಚಳುವಳಿಗಳು ನಡೆಯುತ್ತಿಲ್ಲ ಎಂದು ಬೇಸರಿಸಿದರು.

ಸಂಸದ ಪ್ರತಾಪ್ ಸಿಂಹ ಅವರು ಮೈಸೂರು ಮಹಾರಾಜರನ್ನು ಹೊರತುಪಡಿಸಿದರೆ ನಾನು ಹೆಚ್ಚು ಕೆಲಸ ಮಾಡಿದ್ದೇನೆ ಅಂಥಾ ಹೇಳ್ತಾರೆ. ಅವರ ಬಗ್ಗೆ ನಾನು ಏನು ಹೇಳಲಿ ಹೇಳಿ ಎಂದು ಕುಟುಕಿದರು.

ತುಟ್ಟಿಭತ್ಯೆ ಹೆಚ್ಚಳ; ಸಿಎಂ ಬೊಮ್ಮಾಯಿಗೆ ಅಭಿನಂದನೆ

ಮೈಸೂರು,ಅ.8–ಸರ್ಕಾರಿ ನೌಕರರಿಗೆ ಜೂ.1ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆ ಹೆಚ್ಚಳ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರಾಜ್ಯ ಸರ್ಕಾರಿ ನೌಕರರ ಸಂಘ ಮೈಸೂರು ಘಟಕ ಅಭಿನಂದನೆ ಸಲ್ಲಿಸಿದೆ. ತುಟ್ಟಿಭತ್ಯೆ ಹೆಚ್ಚಳ ಕುರಿತು ಕೇಂದ್ರ ಸಂಘವು ಸಲ್ಲಿಸಿದ ಮನವಿಗೆ 24 ಗಂಟೆಯೊಳಗೆ ಸ್ಪಂದಿಸಿ, ಮುಖ್ಯಮಂತ್ರಿ ಬೊಮ್ಮಾಯಿ ಅವರು ಮೂಲ ವೇತನಕ್ಕೆ ಶೇ.3.75 ತುಟ್ಟಿಭತ್ಯೆ ಹೆಚ್ಚಳ ಮಾಡಿರುವುದು ಸ್ವಾಗತಾರ್ಹ ಎಂದು ಜಿಲ್ಲಾಧ್ಯಕ್ಷ ಜಿ.ಗೋವಿದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕೆ.ಬಿ.ಲಿಂಗರಾಜು ಆಯ್ಕೆ



ಮೈಸೂರು,ಅ.8–ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಾರ್ಯಕಾರಿ ಸಮಿತಿಗೆ ಸೆ.30ರಂದು ನಡೆದ ಚುನಾವಣೆಯಲ್ಲಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಎಂದು ಮೈಸೂರು ವಾಣಿಜ್ಯ–ಕೈಗಾರಿಕಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ; '15 ಸ್ಕಿಲ್ಸ್ ಫಾರ್ ಸ್ಟೂಡೆಂಟ್ಸ್' ಕೃತಿ ಬಿಡುಗಡೆ

ಮೈಸೂರು,ಅ.8(ಪಿಎಂ)–ಹೆಬ್ಬಾಳ್‌ನ ದಿ ರಿವೈವ್ ನ್ಯೂರೋಸೈಕಿಯಾಟ್ರಿಕ್ ಕೇರ್ ಆಸ್ಪತ್ರೆ ವತಿಯಿಂದ ಅ.10ರಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆಯ ನಿರ್ದೇಶಕ ಡಾ.ವಿ.ಮೋಹನ್‌ಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಆಸ್ಪತ್ರೆ ಆವರಣದಲ್ಲಿ ಮಾನ ಸಿಕ ಆರೋಗ್ಯ ದಿನಾಚರಣೆ ಆಯೋಜಿಸಿದ್ದು, ಅತಿಥಿಯಾಗಿ ಆಗಮಿಸುವ ಹಿರಿಯ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಅವರು ಇದೇ ವೇಳೆ ತಮ್ಮದೇ ಪುಸ್ತಕ '15 ಸ್ಕಿಲ್ಸ್ ಫಾರ್ ಸ್ಟುಡೆಂಟ್ಸ್' ಬಿಡುಗಡೆ ಮಾಡಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಇದೇ ವೇಳೆ ಆತ್ಮಹತ್ಯೆ ತಡೆಗೆ ಆಸ್ಪತ್ರೆಯಿಂದ ಅಸ್ತಿತ್ವಕ್ಕೆ ತಂದಿರುವ ಉಚಿತ ಸಹಾಯವಾಣಿ (78927 90995) ಚಾಲನೆ ನೀಡಲಾಗುವುದು. ಆತ್ಮಹತ್ಯೆ ಚಿಂತನೆಗೆ ಒಳಗಾಗಿರುವವರು, ಅವರ ನೆರೆಹೊರೆಯವರು ಬೆಳಗ್ಗೆ 8ರಿಂದ ರಾತ್ರಿ 12ರವರೆಗೆ ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದು. ಜೊತೆಗೆ ಆಸ್ಪತ್ರೆಯಲ್ಲಿ ಒಂದು ತಿಂಗಳ ಉಚಿತ ಮಾನಸಿಕ ಆರೋಗ್ಯ ತಪಾಸಣೆ ಶಿಬಿರಕ್ಕೆ ಅಂದೇ ಚಾಲನೆ ನೀಡಲಾಗುವುದು. ಅ.10ರಿಂದ ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಈ ಉಚಿತ ತಪಾಸಣೆ ನಡೆಯಲಿದೆ ಎಂದು ತಿಳಿಸಿದರು. ಆಸ್ಪತ್ರೆಯ ಕಾರ್ಯಕಾರಿ ಸಮಿತಿ ನಿರ್ದೇಶಕ ಹಾಗೂ ಮನೋವೈದ್ಯ ಡಾ.ಕೆ.ಆರ್.ಕೃಷ್ಣ, ಆಪ್ತ ಸಮಾಲೋಚಕ ಪ್ರಭುದೇವ್ ಗೋಷ್ಠಿಯಲ್ಲಿದ್ದರು.

ವಿಧಾನಸೌಧ ಬ್ಲಾಸ್ಟ್ ಬೆದರಿಕೆ ಕರೆ: ಟೆಕ್ಕಿ ಅರೆಸ್ಟ್

ಬೆಂಗಳೂರು, ಅ.8– ವಿಧಾನಸೌಧಕ್ಕೆ ಬಾಂಬ್ ಬೆದರಿಕೆ ಹಾಕಿದ್ದ ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್ ಪ್ರಶಾಂತ್ ಎಂಬುವನನ್ನು ಪೊಲೀಸರು ಬಂಧಿಸಿದ್ದಾರೆ. ಶುಕ್ರವಾರ ಸರ್ಕಾರದ ಮುಖ್ಯ ಕಾರ್ಯದರ್ಶಿ ಕಚೇರಿಗೆ ಕರೆ ಮಾಡಿ, ವಿಧಾನಸೌಧದ ಎರಡು ಕಡೆ ಬಾಂಬ್ ಇರಿಸಲಾಗಿದೆ. ಸದ್ಯದಲ್ಲೇ ಸ್ಫೋಟಗೊಳ್ಳಲಿವೆ ಎಂದು ಹೇಳಿದ್ದ.


ಪೊಲೀಸರು ಪರಿಶೀಲನೆ ನಡೆಸಿ, ಬಳಿಕ ಇದೊಂದು ಹುಸಿ ಕರೆ ಎಂದು ತಿಳಿದು ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಕಾರ್ಯಾಚರಣೆ ನಡೆಸಿ ಪರಪ್ಪನ ಅಗ್ರಹಾರದ ಬಳಿ ಆರೋಪಿಯನ್ನು ಬಂಧಿಸಲಾಯಿತು ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್‌ಗೌಡ ತಿಳಿಸಿದ್ದಾರೆ. ನಿನ್ನೆ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ 3 ಬಾರಿ ಕರೆ ಮಾಡಿದ್ದ ಪ್ರಶಾಂತ್ ಇಬ್ಬರ ಜೊತೆಗೆ ಲಿವಿಂಗ್ ಟುಗೇದರ್ ನಲ್ಲಿದ್ದಾನೆ ಎಂಬ ಮಾಹಿತಿ ಇದೆ. ಈತ ಖಿನ್ನತೆಗೊಳಗಾಗಿದ್ದ. ಅಪರಿಚಿತರಿಂದ ನಂಗೆ ತೊಂದರೆ ಆಗ್ತಿದೆ ಎಂದು ಎಲ್ಲರ ಬಳಿ ಹೇಳಿಕೊಳ್ಳುತ್ತಿದ್ದ. ಆದರೆ ಯಾರೂ ಸೀರಿಯಸ್ ಆಗಿ ತೆಗೆದುಕೊಂಡಿರಲಿಲ್ಲ. ಕೋಪಗೊಂಡು ಈ ಕೃತ್ಯವೆಸಗಿರುವುದಾಗಿ ತನಿಖೆ ವೇಳೆ ತಿಳಿದುಬಂದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ
9-10-2022



ಮಹಾ ಕಾವ್ಯರ್ಷಿ ವಾಲ್ಮೀಕಿ ಮಹರ್ಷಿ

ಬನ್ನೂರು ಕೆ.ರಾಜು
ಮೊ. 9481533167

“ಬೇಡನಾಗಿ ಹುಟ್ಟಿದರೂ, ಪರಿವರ್ತನೆಯ ಕುಲುಮೆಯಲ್ಲಿ ಉರಿದು ಜ್ಞಾನದಗ್ನಿಯಲ್ಲಿ ಮಿಂದೆದ್ದು ತಮ್ಮ ಜ್ಞಾನಾಸ್ತ್ರದಿಂದ ಜಗತ್ತನ್ನೇ ಗೆದ್ದು ಮಹರ್ಷಿಯ ಪಟ್ಟಕ್ಕೇರಿ ರಾಮಾಯಣ ಮಹಾಕಾವ್ಯದ ಮೂಲಕ ಆದಿಕವಿಯಾಗಿ ಇಡೀ ಜಗತ್ತಿಗೆ ಸುಜ್ಞಾನದ ಮಹಾ ಬೆಳಕು ಸುರಿದ ಮಹಾಮುನಿ ವಾಲ್ಮೀಕಿ ಎಂದರೆ ಯಾವತ್ತೂ ಅದು ಕೇವಲ ಒಂದೆಸೆರೆನಿಸದೆ ಭರತ ಭೂಮಿಯ ಸುಸಂಸ್ಕೃತಿಯ ಒಂದು ಭವ್ಯ ಸಂಪತ್ತೆನಿಸುತ್ತದೆ. ದಿವ್ಯ ಸಂಪತ್ತು ಕೂಡ ಹೌದು. ವಾಲ್ಮೀಕಿ ಮಹರ್ಷಿಗಳು ಮಹಾ ಕಾವ್ಯವನ್ನಷ್ಟೇ ಬರೆಯಲಿಲ್ಲ. ಅವರೇ ಒಂದು ಮಹಾಕಾವ್ಯವಾಗಿ ಈ ನೆಲದ ಸಂಸ್ಕೃತಿಯಲ್ಲಿ ನೆಲೆಸಿದ್ದಾರೆ.

ಪಿತೃವಾಕ್ಯ ಪರಿಪಾಲನೆ ಎಂಬ ಮಾತು ಬಂದಾಗ ನಮಗೆ ತಕ್ಷಣ ರಾಮ ನೆನಪಿಗೆ ಬರುತ್ತಾನೆ.ತಂದೆ ದಶರಥ ಮಹಾ ರಾಜನ ಮಾತು ನಡೆಸಿ ಕೊಡಲು ರಾಜ್ಯ ಸೇರಿದಂತೆ ಸರ್ವಸ್ವವನ್ನೂ ತೊರೆದು ಕಾಡಿಗೆ ಹೊರಟ ಮರ್ಯಾದಾ ಪುರುಷೋತ್ತಮ ರಾಮನ ಕಥೆ ಯಾರಿಗೆ ತಾನೇ ತಿಳಿದಿಲ್ಲ? ಹಾಗೆಯೇ ಪತಿಯೇ ತನ್ನ ಪಾಲಿನ ಪರಮಾತ್ಮನೆಂದು ರಾಮನನ್ನು ಹಿಂಬಾಲಿಸಿದ ಪತ್ನಿ ಸೀತಾದೇವಿ, ಅಣ್ಣ-ಅತ್ತಿಗೆಗೆ ಸಂರಕ್ಷಕನಾಗಿ ಅವರ ಹೆಜ್ಜೆಗೆ ಹೆಜ್ಜೆ ಹಾಕಿದ ಸೋದರ ಲಕ್ಷ್ಮಣ, ಸಿಂಹಾಸನದಲ್ಲಿ ಅಣ್ಣನ ಪಾದುಕೆಗಳನ್ನೇ ಇಟ್ಟು ಅಣ್ಣನ ಹೆಸರಿನಲ್ಲೇ ರಾಜಾಳ್ವಿಕೆ ನಡೆಸುವ ಭ್ರಾತೃತ್ವಕ್ಕೊಂದು ಪರ್ಯಾಯ ಪದದಂತಿದ್ದ ತಮ್ಮ ಭರತ, ಕಾಡಿನಲ್ಲಿ ಸೀತೆಯನ್ನು ಕದ್ದೊಯ್ದ ರಾವಣಾಸುರ, ಸ್ವಾಮಿ ನಿಷ್ಠೆಯ ಭಕ್ತ ಹನುಮಂತನ ಲಂಕಾ ದಹನ, ಸೀತಾಮಾತೆಯನ್ನು ಬಂಧ ಮುಕ್ತಗೊಳಿಸಲು ಲಂಕೆಗೆ ಮುತ್ತಿಗೆ ಹಾಕಿದ ವಾನರ ಸೇನೆ, ಕೆಡುಕಿಗೆ ಬೆನ್ನು ತಿರುಗಿಸಿ ಒಳಿತಿಗೆ ಶರಣಾಗಿ ಸಹೋದರ ರಾವಣನನ್ನೇ ಬಿಟ್ಟು ಬಂದು ರಾಮನ ಬೆನ್ನಿಗೆ ನಿಲ್ಲುವ ವಿಭೀಷಣ, ಮಹಾ ಪತಿವ್ರತೆ ಯರ ಮಹಾ ಸಾಲಿನಲ್ಲಿ ನಿಲ್ಲುವ ರಾವಣನ ಸತಿ ಸಾಧ್ವಿ ಮಂಡೋದರಿ, ಲಂಕಾಧಿಪತಿ ರಾವಣನ ಸಂಹಾರ, ಸೀತಾಮಾತೆಯ ಬಿಡುಗಡೆ, ಮತ್ತೆ ಕಾಡಿನಲ್ಲಿ ಸೀತೆಯ ವನವಾಸ, ಕಾಡಿನಲ್ಲಿ ಲವ-ಕುಶರ ಜನನ.... ಹೀಗೆ ಈ ಎಲ್ಲಾ ಘಟನೆಗಳ,ಪಾತ್ರಗಳ ಹಿನ್ನೆಲೆಯಲ್ಲಿ ಬರುವ ಅನೇಕ ಕಥೆಗಳನ್ನು ಸಾಮಾನ್ಯವಾಗಿ ಬಹುತೇಕ ಎಲ್ಲರೂ ಕೇಳಿಯೇ ಇರುತ್ತಾರೆ. ಓದಿಯೇ ತಿಳಿದಿರುತ್ತಾರೆ.

ಇದೆಲ್ಲವೂ, ಇವೆಲ್ಲವೂ, ನಮ್ಮ ಭಾರತೀಯ ಸಂಸ್ಕೃತಿಯ ತಾಯಿ ಬೇರಿನಂತಿರುವ ನಮ್ಮ ನೆಲದ ಆದಿ ಕಾವ್ಯ ಎಂದು ಪರಿಗಣಿಸಲ್ಪಟ್ಟಿರುವ 'ರಾಮಾಯಣ' ಎಂಬ ಪ್ರಾಚೀನ ಮಹಾ ಕಾವ್ಯದಲ್ಲಿ ಕಾಣಬರುವ ಪಾತ್ರಗಳು. ಇದರ ಸೃಷ್ಟಿಕರ್ತರು ಅರ್ಥಾತ್ ರಚನೆಕಾರರು ವಾಲ್ಮೀಕಿ ಎಂಬ ಮಹರ್ಷಿಗಳು. 'ರಾಮಾಯಣ' ದಂತಹ ಜೀವನ ಮೌಲ್ಯಗಳುಳ್ಳ ಮಹಾಕಾವ್ಯ ವನ್ನು ಕಟ್ಟಿಕೊಟ್ಟ ವಾಲ್ಮೀಕಿಯನ್ನು ನಮ್ಮ ಪರಂಪರೆ ಬಹಳ ಗೌರವದಿಂದ ನೆನೆಯುತ್ತದೆ.ವಾಲ್ಮೀಕಿ ರಾಮಾಯಣವು ಅನೇಕ ಕಾವ್ಯ, ಕಥೆ, ಪುರಾಣ, ಇತಿಹಾಸಗಳು ಸೇರಿದಂತೆ ಪ್ರತಿಯೊಂದಕ್ಕೂ ಮೂಲವಾಗಿದ್ದು ಆಕರವಾಗಿದೆ. ಮಹರ್ಷಿ ವಾಲ್ಮೀಕಿ ಕುರಿತಂತೆ ಅನೇಕ ಕಥೆಗಳು,ದಂತಕಥೆಗಳಿವೆ. ಇವುಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಒಂದು ಕಥೆಯ ಪ್ರಕಾರ ಈತ 'ಪ್ರಾಚೇತಸ' ಎಂಬ ಋಷಿಯ ಮಗ. ಈತನಿಗೆ 'ರೂಕ್ಷ' 'ರತ್ನ' ಎಂಬ ಹೆಸರುಗಳ ಜೊತೆಗೆ ಪ್ರಾಚೇತಸ ಮುನಿಯ ಪುತ್ರನಾಗಿದ್ದರಿಂದ 'ಪ್ರಾಚೇತಸ' ಎನ್ನುವ ಹೆಸರುಗಳು ಇದ್ದವು. ಬಾಲ್ಯದಿಂದಲೂ ರೂಕ್ಷನಿಗೆ ದುಷ್ಟರ ಸಹವಾಸವೇ ಹೆಚ್ಚಾಗಿತ್ತು. ಹಾಗಾಗಿ ಬೆಳೆಯುತ್ತಾ ಹೋದಂತೆ ರೂಕ್ಷನಿಗೆ ದುಷ್ಟಬುದ್ಧಿಯೂ ಬೆಳೆದು ಇದರ ಪರಿಣಾಮ ದೊಡ್ಡ ಡಕಾಯಿತನಾದ. ಮದುವೆಯಾಗಿ ಆತ ಸಂಸಾರಸ್ತನಾದ ಮೇಲೂ ದರೋಡೆಯನ್ನು ಬಿಡಲಿಲ್ಲ. ಬದಲಿಗೆ ತನ್ನ ಕುಟುಂಬವನ್ನು ಸಾಕಲು ಡಕಾಯಿತಿಯನ್ನೇ ಆಶ್ರಯಿಸಿಕೊಂಡು ಲೂಟಿಯನ್ನೇ ಕಸುಬು ಮಾಡಿಕೊಂಡ. ದರೋಡೆ ಮಾಡಿಯೇ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದ. ಕಾಡಿನ ಹಾದಿಯಲ್ಲಿ ಪ್ರಯಾಣಿಸುತ್ತಿದ್ದವರನ್ನು ಅಡ್ಡಗಟ್ಟಿ ಹೊಡೆದು ಬಡಿದು ಅವರಲ್ಲಿದ್ದ ಧನ-ಕನಕಗಳನ್ನು ಲೂಟಿ ಮಾಡುತ್ತಿದ್ದ. ಒಮ್ಮೆ ನಾರದ ಮುನಿಗಳು ಮತ್ತು ಸಪ್ತ ಋಷಿಗಳು ರೂಕ್ಷನಿದ್ದ ಆ ಕಾಡು ಹಾದಿಯಲ್ಲಿ ಬಂದರು. ಆದರೆ ಅವರನ್ನೂ ಬಿಡದೆ ಅಡ್ಡ ಹಾಕಿ ಅವರ ಮೇಲೆರಗಿದ ರೂಕ್ಷನು "ನಿಮ್ಮ ಬಳಿ ಇರುವುದೆಲ್ಲವನ್ನು ನನಗೆ ಕೊಟ್ಟುಬಿಡಿ. ಇಲ್ಲವೆಂದರೆ ಯಾರನ್ನೂ ನಾನು ಜೀವಂತವಾಗಿ ಬಿಡುವುದಿಲ್ಲ" ಎಂದು ಅಬ್ಬರಿಸಿದ. ಆಗ ನಾರದ ಮುನಿಗಳು ಶಾಂತಚಿತ್ತದಿಂದಲೇ ತಡೆದು"ನೋಡಪ್ಪ ರೂಕ್ಷ, ನಮ್ಮ ಹತ್ತಿರ ಕಮಂಡಲ ಬಿಟ್ಟರೆ ಬೇರೇನೂ ಇಲ್ಲ. ಬೇಕಾದರೆ ಇದೆಲ್ಲವನ್ನು ನೀನೇ ತೆಗೆದುಕೊಳ್ಳುವೆಯಂತೆ. ಆದರೆ ಅದಕ್ಕೂ ಮುಂಚೆ ನೀನೇಕೆ ದರೋಡೆಯಂತಹ ಕಳ್ಳತನದ ದಾರಿ ಹಿಡಿದಿರುವೆ ಎಂಬುದನ್ನು ಹೇಳು" ಎಂದರು.

ಆಗ ತಕ್ಷಣವೇ ರೂಕ್ಷನು ಹಿಂದೆ ಮುಂದೆ ಕಿಂಚಿತ್ತೂ ಯೋಚಿಸದೆ "ನನ್ನ ಹೆಂಡತಿ ಮಕ್ಕಳನ್ನು ಸಾಕುವುದಕ್ಕಾಗಿ" ಎಂದ.ಅವನ ಅಜ್ಞಾನಕ್ಕೆ ಮುಗುಳ್ನಕ್ಕ ನಾರದ ಮುನಿಗಳು "ಹೌದಾ,ಹಾಗಾದರೆ ಎಲ್ಲರನ್ನೂ ಗೋಳು ಹುಯ್ದುಕೊಂಡು ಹಿಂಸಿಸುವ ನೀನು ಮಾಡುವ ಪಾಪ ಕಾರ್ಯದಲ್ಲಿ ನಿನ್ನ ಹೆಂಡತಿ-ಮಕ್ಕಳು ಪಾಲು ತೆಗೆದುಕೊಳ್ಳುತ್ತಾರೆಯೇ?ಮೊದಲು ಹೋಗಿ ಅವರನ್ನು ಕೇಳಿಕೊಂಡು ಬಾ" ಎಂದರು. ಕೂಡಲೇ ರೂಕ್ಷನು ತನ್ನ ಮನೆಯತ್ತ ಬಿರಬಿರನೆ ನಡೆದು ನಾರದರು ಕೇಳಿದಂತೆ ಅದೇ ಪ್ರಶ್ನೆಯನ್ನು ಹೆಂಡತಿ-ಮಕ್ಕಳಲ್ಲಿ ಕೇಳಿದ. ಆಗ ಅವರು "ನಮ್ಮನ್ನು ಸಾಕೋದು ನಿನ್ನ ಕರ್ತವ್ಯ. ಇದಕ್ಕಾಗಿ ದರೋಡೆಯಂತಹ, ಕಳ್ಳತನದಂತಹ ಪಾಪ ಕೃತ್ಯಗಳನ್ನು ಮಾಡಲು ನಾವ್ಯಾರೂ ನಿನಗೆ ಹೇಳಿಲ್ಲ. ಹಾಗಾಗಿ ನಿನ್ನ ಪಾಪ ಕಾರ್ಯಕ್ಕೆ ನೀನೇ ಹೊಣೆ. ಅದರಲ್ಲಿ ಪಾಲು ತೆಗೆದುಕೊಳ್ಳಲು ನಾವ್ಯಾರೂ ಸಿದ್ದರಿಲ್ಲ". ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರು.

ಆಗ ರೂಕ್ಷನಿಗೆ ತನ್ನ ತಪ್ಪಿನ ಅರಿವಾಗಿ ಜ್ಞಾನೋದಯವಾಯಿತು. ಕೂಡಲೇ ನಾರದ ಮುನಿಯತ್ತ ಓಡೋಡಿ ಬಂದ ಅವನು ತನಗೆ ಮೋಕ್ಷ ಕರುಣಿಸುವಂತೆ ಬೇಡಿಕೊಂಡ.ಅದಕ್ಕೆ ನಾರದ ಮುನಿಗಳು ಈ ಸಪ್ತ ಋಷಿಗಳ ಜೊತೆಯಲ್ಲಿ ಮತ್ತೆ ನಾನು ಇದೇ ಸ್ಥಳಕ್ಕೆ ಮರಳಿ ಬರುವ ತನಕ ನೀನು ಇದೇ ಸ್ಥಳದಲ್ಲಿ ಇದ್ದು ರಾಮ ನಾಮ ಜಪಿಸುತ್ತಿರು ಎನ್ನುತ್ತಾರೆ. ಆದರೆ ಎಷ್ಟು ಪ್ರಯತ್ನಿಸಿದರು ರೂಕ್ಷನ ಬಾಯಲ್ಲಿ ರಾಮ ನಾಮ ಬರುವುದೇ ಇಲ್ಲ. ಸದಾ ದುರ್ಮಾರ್ಗದಲ್ಲಿ ನಿರತನಾಗಿದ್ದ ಅವನ ನಾಲಿಗೆಯಿಂದ 'ರಾಮ' ಎನ್ನುವ ಪವಿತ್ರಶಬ್ದ ಹೊರಡಲು ಬಹಳ ಕಷ್ಟವಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ನಾರದರು ರೂಕ್ಷನನ್ನು ಉದ್ದೇಶಿಸಿ "ಅಲ್ಲಿ ನೋಡು ರೂಕ್ಷ ಮರಗಳಿವೆಯಲ್ಲ. ನೀನು ಆ ಮರ ಆ ಮರ ಎಂದು ಹೇಳು" ಎಂದರು. ಅದರಂತೆ ರೂಕ್ಷನು "ಆ ಮರ ಆ ಮರ" ಎಂದು ಹೇಳುವುದನ್ನು ಕಲಿತು ಅದನ್ನೇ ಮತ್ತೆ ಮತ್ತೆ ಹೇಳುತ್ತಾ ಹೋದ. ಹಾಗೆಯೇ "ಮರಾ ಮರಾ ಮರಾ"ಎಂದು ಹಾಗೆಯೇ ರಾಮ ನಾಮವನ್ನು ಒಂದೇ ಸಮನೆ ಜಪಿಸತೊಡಗಿ, ಇದು ನಿರಂತರವಾಗಿ ಸಾಗಿತು. ಹೀಗೆ ಮೈಮರೆತು ಧ್ಯಾನಸ್ಥನಾಗಿ ಅದೆಷ್ಟೋ ವರ್ಷಗಳ ಕಾಲ ರೂಕ್ಷನು ರಾಮನಾಮ ಜಪಿಸುತ್ತಿದ್ದಾಗ ಅವನ ಸುತ್ತ ಬೃಹದಾಕಾರವಾಗಿ ಹಾವಿನ ಹುತ್ತ ಬೆಳೆಯಿತು. ರೂಕ್ಷನು ಹುತ್ತದೊಳಗೆ ಸೇರಿ ಮರೆಯಾಗಿ ಹೋದ. ಹೀಗಾಗಿ ಅವನು ಅಲ್ಲಿ ಕಾಣಿಸದಿದ್ದರೂ ಹುತ್ತದೊಳಗಿನಿಂದ ಅವನು ಹೇಳುತ್ತಿದ್ದ ರಾಮ ನಾಮ ಬಹು ದೊಡ್ಡದಾಗಿ ಕೇಳುತ್ತಲೇ ಇತ್ತು. ಅನೇಕ ವರ್ಷಗಳ ನಂತರ ನಾರದ ಮುನಿಗಳ ಜೊತೆಯಲ್ಲಿ ಸಪ್ತ ಋಷಿಗಳು ಅದೇ ದಾರಿಯಲ್ಲಿ ಹಿಂದಿರುಗಿ ಬಂದರು. ರಾಮನಾಮ ಜಪದಲ್ಲಿ ಮುಳುಗಿ ಹೋಗಿದ್ದ ರೂಕ್ಷನನ್ನು ಪ್ರೀತಿಯಿಂದ ಕೂಗಿ ಕರೆದರು.ಅವರ ದನಿಯನ್ನು ಕೇಳಿದೊಡನೆ ರೂಕ್ಷ ಹುತ್ತವನ್ನು ಹೊಡೆದುಕೊಂಡು ಹೊರಬಂದ. ಸಂಸ್ಕೃತದಲ್ಲಿ ಹುತ್ತವನ್ನು 'ವಲ್ಮೀಕ' ಎನ್ನುತ್ತಾರೆ. ಆದ್ದರಿಂದ ಹುತ್ತವನ್ನು ಭೇದಿಸಿ ಕೊಂಡು ಹೊರಬಂದ ರೂಕ್ಷನು ಅಂದಿನಿಂದ ಮಹರ್ಷಿಯಾಗಿ ಬದಲಾಗಿ 'ವಾಲ್ಮೀಕಿ'ಎಂದು ಕರೆಯಲ್ಪಟ್ಟನು. ಆ ನಂತರ ವಾಲ್ಮೀಕಿ ಮಹರ್ಷಿಯು ತಮಸಾ ನದಿ ತೀರದಲ್ಲಿ ಆಶ್ರಮವೊಂದನ್ನು ಕಟ್ಟಿಕೊಂಡು ಸನ್ಯಾಸಿ ಜೀವನ ನಡೆಸತೊಡಗಿದರು. ಒಮ್ಮೆ ಸ್ನಾನಕ್ಕೆಂದು ಹೋದ ವಾಲ್ಮೀಕಿ ಮಹರ್ಷಿಯು ಆಕಾಶದಲ್ಲಿ ಸರಸ ಸಲ್ಲಾಪದಲ್ಲಿದ್ದ ಕ್ರೌಂಚ ಪಕ್ಷಿಗಳನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದರು.ಇದ್ದಕ್ಕಿದ್ದಂತೆ ಆಗ ಬೇಡನೊಬ್ಬ ಬಂದು ಬಾಣ ಬಿಟ್ಟು ಗಂಡು ಹಕ್ಕಿ ಯನ್ನು ಕೊಲ್ಲಲು ಅದರ ಸಂಗಾತಿ ಹೆಣ್ಣು ಹಕ್ಕಿಯು ಸಂಕಟದಿಂದ ಚೀರಲಾರಂಭಿಸಿತು. ಈ ಹೃದಯ ವಿದ್ರಾವಕ ಘಟನೆಯನ್ನು ಕಂಡು ವಾಲ್ಮೀಕಿ ಮಹರ್ಷಿ ಕರುಣೆ, ದುಃಖ, ಕೋಪದಿಂದ ಕುದಿಯುತ್ತಾರೆ.

“ಮಾ ನಿಷಾದ ಪ್ರತಿಷ್ಠಾಮ್
ತ್ವಮಗಃಶಾಸ್ವತೀಃಸಮಾಃ
ಯತ್ಕ್ರೌಂಚ ಮಿಥುನಾದೇಕ
ಮವಧೀಃಕಾಮಮೋಹಿತಮ್”

ಇದು 'ರಾಮಾಯಣ' ಮಹಾ ಕಾವ್ಯ ರಚನೆಗೆ ಪ್ರೇರಣೆಯಾದ ಸನ್ನಿವೇಶ. ಆ ಸಂದರ್ಭದಲ್ಲಿ ವಾಲ್ಮೀಕಿಯಿಂದ ಹೊರಹೊಮ್ಮಿದ ಮಾತುಗಳಿವು "ಅಕಾರಣಕ್ಕಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ, ನಿನ್ನ ಪಾಪದ ಫಲವಾಗಿ ನೀ ಈ ಕೂಡಲೇ ಸಾಯಿ" ಎಂದು ವಾಲ್ಮೀಕಿ ಮಹರ್ಷಿಯು ಆ ಬೇಡನಿಗೆ ಶಾಪವಿತ್ತರು.

ಈ ಕರುಣಾಜನಕ ಶ್ಲೋಕವು ಸಾಮಾನ್ಯ ಗದ್ಯ ರೂಪದಲ್ಲಿರದೆ ಪ್ರಾಸಬದ್ಧವಾಗಿ ಲಯ ಮತ್ತು ಛಂದಸ್ಸುಗಳನ್ನೊಳಗೊಂಡು ಕಾವ್ಯಾತ್ಮಕವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಬ್ರಹ್ಮದೇವ ನೇರವಾಗಿ ವಾಲ್ಮೀಕಿ ಮಹರ್ಷಿಗಳ ಬಳಿ ಬಂದು ಇದೇ ಶ್ಲೋಕ ರೂಪದಲ್ಲಿ 'ರಾಮಾಯಣ' ಮಹಾ ಕಾವ್ಯವನ್ನು ರಚಿಸುವಂತೆ ಕೇಳಿಕೊಂಡರು. ಅದರಂತೆ ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳುಳ್ಳ ಬೃಹತ್ ರಾಮಾಯಣ ಮಹಾ ಕಾವ್ಯವನ್ನು ಬರೆದರು. ಈ ರಾಮಾಯಣ ಮಹಾಕಾವ್ಯವು ಬಾಲಕಾಂಡ, ಅಯೋಧ್ಯಾ ಕಾಂಡ, ಕಿಷ್ಕಿಂದಾ ಕಾಂಡ,ಅರಣ್ಯ ಕಾಂಡ, ಸುಂದರಕಾಂಡ, ಯುದ್ಧಕಾಂಡ, ಮತ್ತು ಉತ್ತರಕಾಂಡ ಹೀಗೆ ಏಳು ಕಾಂಡಗಳಲ್ಲಿ ರಚಿಸಲ್ಪಟ್ಟಿದೆ. ಪ್ರಾಚೀನ ಭಾರತದ ಪ್ರಮುಖ ಸಾಹಿತ್ಯಕ ಮೇರು ಕೃತಿಗಳಲೊಂದಾದ ರಾಮಾಯಣ ಮಹಾ ಕಾವ್ಯವು ಶ್ರೀ ರಾಮನ ಕಥೆಯ ಮೂಲಕ ಬಹು ಮೌಲಿಕವಾದ ನೈತಿಕ ಜೀವನ ಪಾಠವನ್ನು ವಾಲ್ಮೀಕಿ ಮಹರ್ಷಿಗಳು ಹೇಳಿದ್ದಾರೆ.

ಬೇಡನಾಗಿ ಹುಟ್ಟಿದರೂ, ಪರಿವರ್ತನೆಯ ಕುಲುಮೆಯಲ್ಲಿ ಉರಿದು ಜ್ಞಾನದಗ್ನಿಯಲ್ಲಿ ಮಿಂದೆದ್ದು ತಮ್ಮ ಜ್ಞಾನಾಸ್ತ್ರದಿಂದ ಜಗತ್ತನ್ನೇ ಗೆದ್ದು ಮಹರ್ಷಿಯ ಪಟ್ಟಕ್ಕೇರಿ ರಾಮಾಯಣ ಮಹಾಕಾವ್ಯದ ಮೂಲಕ ಆದಿಕವಿಯಾಗಿ ಇಡೀ ಜಗತ್ತಿಗೆ ಸುಜ್ಞಾನದ ಮಹಾ ಬೆಳಕು ಸುರಿದ ಮಹಾಮುನಿ ವಾಲ್ಮೀಕಿ ಎಂದರೆ ಯಾವತ್ತೂ ಅದು ಕೇವಲ ಒಂದೆಸೆರೆನಿಸದೆ ಭರತ ಭೂಮಿಯ ಸುಸಂಸ್ಕೃತಿಯ ಒಂದು ಭವ್ಯ ಸಂಪತ್ತೆನಿಸುತ್ತದೆ.

ದಿವ್ಯ ಸಂಪತ್ತು ಕೂಡ ಹೌದು. ವಾಲ್ಮೀಕಿ ಮಹರ್ಷಿಗಳು ಮಹಾ ಕಾವ್ಯವನ್ನಷ್ಟೇ ಬರೆಯಲಿಲ್ಲ. ಅವರೇ ಒಂದು ಮಹಾಕಾವ್ಯವಾಗಿ ಈ ನೆಲದ ಸಂಸ್ಕೃತಿಯಲ್ಲಿ ನೆಲೆಸಿದ್ದಾರೆ. ಅದರಲ್ಲೂ ವಿಶೇಷವಾಗಿ ಶೂದ್ರ ವರ್ಗದಲ್ಲಿ ಅರಳಿದ ಮಹಾ ಕಾವ್ಯ ಪುಷ್ಪವಾಗಿ ಭುವಿಯಗಲಕೂ ಬಾನೆತ್ತರಕೂ ಘಮಘಮಿಸುತ್ತಿದ್ದಾರೆ.



ವಾರಭವಿಷ್ಯ

9.10.2022 ರಿಂದ 16.10.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಮಿಥುನ, ಕುಜ-ವೃಷಭ, ಬುಧ-ಕನ್ಯಾ ಗುರು-ಮೀನ, ಶುಕ್ರ-ಕನ್ಯಾ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಹೋಟೆಲ್, ಕ್ಯಾಟರಿಂಗ್, ಪ್ರವಾಸೋದ್ಯಮ ವ್ಯಾಪಾರಗಳು ಮುನ್ನಡೆಯಲ್ಲಿ ಸಾಗುವುದು. ಗುರುಬಲವಿಲ್ಲದ ಕಾರಣ ಮುಖ್ಯ ಕೆಲಸಗಳನ್ನು ಆದ್ಯತೆಯ ಮೇಲೆ ಮಾತ್ರ ಪೂರೈಸಿಕೊಳ್ಳಬೇಕು. ಎಲ್ಲವನ್ನೂ ಒಮ್ಮೆಲೆ ಮಾಡಿದರೆ ಯಾವುದೂ ಪೂರ್ಣವಾಗದು. ವಾರ ಮಧ್ಯಾನಂತರ ನಿಮ್ಮ ರಾಶಿಗೆ ಬರುವ ಚಂದ್ರ ಹೊಸ ಹುರುಪು, ಉತ್ಸಾಹಗಳನ್ನು ನೀಡಲಿದ್ದಾನೆ. ತಾಮ್ರ, ಮುತ್ತು ವ್ಯಾಪಾರಿಗಳಿಗೆ ಹೇರಳ ಧನಲಾಭ. ಶ್ರೀಕಾರ್ತಿಕೇಯ ದರ್ಶನ. ಶುಭ ಸಂಖ್ಯೆ-5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಕೆಲಸ ಕಾರ್ಯಗಳು ನಿಧಾನ ಗತಿಯಲ್ಲಿ ಸಾಗಿ ಬೇಸರ. ಆದರೆ ತಾಳ್ಮೆಗೆಡುವ ಅಗತ್ಯವಿಲ್ಲ. 'ತಾಳಿದವನು ಬಾಳುವನು' ಗ್ರಹಸ್ಥಿತಿಗಳು ನಿಮಗೆ ಅನುಕೂಲಕರವಾಗಿಲ್ಲ. ಖರ್ಚು ಎದುರಾದಾಗ ಹಣ ಕೈ ಸೇರುವುದು. ಸ್ನೇಹಿತರ ಸಹಕಾರ, ಬೆಂಬಲಗಳಿಂದ ಜೀವನ ಪರಿಸ್ಥಿತಿ ಸುಧಾರಣೆಯನ್ನು ಕಾಣುವುದು, ಗಣಕ ಯಂತ್ರ, ಅದರ ಬಿಡಿಭಾಗ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ, ಧನ ಲಾಭ, ಜನ್ಮ ಕೇತು ಅಧ್ಯಾತ್ಮ ವಿಚಾರಗಳಲ್ಲಿ ಪ್ರೇರೇಪಿಸುವನು. ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಮನೋ ವಾಂಛಿತ ಕಾರ್ಯಗಳು ಸುಲಲಿತವಾಗಿ ನಡೆಯುವುದು. ವ್ಯಾಪಾರ, ವ್ಯವಹಾರಗಳಲ್ಲಿ ಉತ್ತಮ ಪ್ರಗತಿ ಹಾಗೂ ಲಾಭವನ್ನು ಹೊಂದುವಿರಿ. ಮನೆಯಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವುದು. ವಾರದ ಉತ್ತರಾರ್ಧಕ್ಕೆ ಧನ, ಕನಕ, ದುಬಾರಿ ವಸ್ತು, ವಾಹನ ಹೊಂದುವ ಅವಕಾಶವಿದೆ. ಗುರುಜನರ ಭೇಟಿ, ಆಶೀರ್ವಾದಗಳಿಂದ ನಿಮ್ಮ ಭವಿಷ್ಯ ಉಜ್ವಲವಾಗಲಿದೆ. ದುಡುಕು ನಿರ್ಧಾರಗಳು ನಿಮಗೆ ನಷ್ಟವನ್ನು ಉಂಟು ಮಾಡಬಹುದು. ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ಪಂಚಮ ಸ್ಥಾನದಲ್ಲಿರುವ ಗುರುಗ್ರಹ ನಿಮ್ಮನ್ನು ಸರಿದಾರಿಯಲ್ಲಿ ಸಾಗಲು ಜ್ಞಾನವನ್ನು ಕೊಡುವನು. ಮನೆಯಲ್ಲಿ ಸಂತೋಷ, ಸಡಗರಗಳು ಕಂಡು ಬರುವುದು. ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆ ಏನೂ ಆಗದು. ಕೆಲವು ವಿಚಾರಗಳು ನಿಮ್ಮನ್ನು ಅರಸಿ ಬರುತ್ತದೆ. ತಿರಸ್ಕರಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ಆಸ್ತಿ ಪಾಸ್ತಿ ಹೊಂದರೆ ಸಾಲ ಪಕ್ವವಾಗಿದೆ. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಪ್ರಶಂಸೆ. ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-7.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಕಾಸಿದ್ರೆ ಕೈಲಾಸ. ಆದರೆ 'ಕೈ ಕೆಸರಾಗದೆ ಬಾಯಿ ಮೊಸರಾಗದು. ವಾರದ ಆದಿಗೆ ಧನ ಸಂಬಂಧಿ ವಿಚಾರಗಳು ತೃಪ್ತಿದಾಯಕವಾಗಿದ್ದರೂ, ಮನೆಯಲ್ಲಿ ಹಾಗೂ ವೃತ್ತಿ ಸ್ಥಾನದಲ್ಲಿ ಹಿತಕರವಾದ ವಾತಾವರಣ ಇರದು. ಗಣ್ಯ ವ್ಯಕ್ತಿಗಳ ಒಡನಾಟ ಸಂಭವ. ಸಾರ್ವಜನಿಕ ಕ್ಷೇತ್ರದಲ್ಲಿ ಗೌರವಾದರಗಳಿಗೆ ಪಾತ್ರರಾಗುವಿರಿ. ದ್ವಿದಳ ಧಾನ್ಯ ಹಾಗೂ ಎಳ್ಳು ವ್ಯಾಪಾರಿಗಳಿಗೆ ಸಾಧಾರಣ ಲಾಭ. ಡ್ರೈವಿಂಗ್ ನಿಧಾನವಾಗಿ ಮಾಡಿ, ಕ್ಷೇಮವಾಗಿ ಮನೆ ತಲುಪಿ. ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಕಾಲವು ಯಾರಿಗೂ ಕಾಯುವುದಿಲ್ಲ. ಪೂರ್ವಭಾವಿ ತಯಾರಿ ಇಲ್ಲದೆ ಯಾವ ಕೆಲಸವನ್ನೂ ಮಾಡದಿರಿ. ಹೈನುಗಾರಿಕೆ, ಹೋಟೆಲ್ ಉದ್ಯಮದವರಿಗೆ ಹೇರಳ ಧನ ಲಾಭವಾಗುವುದು. ಯಂತ್ರ, ಮಿಷನರಿ ವಸ್ತು ವ್ಯಾಪಾರಿಗಳಿಗೆ ಉತ್ತಮ ಆರ್ಡರ್ ದೊರೆಯುವುದು. ಶತ್ರುಗಳು, ಪ್ರತಿಸ್ಪರ್ಧಿಗಳು ಪ್ರಬಲರೆನಿಸುವರು. ಸರ್ಕಾರಿ ನೌಕರರು ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಿ, ಅನ್ಯಾಯಮಾರ್ಗ ಅನುಸರಿಸಿದಲ್ಲಿ ತೊಂದರೆಗೆ ಒಳಪಡುವಿರಿ. ಶ್ರೀ ಗುರುರಾಯರ ಪಾದಸೇವೆ. ಶುಭ ಸಂಖ್ಯೆ-4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಗುರುಬಲದ ಕಾರಣ ನಿಮ್ಮ ಪ್ರಯತ್ನಗಳು ಸಾಕಾರಗೊಳ್ಳುವ ಕಾಲ ಸನಿಹವಾಗಿದೆ. ಕೈಗೆ ಧಾರಣ ಹಣ ಬರುವುದು, ಜೋಪಾನ ಮಾಡಿಕೊಳ್ಳಿ, ಮುಂದೆ ಕಷ್ಟಕಾಲಕ್ಕೆ ಒದಗುವುದು. ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ಅಪರಿಚಿತ ಸ್ತ್ರೀಯಿಂದ ಸಹಾಯ ದೊರೆಯುವುದು, ನಿಮ್ಮ ಗೃಹಲಕ್ಷ್ಮೀಯ ಬೆಂಬಲವೂ ದೊರಕುವುದು. ಪಾಲುದಾರಿಕೆ ವ್ಯವಹಾರಗಳು ಒಮ್ಮತವಲ್ಲದ ನಷ್ಟಕ್ಕೆ ಗುರಿಯಾಗುವುದು. ಮಂಡಿ ನೋವು ಕಾಡಿಸುವುದು. ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ-9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಹರ್ಷದಾಯಕ ಸಮಯವಿದ್ದಾಗ್ಯೂ ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರೆಯದು. ವ್ಯಾಪಾರ ವ್ಯವಹಾರಗಳಲ್ಲಿ ಅಲ್ಪ ಪ್ರಗತಿಯಷ್ಟೇ. ಆದಾಯ ಮೀರಿ ಖರ್ಚುಗಳು ಎದುರಾಗುವುವು. ಕಚೇರಿಯಲ್ಲಿ ಸಹವರ್ತಿಗಳೊಂದಿಗೆ ಘರ್ಷಣೆಗೆ ಅವಕಾಶ ಕೊಡದಂತೆ ನಡೆದುಕೊಳ್ಳಿ. ನಿಮ್ಮ ಜನ್ಮರಾಶಿ ಸ್ಥಿತ ಶನಿದೇವ ನಿಮ್ಮನ್ನು ತಪ್ಪು ಕೆಲಸಗಳಿಗೆ ಪ್ರೇರೇಪಿಸುವನು. ನೀವಾಗಿ ಹೋಗಿ ತೊಂದರೆಗೆ ಸಿಲುಕಿಕೊಳ್ಳಬೇಡಿ. ಓವರ್ ಸ್ಪೀಡ್ ವಾಹನ ಚಾಲನೆ ಮುಳುವಾಗುವುದು. ಶ್ರೀ ಶನೇಶ್ವರ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದಾರಂಭಕ್ಕೆ ಚಂದ್ರನ ಶುಭ ದೃಷ್ಟಿಯಿಂದ ಮನೆ ಮಂದಿಯೊಂದಿಗೆ ಹರ್ಷದಾಯಕ ಸಮಯ ಕಳೆಯುತ್ತದೆಯಾದರೂ ವ್ಯಾಪಾರ ವ್ಯವಹಾರಗಳಿಗೆ ಗ್ರಹಗಳ ಬೆಂಬಲವಿಲ್ಲದೆ ಸುಖವಿಲ್ಲ. ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರಕದು. ಶ್ರೀಮತಿಯ ಸಲಹೆಗಳನ್ನು ಪುರಸ್ಕರಿಸಿದರೆ ಪ್ರಯೋಜನವಾಗುವುದು. ವಾರಾಂತ್ಯಕ್ಕೆ ಉಚ್ಚರಾಶಿಗೆ ಬರುವ ಚಂದ್ರ ಸಂತೋಷ, ಸಂಭ್ರಮವನ್ನು ನೀಡಲಿರುವನು. ನಿಮ್ಮ ಚತುರತೆಗಿಂತ ವಿಧಿಯಾಟ ಮೇಲೆನಿಸುವುದು. ಶ್ರೀಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-6.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ನಿಮ್ಮ ಆತ್ಮ ವಿಶ್ವಾಸ ಮಟ್ಟ ಉನ್ನತವಾಗಿರುತ್ತದೆ. ಕೆಲಸ ಕಾರ್ಯಗಳಿಗೆ ಬಂಧು ಜನರ ಹಾಗೂ ಗುರು ಜನರ ಬೆಂಬಲ ದೊರಕುತ್ತದೆ. ಮಿತ್ರರು ಸಮಯಕ್ಕೊದಗುತ್ತಾರೆ. ಸ್ವಂತ ವ್ಯವಹಾರಗಳಲ್ಲಿ ಉತ್ತಮ ಫಲವನ್ನು ಹೊಂದುವಿರಿ, ಪಾಲುದಾರಿಕೆ ವ್ಯವಹಾರ ಮಾಡಬೇಡಿ. ಹಲವು ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವುದು. ಶನಿದೇವ ವ್ಯಯಭಾವದಲ್ಲಿದ್ದು ಅನಾವಶ್ಯಕ ಖರ್ಚುಗಳು ಎದುರಾಗುವುವು. ಶ್ರೀ ಶಿವಪಂಚಾಕ್ಷರೀ ಮಂತ್ರ ಜಪಿಸಿ. ಶುಭ ಸಂಖ್ಯೆ-3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಹೊಸ ಜನರ ಭೇಟಿ, ಹೊಸ ಚಟುವಟಿಕೆಗಳ ಆರಂಭ, ಹಣ ಕಾಸಿನ ಸ್ಥಿತಿ ಸುಧಾರಿಸುವುದು, ನೂತನ ಆವಿಷ್ಕಾರಗಳಿಗೆ ಪ್ರೇರಣೆ. ಬಂಧು-ಬಳಗದವರಲ್ಲಿ ನಿಮ್ಮ ಸಂತಸವನ್ನು ಹಂಚಿಕೊಳ್ಳಿ. ಹೊಸ ಯೋಜನೆಗಳಿಗೆ ಗಣ್ಯ ವ್ಯಕ್ತಿಗಳೊಡನೆ ಸಮಾಲೋಚನೆ ಮಾಡಿ. ಧಾನ-ಧರ್ಮಾಸಕ್ತಿ, ಪುಣ್ಯ ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತಾಭಾವ. ಮಾರಕ-ಬಾಧಕ ಸ್ಥಾನಗಳಲ್ಲಿರುವ ಕೇತು-ರಾಹುಗಳು ಅಪಘಾತ, ಅನಾರೋಗ್ಯಗಳಿಗೆ ಗುರಿ ಮಾಡುವರು. ಶ್ರಿ ಸತ್ಯನಾರಾಯಣ ಉಪಾಸನೆ, ಶುಭ ಸಂಖ್ಯೆ-3


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಈ ವಾರವೆಲ್ಲಾ ಬ್ಯುಸಿಯಾಗಿರುತ್ತೀರ. ವಿವಿಧ ವ್ಯಕ್ತಿಗಳ ಒಡನಾಟ, ದೈವ ಸಹಾಯ ಬೇಕೆಂದರೆ ಪ್ರಯತ್ನಶೀಲತೆಯೂ ಇರಬೇಕು. ಗುತ್ತಿಗೆದಾರರಿಗೆ ಹೆಚ್ಚಿನ ಧನಾದಾಯವಾಗುವುದು. ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ಇತರರ ದೂಷಣೆಗೆ ಗುರಿಯಾಗುವಿರಿ. ವಿದ್ಯಾರ್ಥಿಗಳು ಆಲಸಿಗರಾಗುತ್ತಾರೆ. ಮನೆಯಲ್ಲಿ ವಯಸ್ಸಿಗೆ ಬಂದ ಮಕ್ಕಳನ್ನು ಎದುರು ಹಾಕಿಕೊಳ್ಳಬೇಡಿ. ಆರೋಗ್ಯ ಅಷ್ಟಕ್ಕಷ್ಟೆ. ಶ್ರೀ ಸುಂದರಕಾಂಡ ಪಠಿಸಿ. ಶುಭ ಸಂಖ್ಯೆ-2.

ಮಕ್ಕಳ ಚಿತ್ರ ಕಥೆ

'ಸಾಕ್ಷಾತ್ ಯಮಧರ್ಮನೇ ವರ ಕೊಟ್ಟರೂ...!'


-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199

1




ಒಂದು ದಿನ ಯಮರಾಯ ಒಬ್ಬ ವ್ಯಕ್ತಿಯ ಪ್ರಾಣವನ್ನು ಕೊಂಡೊಯ್ಯಲು ಭೂಮಿಗೆ ಬಂದ. ಆದರೆ ಪ್ರಾಣ ಕೊಂಡೊಯ್ಯಬೇಕಾಗಿದ್ದ ವ್ಯಕ್ತಿಯೇ ಯಮನಿಗೆ ಎದುರಾದ. ಯಮನಿಗೆ ಭೂಲೋಕ ಸುತ್ತಿ, ಸುತ್ತಿ ದಾಹವಾಗಿತ್ತು. ಅವನಿಗೆ ಕುಡಿಯಲು ನೀರು ಕೇಳುತ್ತಾನೆ. ಸಾಯಬೇಕಾಗಿರುವ ವ್ಯಕ್ತಿಯೇ ನೀರು ಕೊಟ್ಟು ದಾಹ ತೀರಿಸುತ್ತಾನೆ.

2




ಆದರೆ ಯಮ ಕೊಂಡೊಯ್ಯಬೇಕಾಗಿರುವ ವ್ಯಕ್ತಿ ಇವನೇ ಎಂದು ತಿಳಿದು, ಒಂದು ವರ ಕೊಡುತ್ತಾನೆ. ಅದೇನೆಂದರೆ, ಒಂದು ಹಣೆಬರಹದ ಪುಸ್ತಕ ಕೊಟ್ಟು "ಇದರಲ್ಲಿ ನಿನಗೆ ಅಂತ ಒಂದು ಹಾಳೆ ಖಾಲಿ ಇದೆ, ನಿನಗೆ ಏನು ಬೇಕೋ ಅದನ್ನು ಬರೆದುಕೋ...ನೀನು ಏನು ಬರೆದು ಕೊಂಡರೂ ನೆರವೇರುವುದು. ಇದರಲ್ಲಿ ಸಂಶಯವಿಲ್ಲ. ಆದರೆ ನಿನಗೆ ಬರೆದುಕೊಳ್ಳಲು ಐದು ನಿಮಿಷ ಮಾತ್ರ ನೀಡುತ್ತೇನೆ. ಆ ಐದು ನಿಮಿಷವೇ ಅತ್ಯಮೂಲ್ಯ... ಆ ಐದು ನಿಮಿಷ ದಾಟಿದ ನಂತರ ನಿನ್ನ ಹಣೆ ಬರಹ ಹೇಗಿರುತ್ತೋ ಹಾಗೇ ಆಗುವುದು...!" ಎಂದು ಹೇಳಿ ಒಂದು ಪುಸ್ತಕ ಕೊಡುತ್ತಾನೆ.

3




ಆ ವ್ಯಕ್ತಿ ಪುಸ್ತಕ ತೆಗೆದು ಮೊದಲ ಪುಟ ಓದುತ್ತಾನೆ. ಅದರಲ್ಲಿ ನಿನ್ನ ಸ್ನೇಹಿತ ವಿದೇಶಕ್ಕೆ ಹೋಗುತ್ತಾನೆ ಎಂದಿರುತ್ತದೆ. ಅದಕ್ಕೆ ಅವನು ವಿದೇಶಕ್ಕೆ ಹೋಗಬಾರದೆಂದು ಬರೆದು ತಡೆಯುತ್ತಾನೆ. ಮತ್ತೊಂದು ಪುಟ ತೆರೆಯುತ್ತಾನೆ. ಅದರಲ್ಲಿ ಮತ್ತೊಬ್ಬ ಸ್ನೇಹಿತ ಲಕ್ಷಗಟ್ಟಲೆ ಲಾಟರಿ ಗೆಲ್ಲುತ್ತಾನೆಂದಿರುತ್ತದೆ. ಆದರೆ ಆ ವ್ಯಕ್ತಿ ಅವನಿಗೆ ಲಾಟರಿ ಹಣ ಸಿಗಬಾರದೆಂದು ಬರೆಯುತ್ತಾನೆ. ಮತ್ತೊಂದು ಪುಟ ತೆರೆಯುತ್ತಾನೆ. ಅದರಲ್ಲಿ ಅವನ ಆಪ್ತ ಗೆಳತಿ ಆಗರ್ಭ ಶ್ರೀಮಂತನನ್ನು ಮದುವೆಯಾಗುತ್ತಾಳೆ ಎಂದಿರುತ್ತದೆ. ಆದರೆ ಅವನ ಆಪ್ತ ಗೆಳತಿಯು ಶ್ರೀಮಂತನನ್ನು ಮದುವೆಯಾಗಬಾರದೆಂದು ಬರೆಯುತ್ತಾನೆ.

4




ಮತ್ತೊಂದು ಪುಟ ತೆರೆಯುತ್ತಾನೆ. ಪಕ್ಕದ ಮನೆಯ ರೈತ ಬೆಳೆದ ಬೆಳೆಗೆ ಒಳ್ಳೆಯ ಬೆಲೆ ಸಿಕ್ಕಿ ಸಿರಿವಂತನಾಗುತ್ತಾನೆ ಎಂದು ಬರೆದಿರುತ್ತದೆ. ಆದರೆ ಆ ವ್ಯಕ್ತಿ ಸಿರಿವಂತನಾಗಬಾರದೆಂದು ಬರೆಯುತ್ತಾನೆ. ಕೊನೆಯ ಹಾಳೆ ತೆರೆಯುತ್ತಾನೆ. ಅದು ಖಾಲಿ ಹಾಳೆಯಾಗಿರುತ್ತದೆ. ಅದರಲ್ಲಿ ಬರೆಯ ಬೇಕೆನ್ನುವಷ್ಟರಲ್ಲಿ ಯಮ ಆ ಪುಸ್ತಕವನ್ನು ಕಸಿದುಕೊಳ್ಳುತ್ತಾನೆ. ಏಕೆಂದರೆ ಅವನಿಗೆ ಕೊಟ್ಟ ಐದು ನಿಮಿಷದ ಗಡುವು ಮುಗಿದು ಹೋಗಿರುತ್ತದೆ.

5



ಆಗ ಯಮ ಹೇಳುತ್ತಾನೆ "ನಿನ್ನ ಆಯುಸ್ಸು ಮುಗಿದಿದೆ ನಡೆ...!" ಎಂದು.

6



ಆಗ ಆ ವ್ಯಕ್ತಿ ಹೇಳುತ್ತಾನೆ "ನನಗೆ ಅಂತ ನಾನು ಏನೂ ಬರೆದುಕೊಳ್ಳಲಿಲ್ಲ...!". ಆಗ ಯಮ ಹೇಳುತ್ತಾನೆ "ನಿಮಗೆ ಅಂತ ಒಂದಷ್ಟು ವರ್ಷ ಆಯುಸ್ಸು ಕೊಟ್ಟಿರುತ್ತೇವೆ. ಅದರಲ್ಲೂ ವರವೆಂದು ಒಂದೈದು ನಿಮಿಷ ಆಯುಸ್ಸನ್ನು ಕೊಟ್ಟರೂ ನಿಮ್ಮ ಬಗ್ಗೆ ಯೋಚಿಸದೇ ಪರರ ಅವನತಿಯ ಬಗ್ಗೆ ಯೋಚಿಸುತ್ತೀರಾ ಎಂದರೆ ಏನು ಹೇಳೋಣಾ....ಜೀವನವಿಡೀ ಕೊಟ್ಟರೂ ನೀವೇನೆಂದು ತಿಳಿಯದೆ ಪರರ ಬಗ್ಗೆ ಆಲೋಚಿಸುವವರಿಗೆ ಇಲ್ಲಿ ಬದುಕುವ ಹಕ್ಕಿಲ್ಲವೆಂದು ಕರೆದೊಯ್ದುಬಿಡುತ್ತಾನೆ.

ನೀತಿ: ನಮಗೆ ಅಂತ ಒಂದಷ್ಟು ಹಾಳೆಗಳಿವೆ. ನಮಗೆ ಅಂತ ಒಂದಷ್ಟು ದಿನಗಳಿವೆ. ನಮಗೆ ಅಂತ ಒಂದು ಬದುಕಿದೆ. ನಮಗೆ ಅಂತ ಒಂದು ದಾರಿ ಇದೆ. ನಮಗೆ ಅಂತ ಏನಿದೆಯೋ ಅದು ಸನ್ಮಾರ್ಗದಲ್ಲಿರಲಿ...ಪರರ ಚಿಂತೆ ನಮಗೇಕೆ...?".

ತುಮಕೂರಿನತ್ತ ರಾಹುಲ್, ಮಂಡ್ಯ ಜಿಲ್ಲೆಯ ಗಡಿಯಲ್ಲಿ ಬೀಳ್ಕೊಡುಗೆ



ಆದಿಚುಂಚನಗಿರಿ,ಅ.8– ಕಳೆದ ಮೂರು ದಿನ ಮಂಡ್ಯದಲ್ಲಿ ಯಶಸ್ವಿಯಾಗಿ ಭಾರತ್ ಜೋಡೋ ಯಾತ್ರೆ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರಿಗೆ ಶನಿವಾರ ಮುಂಜಾನೆ ಜಿಲ್ಲೆಯ ಗಡಿಯಲ್ಲಿ ಬೀಳ್ಕೊಡುಗೆ ನೀಡಲಾಯಿತು.

ಕಳೆದ ಶುಕ್ರವಾರ ರಾತ್ರಿ ನಾಗಮಂಗಲ ತಾಲೂಕಿನ ಬೆಳ್ಳೂರಿನಲ್ಲಿ ಪಾದಯಾತ್ರೆ ಮುಗಿಸಿದ ರಾಹುಲ್‌ಗಾಂಧಿ ಆದಿಚುಂಚನ ಗಿರಿಗೆ ಆಗಮಿಸಿ ಕಾಲಭೈರವೇಶ್ವರನ ದರ್ಶನ ಮಾಡಿ, ನಿರ್ಮಲಾನಂದಶ್ರೀಗಳ ಆಶೀರ್ವಾದ ಪಡೆದರು. ಬಳಿಕ ಆದಿಚುಂಚನಗಿರಿ ಮಠದ ಆವರಣದಲ್ಲಿ ವಾಸ್ತವ್ಯ ಹೂಡಿದ್ದರು.

ಶನಿವಾರ ಮುಂಜಾನೆ 6.30ಕ್ಕೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠದಿಂದ ಹೊರಟ ರಾಹುಲ್‌ಗೆ ಜಿಲ್ಲೆಯ ಆದಿಚುಂಚನಗಿರಿ ಹಾಗೂ ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಮಾಯಸಂದ್ರ ಗಡಿಯಲ್ಲಿ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಬೀಳ್ಕೊಡುಗೆ ನೀಡಲಾಯಿತು.

ರಾಹುಲ್‌ಗೆ ಶಾಲು ಹೊದಿಸಿ, ಹಾರ ಹಾಕಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ನಾಯಕರು ಬೀಳ್ಕೊಟ್ಟರು. ಮಾಯಸಂದ್ರ–ಚುಂಚನಗಿರಿ ಗಡಿಯಲ್ಲಿ ತುಮಕೂರು ಜಿಲ್ಲೆಯ ಕಾಂಗ್ರೆಸ್ ನಾಯಕರಾದ ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಮಾಜಿ ಶಾಸಕ ಕೆ.ಎನ್.ರಾಜಣ್ಣ, ಜೆಡಿಎಸ್ ಉಚ್ಚಾಟಿತ ಶಾಸಕ ಗುಬ್ಬಿ ಶ್ರೀನಿವಾಸ್ ರಾಹುಲ್‌ಗಾಂಧಿ ಅವರನ್ನು ಬರಮಾಡಿಕೊಂಡರು. ಮಾಯಸಂದ್ರದ ಪೊಲೀಸ್ ಠಾಣೆ ಬಳಿಯಿಂದ ರಾಹುಲ್ ಪಾದಯಾತ್ರೆ ಮುಂದುವರೆಸಿದರು. ಈ ಸಂದರ್ಭದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಪಾದಯಾತ್ರೆಗೆ ಮಾಜಿ ಸಂಸದೆ ರಮ್ಯಾ ಗೈರು

ಮಂಡ್ಯದಲ್ಲಿ ನಡೆದ ಪಾದಯಾತ್ರೆಗಾಗಿ ಸೋನಿಯಾ ಗಾಂಧಿ ಹಾಗೂ ರಾಹುಲ್‌ಗಾಂಧಿ ಬಂದರೂ ಮಂಡ್ಯ ಲೋಕಸಭಾ ಕ್ಷೇತ್ರದ ಮಾಜಿ ಸಂಸದೆ ರಮ್ಯಾ ಮಾತ್ರ ಎಲ್ಲಿಯೂ ಕಾಣಲಿಲ್ಲ.

2013ರಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದೆಯಾಗಿ, ರಾಹುಲ್‌ಗಾಂಧಿ ಆಪ್ತ ಬಳಗದಲ್ಲಿ ಗುರುತಿಸಿಕೊಂಡು ಎಐಸಿಸಿ ಸಾಮಾಜಿಕ ಜಾಲತಾಣದ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸಿದ್ದ ರಮ್ಯಾ, ಹೈಕಮಾಂಡ್‌ಗೆ ಆಪ್ತರಾಗಿದ್ದರು. ಆದರೂ ಪಾದಯಾತ್ರೆಯಲ್ಲಿ ರಮ್ಯಾ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಇಲ್ಲಿ ಪಾದಯಾತ್ರೆ ನಡೆಯುತ್ತಿದ್ದರೆ ಮಾಜಿ ಸಂಸದೆ ರಮ್ಯಾ ಮಾತ್ರ ಚಿತ್ರರಂಗದ ಪುನರ್ ಪ್ರವೇಶ ಘೋಷಣೆ ಮಾಡುತ್ತಾ ಬೆಂಗಳೂರಿನಲ್ಲೇ ಇದ್ದರು. ಇತ್ತ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಡಾ.ಬಿ.ರೇವಣ್ಣ ಸಹ ಪಾದಯಾತ್ರೆಯಿಂದ ಸಂಪೂರ್ಣ ದೂರ ಉಳಿದಿದ್ದು, ಚರ್ಚೆಗೆ ಗ್ರಾಸವಾಗಿದೆ.

ಶ್ರೀಮಹದೇಶ್ವರ ಜ್ಯೋತಿ ರಥಯಾತ್ರೆಗೆ ಭಾರತೀನಗರದಲ್ಲಿ ಅದ್ಧೂರಿ ಸ್ವಾಗತ



ಭಾರತೀನಗರ, ಅ.8– ಕೆಆರ್‌ಪೇಟೆ ತಾಲೂಕಿನ ಅಂಬಿಗರಹಳ್ಳಿ –ಪುರ– ಸಂಗಾಪುರ ಬಳಿ ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣ ತೀರ್ಥ ನದಿಗಳ ತ್ರಿವೇಣಿ ಸಂಗಮ ಸ್ಥಳದಲ್ಲಿ ಅ.13ರಿಂದ 16ರವರೆಗೆ ನಡೆಯುವ ಕುಂಭಮೇಳದ ಶ್ರೀಮಹದೇಶ್ವರ ಜ್ಯೋತಿ ರಥಯಾತ್ರೆಯನ್ನು ಬಿಜೆಪಿ ಕಾರ್ಯಕರ್ತರು ಭಾರತೀನಗರದಲ್ಲಿ ಅದ್ಧೂರಿಯಾಗಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ ಮಾತನಾಡಿ, ಚಾಮರಾಜನಗರ ಜಿಲ್ಲೆಯ ಮಲೈಮಹದೇಶ್ವರ ಬೆಟ್ಟದಿಂದ ಆರಂಭಿಸಿರುವ ರಥಯಾತ್ರೆಯನ್ನು ಭಾರತೀನಗರದಲ್ಲಿ ಸ್ವಾಗತಿಸಿ ಮದ್ದೂರು, ಬೆಸಗರಹಳ್ಳಿ ಮೂಲಕ ಸಂಚರಿಸಿ ನಂತರ ಮಂಡ್ಯ ತಾಲೂಕಿಗೆ ಹಸ್ತಾಂತರಿಸಲಾಗುವುದು ಎಂದರು.

ಇದೇ ವೇಳೆ ಭಾರತೀನಗರ ಗ್ರಾಪಂ ವತಿಯಿಂದ ಮಹದೇಶ್ವರ ಜ್ಯೋತಿ ರಥಯಾತ್ರೆಗೆ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಟಿ.ಎನ್.ನರಸಿಂಹಮೂರ್ತಿ, ಉಪತಹಶೀಲ್ದಾರ್ ಶಿವಲಿಂಗಯ್ಯ, ಬಿಜೆಪಿ ತಾಲೂಕು ಅಧ್ಯಕ್ಷ ಪಣ್ಣೆದೊಡ್ಡಿ ರಘು, ಮುಖಂಡರಾದ ಹನುಮಂತೇಗೌಡ, ಪುರಸಭಾ ಸದಸ್ಯ ಮಾ.ನ.ಪ್ರಸನ್ನಕುಮಾರ, ಹಾಗಲಹಳ್ಳಿ ರಘು, ಗ್ರೈನೇಜ್ ದೊಡ್ಡಣ್ಣ, ಗ್ರಾ.ಪಂ ಅಧ್ಯಕ್ಷ ವಕ್ರತುಂಡ ವೆಂಕಟೇಶ್, ಸದಸ್ಯರಾದ ಕೆ.ವಿ.ಶ್ರೀನಿವಾಸ್, ಕೆ.ಟಿ.ಶ್ರೀನಿವಾಸ್, ಮಿಥುನ್, ಸಿಬ್ಬಂದಿಗಳಾದ ನಿಂಗಪ್ಪ, ಪ್ರಸಾದ್, ಪುಟ್ಟೇಗೌಡ, ಮಹೇಶ, ಹರಿಸ್ವಾಮಿ, ಸೇರಿದಂತೆ ಇತರರಿದ್ದರು.

ಭವ್ಯ ಸ್ಮಾರಕವನ್ನು ಬಾರ್‌ನ್ನಾಗಿ ಪರಿವರ್ತಿಸಿದ ತೆಲುಗು ಚಿತ್ರತಂಡ: ನಾಗರಿಕರ ಆಕ್ರೋಶ

ಮೇಲುಕೋಟೆ, ಅ.8– ಜಿಲ್ಲೆಯ ಪ್ರಖ್ಯಾತ ವೈಷ್ಣವ ಕ್ಷೇತ್ರವಾದ ಮೇಲುಕೋಟೆಯ ಪರಂಪರೆ, ಸಂಸ್ಕೃತಿ ಬಿಂಬಿಸುವ ಭವ್ಯ ಸ್ಮಾರಕ ರಾಯಗೋಪುರದಲ್ಲಿ ತೆಲುಗು ತಂಡ ಚಿತ್ರೀಕರಣಕ್ಕಾಗಿ ಬಾರ್ ಸೆಟ್ ನಿರ್ಮಿಸಿ ವೈಷ್ಣವ ಕ್ಷೇತ್ರಕ್ಕೆ ಅಪಮಾನ ಮಾಡಿದೆ ಎಂದು ನಾಗರಿಕರು ಆರೋಪಿಸಿದ್ದಾರೆ.

ತೆಲುಗಿನ ನಾಗಚೈತನ್ಯ ನಟಿಸುತ್ತಿರುವ 3 not 2 ಚಿತ್ರತಂಡ ಜಿಲ್ಲಾಧಿಕಾರಿಗಳಿಂದ ಷರತ್ತುಗಳನ್ವಯ ಮೇಲುಕೋಟೆಯಲ್ಲಿ ಚಿತ್ರಕರಣಕ್ಕೆ ಎರಡು ದಿನ ಅನುಮತಿ ಪಡೆದಿತ್ತು. ಷರತ್ತು ಉಲ್ಲಂಘಿಸಿ ಸ್ಮಾರಕವಾದ ರಾಯಗೋಪುರವನ್ನು ಮದುವೆ ಕಲ್ಯಾಣ ಮಂಟಪದಂತೆ ಸೆಟ್ ಆಗಿ ಬದಲಿಸಿದೆ. ಪಕ್ಕದಲ್ಲೇ ವಿವಿಧ ಬ್ರಾಂಡ್ ಮದ್ಯಪಾನವಿರೋ ಬಾಟಲ್‌ಗಳಿಟ್ಟು ಚಿತ್ರೀಕರಣ ಮಾಡುತ್ತಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ. ಈ ಹಿಂದೆಯೂ ನಾಗ ಚೈತನ್ಯ ನಟಿಸಿದ ಚಲನಚಿತ್ರ ಕಲ್ಯಾಣಿಯಲ್ಲಿ ಚಿತ್ರೀಕರಣ ಮಾಡಿದ ವೇಳೆ ರಾಜಮುಡಿ ಉತ್ಸವಕ್ಕೆ ಅಡಚಣೆ ಮಾಡಿ ದೇವಾಲಯ ಪರಂಪರೆಗೆ ಧಕ್ಕೆ ತಂದಿತ್ತು.

ಜಿಲ್ಲಾಧಿಕಾರಿಗಳ ಆದೇಶವನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದ್ದು, ಈ ಬಗ್ಗೆ ಸ್ಥಳೀಯ ಅಧಿಕಾರಿಗಳು ಹಾಗೂ ದೇವಾಲಯದ ಕಛೇರಿ ಸಿಬ್ಬಂದಿ ಕೂಡ ಪರಿಶೀಲನೆ ಮಾಡದೆ ನಿರ್ಲಕ್ಷ್ಯ ಮಾಡಿದ್ದಾರೆ. ಮೇಲುಕೋಟೆಯಲ್ಲಿ ಚಿತ್ರೀಕರಣವನ್ನು ಸಂಪೂರ್ಣವಾಗಿ ಸ್ಥಗಿತ ಮಾಡಬೇಕೆಂದು ಸ್ಥಳೀಯರಾದ ಧ್ರುವಕುಮಾರ್ ಆಗ್ರಹಿಸಿದ್ದಾರೆ.

ಕುಂಭಮೇಳ ಯಶಸ್ಸಿಗೆ ಸಚಿವರ ಮನವಿ



ಕೆ.ಆರ್.ಪೇಟೆ,ಅ.8– ಕಾವೇರಿ, ಹೇಮಾವತಿ, ಲಕ್ಷ್ಮಣ ತೀರ್ಥ ನದಿಗಳ ಸಂಗಮ ಕ್ಷೇತ್ರ ತಾಲೂಕಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ದಕ್ಷಿಣ ಭಾರತದ ಮಹಾ ಕುಂಭಮೇಳದ ಯಶಸ್ಸಿಗೆ ಎಲ್ಲರೂ ಕೈಜೋಡಿಸಿ, ನಾಲ್ಕು ದಿನಗಳ ಕಾಲ ನಡೆಯಲಿರುವ ಧಾರ್ಮಿಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ರೇಷ್ಮೆ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವ ಡಾ.ನಾರಾಯಣಗೌಡ ಮನವಿ ಮಾಡಿದರು.

ಅವರು ಇಂದು ಕೆ.ಆರ್.ಪೇಟೆ ಪಟ್ಟಣದ ಬಸವೇಶ್ವರ ನಗರದಲ್ಲಿರುವ ತಮ್ಮ ನಿವಾಸದ ಆವರಣದಲ್ಲಿ ನಡೆದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಕುಂಭಮೇಳದ ಲಾಂಛನವನ್ನು ಬಿಡುಗಡೆ ಮಾಡಿ ಮಾತನಾಡಿದರು. ಅಕ್ಟೋಬರ್ 13ರಿಂದ 16ರವರೆಗೆ ನಾಲ್ಕು ದಿನಗಳ ಕಾಲ ನಡೆಯಲಿರುವ ದಕ್ಷಿಣ ಭಾರತದ ಮಹಾಕುಂಭಮೇಳವು ಮಲೈಮಹದೇಶ್ವರರು ಶ್ರೀ ಶೈಲದಿಂದ ಮಹದೇಶ್ವರ ಕ್ಷೇತ್ರದ ಕಡೆಗೆ ಹೋಗಲು ಬಾಲಕರಾಗಿದ್ದಾಗ ಪ್ರಪ್ರಥಮವಾಗಿ ಪವಾಡ ಮಾಡಿದ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ನದಿಗಳ ಪುಣ್ಯ ಸ್ಥಳವಾಗಿರುವ ಕೆಆರ್.ಪೇಟೆ ತಾಲೂಕಿನ ಪುರ, ಸಂಗಾಪುರ, ಅಂಬಿಗರಹಳ್ಳಿ ಬಳಿ ಇರುವ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿದೆ. ಹರಗುರು ಚರಮೂರ್ತಿಗಳು ಸೇರಿದಂತೆ ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥಜಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ.ಕುಮಾರಸ್ವಾಮಿ, ಸಿದ್ಧರಾಮಯ್ಯ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು, ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಶ್ರೀಗಳು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರಹೆಗ್ಗಡೆಯವರು, ಚಂದ್ರವನ ಆಶ್ರಮದ ತ್ರಿನೇತ್ರಮಹಂತ ಶಿವಯೋಗಿಗಳು ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಶಾಸಕರು, ವಿಧಾನಪರಿಷತ್ ಸದಸ್ಯರು ಈ ಕುಂಭಮೇಳದಲ್ಲಿ ಭಾಗವಹಿಸುತ್ತಿದ್ದಾರೆ. ಈ ಪುಣ್ಯ ಕಾರ್ಯಕ್ರಮದಲ್ಲಿ ಕನಿಷ್ಠ 6 ಲಕ್ಷಕ್ಕೂ ಹೆಚ್ಚಿನ ಭಕ್ತಾದಿಗಳು ಸೇರುವ ನಿರೀಕ್ಷೆ ಇದೆ. ಕಾರ್ಯಕ್ರಮದ ಯಶಸ್ಸಿಗೆ ಬಿಜೆಪಿ ಕಾರ್ಯಕರ್ತರು, ಸಂಘ ಪರಿವಾರದ ಮುಖಂಡರು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಎಂದು ಸಚಿವ ಡಾ.ನಾರಾಯಣಗೌಡ ಮನವಿ ಮಾಡಿದರು..

ಕುಂಭಮೇಳವು ಮೊದಲ ಬಾರಿಗೆ 2013ರಲ್ಲಿ ನಡೆದಿತ್ತು. ಈಗ 9 ವರ್ಷಗಳ ನಂತರ ಎರಡನೇ ಮಹಾಕುಂಭ ಮೇಳವು ಅ.13ರಿಂದ 16ವರೆಗೆ ನಡೆಯುತ್ತಿದೆ ಎಂದರು.

ಸಭೆಯಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಜಿ.ಪಂ.ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ತಾಪಂ ಮಾಜಿ ಅಧ್ಯಕ್ಷ ಬಿ.ಜವರಾಯಿಗೌಡ, ರಾಜ್ಯ ಬಿಜೆಪಿ ಕಾರ್ಯದರ್ಶಿ ಜಗದೀಶ್ ಹಿರೇಮನೆ, ರಾಜ್ಯ ಬಿಜೆಪಿ ಯುವಮೋರ್ಚಾ ಕಾರ್ಯದರ್ಶಿ ಅವಿನಾಶ್, ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿ ನಿಶ್ಚಿತಾ, ಖಜಾಂಚಿ ಸುರಭಿ, ಮನ್‌ಮುಲ್ ನಿರ್ದೇಶಕಿ ರೂಪ, ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಬಿಜೆಪಿ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಕೆ.ನಾಗಣ್ಣಗೌಡ, ತಾಲೂಕು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕಾಂತರಾಜು, ಸೇರಿದಂತೆ ನೂರಾರು ಬಿಜೆಪಿ ಕಾರ್ಯಕರ್ತರು ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ್ದರು.

ಇಂದು ಕಾವೇರಿ ಸಾಯಿಧಾಮದಲ್ಲಿ ಸತ್ಯನಾರಾಯಣ ಪೂಜೆ, ಉಚಿತ ಸಹಜಯೋಗ ಶಿಬಿರ

ಶ್ರೀರಂಗಪಟ್ಟಣ, ಅ.8– ಇಲ್ಲಿಗೆ ಸಮೀಪದ ದೊಡ್ಡೇಗೌಡನಕೊಪ್ಪಲು ಗ್ರಾಮದಲ್ಲಿರುವ ಶ್ರೀ ಕಾವೇರಿ ಸಾಯಿಧಾಮದಲ್ಲಿ ನಾಳೆ (ಅ.8) ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಉಚಿತ ಸಹಜಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 9 ಗಂಟೆಯಿಂದ ಸತ್ಯನಾರಾಯಣ ಪೂಜೆ ಆರಂಭಗೊಳ್ಳಲಿದ್ದು, ನಂತರ ಸಹಜಯೋಗ ತರಬೇತಿಗೆ ಚಾಲನೆ ನೀಡಲಾಗುವುದು. ಸಾಯಿಧಾಮದಲ್ಲಿ ನಿರಂತರ ಸಹಜಯೋಗದ ತರಬೇತಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಶ್ರೀ ಕ್ಷೇತ್ರದ ವ್ಯವಸ್ಥಾಪಕ ಟ್ರಸ್ಟಿ ಹೆಚ್. ಜಯದೇವ್ ತಿಳಿಸಿದ್ದಾರೆ. ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.



ಮೇಲುಕೋಟೆ ಗ್ರಾಮ ಪಂಚಾಯಿತಿ ವತಿಯಿಂದ ಕೆ.ಆರ್.ಪೇಟೆ ಮಹಾಕುಂಭ ಮೇಳದ ಅನ್ನದಾನಕ್ಕಾಗಿ ಮನೆ–ಮನೆಗಳಲ್ಲಿ ಅಕ್ಕಿ, ಬೇಳೆ, ಎಣ್ಣೆ ಸಂಗ್ರಹಕ್ಕೆ ಚಾಲನೆ ನೀಡಲಾಯಿತು. ಸಂತಾನ ರಾಮನ್ ಮತ್ತು ಅನುರಾಧ ಎರಡು ಮೂಟೆ ಅಕ್ಕಿಯನ್ನು ಗ್ರಾ.ಪಂ ಉಪಾಧ್ಯಕ್ಷ ತಿರುಮಲೈ ಪಿಡಿಒ ರಾಜೇಶ್ವರ್, ಗ್ರಾಮ ಲೆಕ್ಕಾಧಿಕಾರಿಗೆ ನೀಡಿದರು. ಈ ವೇಳೆ ಗ್ರಾ.ಪಂ ಸದಸ್ಯ ಜಿ.ಕೆ.ಕುಮಾರ್, ಯುವ ಮುಖಂಡ ಸಿದ್ಧರಾಮು, ಪಂಚಾಯಿತಿ ಸಿಬ್ಬಂದಿ ಇದ್ದರು.

ಒಂದನೇ ಪುಟದಿಂದ

ಹಾಗೆಯೇ ಅಧ್ವಾನದಿಂದಲೂ ಕೂಡಿತ್ತು..!!

ಕಾರ್ಯಕ್ರಮದಲ್ಲಿ ಮಾತ್ರ ಪಾಲ್ಗೊಂಡು ಉಳಿದ ಕಾರ್ಯಕ್ರಮಗಳಿಗೆ ಗೈರಾದರು. ಈ ಎಲ್ಲವೂ ಕಡೆಗಣನೆಯನ್ನು ತೋರ್ಪಡಿಸುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಅನುಭವದ ಕೊರತೆ: ನಾಡಹಬ್ಬವನ್ನು ಯಶಸ್ವಿಯಾಗಿ, ಅರ್ಥಪೂರ್ಣವಾಗಿ ಆಚರಿಸಬೇಕಾದರೆ ಇನ್ನಾದರೂ ದಸರಾ ಪ್ರಾಧಿಕಾರ ರಚಿಸಬೇಕು. ಸ್ಥಳೀಯರು ಜಿಲ್ಲಾ ಮಂತ್ರಿಯಾಗಿದ್ದರೆ, ದಸರಾ ಮಹೋತ್ಸವದ ಅದ್ಧೂರಿಯಾಗಿ ನಡೆಸಲು ಸಹಕಾರಿಯಾಗುತ್ತಿತ್ತು. ಜಿಲ್ಲಾ ಮಂತ್ರಿ ಎಸ್.ಟಿ.ಸೋಮಶೇಖರ್ ಅವರಿಗೆ ಅನುಭವದ ಕೊರತೆ ಎದ್ದು ಕಾಣುತ್ತಿತ್ತು. ಅವರೂ ದಸರಾ ಯಶಸ್ಸಿಗೆ ಶ್ರಮಿಸಿದ್ದಾರೆ.

ಜನ ನುಗ್ಗಿದರು: ಜಂಬೂ ಸವಾರಿ ಮೆರವಣಿಗೆ ನಡೆಯುತ್ತಿದ್ದ ವೇಳೆ ಹಲವೆಡೆ ಜನರು ನುಗ್ಗಿದರು. ಅಂಬಾರಿ ಆನೆಯೇ ಕಾಣಿಸುತ್ತಿರಲಿಲ್ಲ. ಅಂಬಾರಿ ಮುಂದೆ ಜನರ ದಂಡೇ ನೆರೆದಿತ್ತು. ಈ ವೇಳೆ ಏನಾದರು ಅನಾಹುತ ಸಂಭವಿಸಿದ್ದರೆ ಯಾರು ಹೊಣೆ? ಅದೃಷ್ಟಕ್ಕೆ ತಾಯಿ ಚಾಮುಂಡೇಶ್ವರಿ ಕೃಪೆಯಿಂದ ಏನು ಆಗಲಿಲ್ಲ ಎಂದರು.

ಕ್ರೀಡಾ ದಸರಾ ಸೊರಗಿತು: ಪ್ರತಿವರ್ಷ ಸಂಭ್ರಮದಿಂದ ನಡೆಯುತ್ತಿದ್ದ ಕ್ರೀಡಾ ದಸರಾ ಈ ಬಾರಿ ಉತ್ಸಾಹ ಕಳೆದುಕೊಂಡಿತು. ಆಸಕ್ತಿಯಿಂದ ಬೇರೆ ಜಿಲ್ಲೆಗಳಿಂದ ಬಂದಿದ್ದ ಕ್ರೀಡಾಪಟುಗಳಿಗೆ ಊಟ, ವಸತಿ ವ್ಯವಸ್ಥೆ ಮಾಡದೆ, ರಸ್ತೆ ಬದಿಯಲ್ಲೇ ವಾಸ್ತವ್ಯ ಹೂಡುವಂತೆ ಮಾಡಲಾಯಿತು. ದಸರಾ ಕ್ರೀಡಾಕೂಟದಲ್ಲಿ ಮ್ಯಾರಥಾನ್ ಮಾಡುವುದಾಗಿ ಈ ಹಿಂದೆ ಘೋಷಣೆ ಮಾಡಲಾಗಿತ್ತು. ಆದರೆ, ಮ್ಯಾರಥಾನ್ ನಡೆಯಲೇ ಇಲ್ಲ. ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳುವವರಿಗೆ ಟಿ–ಶರ್ಟ್ ಕೊಡಲು ಹಣವಿಲ್ಲ ಎಂಬ ಸಬೂಬು ಹೇಳಿ ಆ ಓಟವನ್ನೇ ಸ್ಥಗಿತಗೊಳಿಸಲಾಗಿದೆ. ಪ್ರಾಯೋಜಕರನ್ನು ಹುಡುಕಿ ಮ್ಯಾರಥಾನ್ ನಡೆಸಬಹುದಾಗಿತ್ತು. ಹಣದ ಕೊರತೆಯಿಂದ ಸಾಕಷ್ಟು ಕ್ರೀಡಾ ಚಟುವಟಿಕೆಗಳನ್ನು ನಡೆಸಿಲ್ಲ. ಇದು ಕ್ರೀಡಾಪಟುಗಳ ಉತ್ಸಾಹದ ಉತ್ಸವ ಆಗಲಿಲ್ಲ ಎಂದು ದೂರಿದರು.

ಕವಿಗೋಷ್ಠಿ ಸತ್ತ ಗೋಷ್ಠಿಯಾಗಿತ್ತು: ಪ್ರತಿಷ್ಠಿತ ದಸರಾ ಕವಿಗೋಷ್ಠಿ ಈ ಬಾರಿ ಸತ್ತ ಗೋಷ್ಠಿಯಾಗಿತ್ತು. ಆಹ್ವಾನ ಪತ್ರಿಕೆಯಲ್ಲಿ ಮರಣ ಹೊಂದಿರುವ ಕವಿಗಳ ಹೆಸರನ್ನು ಪ್ರಕಟಿಸಲಾಗಿತ್ತು. ಸತ್ತಿದ್ದವರ ಆತ್ಮಗಳಿಂದ ಕವಿಗೋಷ್ಠಿ ನಡೆಸಲು ಆಲೋಚಿಸಿದ್ದಂತೆ ಭಾಸವಾಗುತ್ತಿತ್ತು ನಾನು ಸಾಹಿತ್ಯ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆಯಾಗಿದ್ದೇನೆ. ನನಗೆ ದಸರಾ ಮಾಡಿದ ಅನುಭವ ಇತ್ತು. ನನ್ನ ಸಲಹೆ ಕೇಳಲಿಲ್ಲ ಎಂದು ಗುಡುಗಿದರು.

ಸ್ಥಳೀಯ ಕಲಾವಿದರ ನಿರ್ಲಕ್ಷ್ಯ: ನಾನು ಸಚಿವನಾಗಿದ್ದಾಗ ಯುವ ದಸರಾ ಆರಂಭಿಸಿದ್ದೆ. ಸ್ಥಳೀಯ ಕಲಾವಿದರಿಗೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಯುವ ದಸರಾ ನಡೆಸಲಾಗುತ್ತಿತ್ತು. ಈ ಬಾರಿ ಯುವ ದಸರಾದಲ್ಲಿ ಸ್ಥಳೀಯ ಕಲಾವಿದರನ್ನು ಕಡೆಗಣಿಸಲಾಗಿದೆ. ಗಾಯಕ ಸೋನು ನಿಗಮ್ ಅವರಿಗೆ 40 ಲಕ್ಷರೂ. ನೀಡಲಾಗಿದೆ. ಆದರೆ, ಮೈಸೂರಿನವರೇ ಆಗಿರುವ ದರ್ಶನ್, ಯಶ್ ಅವರನ್ನು ಆಹ್ವಾನಿಸಿಲ್ಲ. ಕಾರ್ಯಕ್ರಮದ ಮೊದಲ ದಿನ ಪುನೀತ್ ನಮನ ಕಾರ್ಯಕ್ರಮಕ್ಕೆ ಡಾ.ರಾಜ್‌ಕುಮಾರ್ ಕುಟುಂಬದ ಸದಸ್ಯರು ಆಗಮಿಸಿದ್ದರು. ಅವರನ್ನು ನೋಡಲು ಸಾಕಷ್ಟು ಜನ ಸೇರಿದ್ದರು. ಕನ್ನಡದ ನಟರು, ಕಲಾವಿದರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೆ ಜನ ಸೇರುತ್ತಿರಲಿಲ್ಲವೇ? ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಬಗ್ಗೆ ನಿರ್ಧಾರ

ಹೇಳಿದರು. ಬಿಜೆಪಿ ಸರ್ಕಾರದಲ್ಲಿ ಶೇ.40ರಷ್ಟು ಕಮಿಷನ್ ಪಡೆದುಕೊಳ್ಳುವ ಭ್ರಷ್ಟ ವ್ಯವಸ್ಥೆ ಇದೆ. ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳನ್ನು ಜನರ ಮುಂದಿಟ್ಟು ಚುನಾವಣೆ ಎದುರಿಸುತ್ತೇವೆ. ಈ ಮೂರು ಪ್ರಮುಖ ಸಮಸ್ಯೆಗಳಿಂದ ಬೇಸತ್ತಿರುವುದು ಯಾತ್ರೆ ಸಮಯದಲ್ಲಿ ಜನರನ್ನು ಭೇಟಿ ಮಾಡಿದಾಗ ಮನದಟ್ಟಾಗಿದೆ. ಹಾಗಾಗಿಯೇ ನಾವು ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳುತ್ತಿರುವುದು ಎಂದರು.

ಯಾತ್ರೆ ಅನುಭವ: ಪಾದಯಾತ್ರೆಯನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಉತ್ತರಿಸಿ, ನನ್ನ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸಲು ಬಿಜೆಪಿಯವರು ಹಣ ಖರ್ಚು ಮಾಡಿ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೆ ಜನರಿಂದ ಸತ್ಯ ತಿಳಿದುಕೊಳ್ಳಲು ಪಾದಯಾತ್ರೆ ಆಯ್ಕೆ ಮಾಡಿಕೊಂಡಿದ್ದೇನೆ. ಅವರ ಜತೆಗೆ ಹೆಚ್ಚು ಆಪ್ತವಾಗಿ ಮಾತನಾಡಬಹುದು, ನೋವು, ಸಂಕಷ್ಟಗಳನ್ನು ಅರಿಯಬಹುದಾಗಿದೆ. ಇದು ನನಗೆ ದೊಡ್ಡ ಅನುಭವವಾಗಿದೆ. ನಾನೂ ಎಲ್ಲರಂತೆ ಕಾರು, ವಿಮಾನದಲ್ಲಿ ಸಂಚರಿಸಿದ್ದರೆ ಸಾರ್ವಜನಿಕರ ಸಮಸ್ಯೆ, ಅಭಿಪ್ರಾಯ ಗೊತ್ತಾಗುತ್ತಿರಲಿಲ್ಲ ಎಂದು ಯಾತ್ರೆಯ ಅನುಭವಗಳನ್ನು ಬಿಚ್ಚಿಟ್ಟರು. ಯಾತ್ರೆ ಪ್ರಾರಂಭವಾಗಿ 31 ದಿನಗಳಷ್ಟೇ ಕಳೆದಿದ್ದು, ಇನ್ನೂ ಇದು ಆರಂಭಿಕ ಹಂತವಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅನುಭವಗಳು ಪಾಠವಾಗುತ್ತವೆ. ಜನರ ಜತೆಗೆ ಮಾತನಾಡದಿದ್ದರೆ ಅವರ ಪರವಾಗಿ ಕೆಲಸ ಮಾಡುವುದು ಕಷ್ಟಕರ. ಅದಕ್ಕಾಗಿಯೇ ಇಂತಹದೊಂದು ಪ್ರಯತ್ನಕ್ಕೆ ಕೈ ಹಾಕಿದ್ದೇನೆ ಎಂದರು. ಭಾರತವನ್ನು ಒಗ್ಗೂಡಿಸುವುದು ಯಾತ್ರೆಯ ಉದ್ದೇಶವೇ ಹೊರತು 2024ರ ಚುನಾವಣೆ ಗೆಲ್ಲುವುದಷ್ಟೇ ನಮ್ಮ ಗುರಿಯಲ್ಲ. ಹಿಂಸಾಚಾರ, ಕೋಮು ದ್ವೇಷದಿಂದ ದೇಶವನ್ನು ವಿಭಜಿಸಲಾಗುತ್ತಿದೆ. ಆರ್ಥಿಕ ಅಸಮಾನತೆ ತಾಂಡವವಾಡುತ್ತಿದ್ದು, ಕೆಲವರಷ್ಟೇ ಶ್ರೀಮಂತರಾಗುತ್ತಿದ್ದಾರೆ. ಒಬ್ಬಿಬ್ಬರ ಬಳಿ ದೇಶದ ಸಂಪತ್ತು ಕ್ರೋಢೀಕರಣವಾಗುತ್ತಿದೆ. ಬೆಲೆ ಏರಿಕೆ, ಆರ್ಥಿಕ ಕುಸಿತದಿಂದ ಜನರು ಜರ್ಜರಿತರಾಗಿದ್ದು, ಆ ಬಗ್ಗೆ ಮಾತನಾಡುವುದು ಯಾತ್ರೆಯ ಉದ್ದೇಶವಾಗಿದೆ ಎಂದು ವಿವರಿಸಿದರು. ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕಾಂಗ್ರೆಸ್ ರಾಷ್ಟ್ರವನ್ನು ಒಗ್ಗೂಡಿಸಿ, ಅಭಿವೃದ್ಧಿ ಮಾಡಿದೆಯೇ ಹೊರತು ಎಂದೂ ವಿಭಜನೆ ಮಾಡಿಲ್ಲ ಎಂದರು.

'ಪೇಜಾವರ ಶ್ರೀಧಾಮ' ಸಸ್ಯೋದ್ಯಾನಕ್ಕೆ 3ನೇ ಬಾರಿ ಪ್ರಥಮ ಬಹುಮಾನ







ಮೈಸೂರು, ಅ.8 (ಎಸ್‌ಬಿಡಿ)– ಮೈಸೂರು ದಸರಾ ಫಲಪುಷ್ಪ ಪ್ರದರ್ಶನದ ಅಂಗವಾಗಿ ನಡೆದ ತೋಟಗಾರಿಕೆ ವಿಭಾಗದ ಸ್ಪರ್ಧೆಯಲ್ಲಿ 'ಪೇಜಾವರ ಶ್ರೀಧಾಮ'ದ ಸಸ್ಯೋದ್ಯಾನಕ್ಕೆ ಮೂರನೇ ಬಾರಿ ಪ್ರಥಮ ಬಹುಮಾನ ಲಭಿಸಿದೆ.

ಫಲಪುಷ್ಪ ಪ್ರದರ್ಶನ ಆವರಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀಧಾಮದ ತೋಟಗಾರಿಕೆ ಮೇಲುಸ್ತುವಾರಿ ಜಯರಾಮ್ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ ಶ್ರೀಧಾಮದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಹಿರಿಯ ನಾಗರಿಕರ ಆರೈಕೆಗಾಗಿ ಶ್ರೀ ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿಯವರು ಮೈಸೂರಿನ ಜೆ.ಪಿ.ನಗರದಲ್ಲಿ 'ಪೇಜಾವರ ಶ್ರೀಧಾಮ' ಕೇಂದ್ರವನ್ನು ಸ್ಥಾಪಿಸಿದ್ದು, ಇಲ್ಲಿ ಹಲವರು ಆಸರೆ ಪಡೆದಿದ್ದಾರೆ. ತಮ್ಮ ಖರ್ಚುವೆಚ್ಚವನ್ನು ಭರಿಸಲು ಶಕ್ತರಾಗಿರುವವರು ಹಾಗೂ ಸಾಧ್ಯವಿಲ್ಲದ ಸ್ಥಿತಿಯಲ್ಲಿರುವ ಹಿರಿಯ ಜೀವಗಳಿಗೂ ಇಲ್ಲಿ ನೆಲೆ ಕಲ್ಪಿಸಲಾಗಿದೆ.

ಆರೋಗ್ಯ ತಪಾಸಣೆ, ಮನರಂಜನೆ, ಪೌಷ್ಟಿಕ ಆಹಾರ, ಪ್ರತ್ಯೇಕ ಬೆಡ್, ವಿಸ್ತಾರವಾದ ವಿಶ್ರಾಂತಿ ಕೋಣೆ, ಆಂಬುಲೆನ್ಸ್ ಸೇವೆ ಸೇರಿದಂತೆ ಎಲ್ಲಾ ಅಗತ್ಯ ಸೌಕರ್ಯಗಳೊಂದಿಗೆ ಕುಟುಂಬ ಪರಿಸರವನ್ನು ಕಲ್ಪಿಸಿಕೊಡಲಾಗಿದೆ, ಜೊತೆಗೆ ಸಸ್ಯೋಧ್ಯಾನವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲಾಗಿದ್ದು, ಅಚ್ಚ ಹಸಿರಿನ ಗಿಡಮರಗಳ ನಡುವೆ ಅರಳಿ ನಗುವ ಬಣ್ಣ ಬಣ್ಣದ ಹೂಗಳು ಕಣ್ಮನ ಸೆಳೆಯುತ್ತವೆ.

ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆಗೆ ಖಂಡನೆ



ಮೈಸೂರು,ಅ.8– ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಬದಲಿಸಿರುವುದು ಖಂಡನಾರ್ಹ ಎಂದು ಜೆಡಿಎಸ್ ಮುಖಂಡ, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ತಿಳಿಸಿದ್ದಾರೆ. ಅಪ್ರತಿಮ ಸಾಹಸಿ ಹಾಗೂ ಅತ್ಯುತ್ತಮ ಆಡಳಿತಗಾರನಾಗಿದ್ದ ಟಿಪ್ಪು ಹೆಸರಿಗೆ ಮಸಿ ಬಳಿಯುವ ಹುನ್ನಾರ ನಡೆಸಿರುವ ಸಂಘ ಪರಿವಾರ ಹಾಗೂ ಅದರ ಅಂಗಸಂಸ್ಥೆಗಳ ಒತ್ತಡದಿಂದ ಹೀಗೆ ರೈಲಿನ ಹೆಸರು ಬದಲಿಸಿ, ಸಮುದಾಯವೊಂದರ ಓಲೈಕೆಗೆ ಸರ್ಕಾರ ಮುಂದಾಗಿದೆ. ಬಿಜೆಪಿ ಸರ್ಕಾರ ಬಂದಾಗಿನಿಂದಲೂ ಅಲ್ಪಸಂಖ್ಯಾತರ ಮೇಲೆ ಗದಾಪ್ರಹಾರ ನಿರಂತರವಾಗಿ ನಡೆದಿದೆ. ಸರ್ಕಾರದ ಈ ನಡೆ ಮೈಸೂರು ರಾಜವಂಶಸ್ಥರಿಗೆ ಮಾಡಿದ ಅಪಮಾನವಲ್ಲದೆ ಮತ್ತೇನೂ ಅಲ್ಲ. ಮೈಸೂರು ಸಂಸ್ಥಾನದ ರಾಜರು ಸಮಾನತೆ, ಸಹಬಾಳ್ವೆಗೆ ಆದ್ಯತೆ ನೀಡಿರುವುದು ಕಣ್ಣೆದುರಿಗಿದ್ದರೂ ಕ್ಷುಲ್ಲಕ ರಾಜಕಾರಣಕ್ಕೆ ರೈಲಿನ ಮೇಲಿದ್ದ ಟಿಪ್ಪು ಹೆಸರು ತೆಗೆದಿದ್ದು ಖಂಡನೀಯ. ಮೈಸೂರು ರಾಜಮನೆತನದ ಬಗ್ಗೆ ಈ ನಾಡಿನ ಜನರಲ್ಲಿರುವ ಗೌರವವನ್ನು ಬಿಜೆಪಿ ಸ್ವಾರ್ಥ ಸಾಧನೆಗೆ ಬಳಸಲು ಯತ್ನಿಸಿರುವುದನ್ನು ಜನ ಕ್ಷಮಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಂಚ್ಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವೆಂಕಟೇಶ್ ಆಯ್ಕೆ



ಮೈಸೂರು,ಅ.8–ಮೈಸೂರು ತಾಲೂಕು ಹಂಚ್ಯಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತಕ್ಕೆ ನೂತನ ಅಧ್ಯಕ್ಷರಾಗಿ ಎಚ್.ವಿ.ವೆಂಕಟೇಶ್ ಹಾಗೂ ಉಪಾಧ್ಯಕ್ಷರಾಗಿ ಸಾತಗಳ್ಳಿ ನಂಜಪ್ಪ ಶನಿವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿ ಅಮಿದಾ, ಸಂಘದ ಮುಖ್ಯಾಧಿಕಾರಿ ಬಸವರಾಜು ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ನೂತನ ಅಧ್ಯಕ್ಷ ವೆಂಕಟೇಶ್ ಹಾಗೂ ಉಪಾಧ್ಯಕ್ಷ ಇವರನ್ನು ಸಂಘದ ಆವರಣದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಎಚ್.ಸಿ.ಕುಮಾರಸ್ವಾಮಿ, ಮಾಜಿ ಉಪಾಧ್ಯಕ್ಷ ಎಚ್.ಎಸ್.ರಾಮಚಂದ್ರ, ಕಾಂಗ್ರೆಸ್ ಮುಖಂಡ ಕೆ.ಎಸ್.ಸಣ್ಣಸ್ವಾಮಿ, ಗ್ರಾ.ಪಂ. ಮಾಜಿ ಸದಸ್ಯರಾದ ಬಸವರಾಜು, ಚೆನ್ನಯ್ಯ, ಜಯಣ್ಣ, ಸಹಕಾರ ಸಂಘದ ನಿರ್ದೇಶಕರಾದ ಗೌರಮ್ಮ, ಪಿ.ಲಕ್ಷ್ಮಿನಾರಾಯಣಚಾರ್, ಎಚ್.ಎಸ್.ಸ್ವಾಮಿಗೌಡ, ಜೋಗಿಸಿದ್ದಯ್ಯ, ಕಾಳಿಸಿದ್ದನಹುಂಡಿ ಮಹದೇವು, ಗಳಿಗರಹುಂಡಿ ಮಹದೇವು, ಬಿ.ಸಿದ್ದಯ್ಯ, ಶಂಕರಪ್ಪ, ಪುಟ್ಟತಮ್ಮ, ಮಾಜಿ ಅಧ್ಯಕ್ಷರಾದ ಮಹದೇವು, ಗ್ರಾಮದ ಮುಖಂಡರಾದ ದೇವೇಗೌಡ, ಕಾಳೇಗೌಡ, ಹೊನ್ನೇಗೌಡ, ಮಾಲಯ್ಯ, ಸಾತಗಳ್ಳಿ ಯೋಗೀಶ್, ಜವರೇಗೌಡ, ಸಿದ್ದರಾಜು, ಸಂಘದ ಸಹಕಾರ್ಯದರ್ಶಿ ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯನವರ ನಿಂದಿಸಿದ ಹೆಡ್‌ಕಾನ್‌ಸ್ಟೇಬಲ್ ಅಮಾನತು



ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಸ್ವಾಗತ

ಮೈಸೂರು, ಅ.8(ಎಂಕೆ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದ ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೇಬಲ್‌ನನ್ನು ಅಮಾನತು ಮಾಡಿರುವುದನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಸ್ವಾಗತಿಸಿದ್ದಾರೆ. ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೇಬಲ್ ರಾಜಶೇಖರ ಖಾನಾಪೂರ, ಫೇಸ್‌ಬುಕ್‌ನಲ್ಲಿ 'ಪೊಲೀಸರಿಗೆ ಬಯ್ಯುವ ನೀನು ಪೊಲೀಸ್ ಎಸ್ಕಾರ್ಟ್ ಇಲ್ಲದೆ ಮನೆಗೆ ಹೋಗು' ಎಂದು ಸಿದ್ದರಾಮಯ್ಯ ಅವರಿಗೆ ಕೊಲೆ ಬೆದರಿಕೆ ಹಾಕಿದ್ದ ವೀಡಿಯೋ ವೈರಲ್ ಆಗಿತ್ತು. ಈ ವಿಷಯವಾಗಿ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ದೂರು ನೀಡಲಾಗಿತ್ತು.

ಇದೀಗ ಎಸ್ಪಿ ಅವರು ನಮ್ಮ ದೂರಿನನ್ವಯ ರಾಜಶೇಖರ ಖಾನಾಪೂರ ಅವರನ್ನು ಸೇವೆಯಿಂದ ಅಮಾನತು ಮಾಡಿದ್ದಾರೆ. ಎಸ್ಪಿಯವರ ಕ್ರಮವನ್ನು ಸ್ವಾಗತಿಸುತ್ತೇನೆ. ಮುಂದೆಂದೂ ಇಂತಹ ಘಟನೆ ನಡೆಯದಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಕ್ರಮ ವಹಿಸಬೇಕೆಂದು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಕಾಡು ಪ್ರಾಣಿಗಳಿಂದ ಜನ, ಜಾನುವಾರು ರಕ್ಷಣೆಗೆ ಆಗ್ರಹ



ಮೈಸೂರು,ಅ.8–ಕಾಡು ಪ್ರಾಣಿಗಳಿಂದ ಜನ–ಜಾನುವಾರು ರಕ್ಷಣೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ ಮನವಿ ಮಾಡಿದ್ದಾರೆ.

ಆಹಾರ ಅರಸಿ ನಾಡಿಗೆ ಬರುತ್ತಿರುವ ಹುಲಿ, ಚಿರತೆ ಹಾಗೂ ಆನೆಗಳಂತಹ ವನ್ಯಪ್ರಾಣಿಗಳು ಕಾಡಂಚಿನ ಗ್ರಾಮಗಳಲ್ಲಿನ ರೈತರು ಹಾಗೂ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿವೆ. ಇಂತಹ ಅನೇಕ ಘಟನೆಗಳಲ್ಲಿ ಜೀವಹಾನಿಯಾಗಿದೆ. ತಮ್ಮ ಜೀವನಕ್ಕೆ ಆಸರೆಯಾಗಿರುವ ಜಾನುವಾರುಗಳನ್ನು ಕಾಡು ಪ್ರಾಣಿಗಳಿಂದ ರಕ್ಷಿಸಲು ಹೋಗಿ ರೈತರೂ ಬಲಿಯಾಗುತ್ತಿದ್ದಾರೆ. ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಉತ್ತಮ ಬೆಲೆ ನೀಡಿ: ಸಂಕಷ್ಟದ ನಡುವೆಯೂ ರೈತ ಬೆಳೆಯುವ ಬೆಳೆಗೆ ಸೂಕ್ತ ಬೆಲೆ ಸಿಗದೆ ಆತ ಸಾಲದ ಸುಳಿಯಲ್ಲಿ ಸಿಲುಕುವಂತಾಗಿದೆ. ರೈತರಿಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಆದರೆ ಆತನ ಸಂಕಟ, ನೋವು, ದುಮ್ಮಾನ ಪರಿಹರಿಸಲು ಸಾಧ್ಯವಾಗಿಲ್ಲ. ಕಾಯಕಯೋಗಿ ರೈತರ ರಕ್ಷಿಸುವ ನಿಟ್ಟಿನಲ್ಲಿ ಅವರು ಬೆಳೆಯುವ ಬೆಳೆಗಳಿಗೆ ಸೂಕ್ತ ಬೆಲೆ ಸಿಗುವಂತಹ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕೆಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಒತ್ತಾಯಿಸಿದ್ದಾರೆ.

ದಸರಾ ಮುಗಿದರೂ ಮೈಸೂರಿಗೆ ಹರಿದು ಬರುತ್ತಿದೆ ಪ್ರವಾಸಿಗರ ದಂಡು

- ಎಲ್ಲಾ ಪ್ರವಾಸಿ ತಾಣಗಳಲ್ಲಿ ಜನವೋ ಜನ
- ಅರಮನೆ ಸುತ್ತಮುತ್ತ ಕಾಲಿಡುವುದು ಕಷ್ಟ ಕಷ್ಟ
- ದೀಪಾಲಂಕಾರಕ್ಕೆ ಮಾರು ಹೋದ ಪ್ರವಾಸಿಗರು
- ಎಲ್ಲೆಡೆ ವಾಹನ ದಟ್ಟಣೆ; ಆದರೂ ಸಂಭ್ರಮಾಚರಣೆ
- ವಸ್ತುಪ್ರದರ್ಶನ, ಅರಮನೆ, ಮೃಗಾಲಯ, ಚಾಮುಂಡಿಬೆಟ್ಟದಲ್ಲಿ ಜನಜಾತ್ರೆ


ಮೈಸೂರಿನ ಚಾಮರಾಜ ಒಡೆಯರ್ ವೃತ್ತದಲ್ಲಿ ದೀಪಾಲಂಕಾರ ಸವಿಯುತ್ತಿರುವ ಜನಸಮೂಹ.

ದೀಪಾಲಂಕಾರಕ್ಕೆ ಮುಗಿಬಿದ್ದ ಜನ

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಲ್ಲೊಂದಾದ ಜಗಮಗಿಸುವ ದೀಪಾಲಂಕಾರ ಅವಧಿಯನ್ನು ಅ.10ರವರೆಗೆ ವಿಸ್ತರಣೆ ಮಾಡಿದ್ದು, ಶನಿವಾರವೂ ಲಕ್ಷಾಂತರ ಜನ ದೀಪಾಲಂಕಾರ ಸವಿದರು. ವಾಹನಗಳ ಮೂಲಕ ರಸ್ತೆಗಳನ್ನು ಸುತ್ತುಹಾಕಿ ಪ್ರಮುಖ ವೃತ್ತಗಳು ಸೇರಿದಂತೆ ಅತ್ಯಾಕರ್ಷಕ ದೀಪಾಲಂಕಾರವಿರುವ ಸ್ಥಳಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಕೆಲ ರಸ್ತೆಗಳಲ್ಲಿ ಏಕಮುಖ ಸಂಚಾರ ಹಾಗೂ ವಾಹನ ನಿಲುಗಡೆಗೆ ನಿರ್ಬಂಧ ಇರುವುದರಿಂದ ಸೂಕ್ತ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ನಡೆದೇ ದೀಪಾಲಂಕಾರವನ್ನು ಕಣ್ತುಂಬಿಕೊಂಡರು.

ಮೈಸೂರು,ಅ.8(ಎಸ್‌ಬಿಡಿ)– ದಸರಾ ಸಂಪನ್ನಗೊಂಡರೂ ಮೈಸೂರಿಗೆ ಪ್ರವಾಸಿಗರ ದಂಡೇ ಹರಿದುಬರುತ್ತಿದ್ದು, ಶನಿವಾರ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲೂ ನೂಕುನುಗ್ಗಲು ಉಂಟಾಗಿತ್ತು.

ವಿಶ್ವದ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲೊಂದಾದ ಮೈಸೂರು, ಕೋವಿಡ್ ಪರಿಣಾಮ 2 ವರ್ಷಗಳಿಂದ ಮಂಕಾಗಿತ್ತು. ಸದ್ಯ ಅದ್ಧೂರಿ ದಸರಾ ಪರಿಣಾಮ ಪ್ರವಾಸೋದ್ಯಮದ ಚೇತರಿಕೆ ಜೊತೆಗೆ ಹೋಟೆಲ್ ಉದ್ಯಮ ಸೇರಿ ಎಲ್ಲಾ ಹಂತದ ವ್ಯಾಪಾರ ವಹಿವಾಟಿನಲ್ಲಿ ನವೋಲ್ಲಾಸ ಮೂಡಿಸಿದೆ. ಜಂಬೂಸವಾರಿ, ಪಂಜಿನ ಕವಾಯತು ಮೂಲಕ ದಸರೆಗೆ ತೆರೆಬಿದ್ದಿದ್ದರೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುವುದರಿಂದ ಮೈಸೂರು ಪ್ರವಾಸೋದ್ಯಮಕ್ಕೆ ಬೂಸ್ಟರ್ ನೀಡಿದಂತಾಗಿದೆ.

ಸದ್ಯ ಶಾಲಾ–ಕಾಲೇಜು ದಸರಾ ರಜೆ ಮುಗಿಯುವ ಹಂತದಲ್ಲಿರುವ ಕಾರಣ ಶನಿವಾರ ಮೈಸೂರಿನಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳು, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಂದ ಅಪಾರ ಸಂಖ್ಯೆಯ ಪ್ರವಾಸಿಗರು ಮೈಸೂರಿನ ಪ್ರೇಕ್ಷಣೀಯ ಸ್ಥಳಗಳನ್ನು ಕಣ್ತುಂಬಿಕೊಂಡರು. ದಸರಾ ದೀಪಾಲಂಕಾರ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಅನೇಕ ಮಂದಿ ಮೈಸೂರಲ್ಲಿ ತಂಗಿರುವುದರಿಂದ ಹೋಟೆಲ್‌ಗಳೂ ಬಹುತೇಕ ಭರ್ತಿಯಾಗಿವೆ.

ಅರಮನೆಗೆ ಲಗ್ಗೆ: ಅಂಬಾವಿಲಾಸ ಅರಮನೆಗೆ ಶನಿವಾರ ವಿದೇಶಿಯರು, ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 25658 ವೀಕ್ಷಕರು ಭೇಟಿ ನೀಡಿದ್ದರು. ವಾಹನ ಪಾರ್ಕಿಂಗ್ ಸ್ಥಳ ಸಂಪೂರ್ಣ ಭರ್ತಿಯಾಗಿ ಬನುಮಯ್ಯ ರಸ್ತೆ, ಪಾಠಶಾಲೆ ವೃತ್ತದ ಬಳಿ ಹೀಗೆ ಕಂಡ ಕಂಡಲ್ಲಿ ಪ್ರವಾಸಿ ವಾಹನಗಳನ್ನು ನಿಲ್ಲಿಸಿಕೊಂಡಿದ್ದು ಕಂಡುಬಂದಿತು. ನವರಾತ್ರಿ ಸಂದರ್ಭದಲ್ಲಿ 1 ಲಕ್ಷ ಮಂದಿ ಅರಮನೆ ಸೊಬಗನ್ನು ಆಸ್ವಾದಿಸಿರುವುದು ಗಮನಾರ್ಹ.


ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆ ಅರಮನೆ ಬಳಿ ವಾಹನ ದಟ್ಟಣೆ ಉಂಟಾಗಿ, ಸಂಚಾರ ಅಸ್ತವ್ಯಸ್ತವಾಗಿತ್ತು.

ಮೃಗಾಲಯದಲ್ಲೂ ರಶ್: ಪ್ರವಾಸಕ್ಕೆ ಬಂದವರು ಮೈಸೂರು ಮೃಗಾಲಯ ವೀಕ್ಷಿಸದೆ ವಾಪಸ್ಸಾಗುವುದು ಅತ್ಯಂತ ವಿರಳ. ಹಾಗೆಯೇ ಶನಿವಾರವೂ ಅಧಿಕ ಸಂಖ್ಯೆಯ ಪ್ರವಾಸಿಗರು ಮೃಗಾಲಯಕ್ಕೆ ಭೇಟಿ ನೀಡಿ, ಪ್ರಾಣಿ–ಪಕ್ಷಿ, ಪ್ರಕೃತಿಯ ಸೊಬಗನ್ನು ಕಣ್ತುಂಬಿಕೊಂಡರು. ಇಂದು 25 ಸಾವಿರಕ್ಕೂ ಹೆಚ್ಚು ಮಂದಿ ವೀಕ್ಷಕರು ಭೇಟಿ ನೀಡಿದ್ದಾರೆ ಎನ್ನಲಾಗಿದ್ದು, ಈ ನಿಖರ ಅಂಕಿ ಅಂಶ ತಿಳಿಯಬೇಕಿದೆ. ಆಯುಧಪೂಜೆ ದಿನ 23,350 ಹಾಗೂ ವಿಜಯದಶಮಿಯಂದು 36,420 ಸೇರಿ ದಸರಾದ 10 ದಿನಗಳಲ್ಲಿ 1.55 ಲಕ್ಷ ಮಂದಿ ಮೃಗಾಲಯ ವೀಕ್ಷಿಸಿದ್ದಾರೆ. ಪಕ್ಕದ ಕಾರಂಜಿ ಕೆರೆಗೂ ನಿತ್ಯ ಸಾವಿರಾರು ಮಂದಿ ಭೇಟಿ ನೀಡಿದ್ದಾರೆ. ದಸರಾ ವಸ್ತು ಪ್ರದರ್ಶನದಲ್ಲೂ ಜನದಟ್ಟಣೆ ಹೆಚ್ಚಾಗಿತ್ತು.

ಭಕ್ತರು ದೌಡು: ಮೈಸೂರಿನ ದೈವಿಕ್ಷೇತ್ರ ಚಾಮುಂಡಿಬೆಟ್ಟದ ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಇಂದು ಹೆಚ್ಚಿನ ಭಕ್ತರು ಆಗಮಿಸಿದ್ದರು. ಸರತಿಯಲ್ಲಿ ಸಾಗಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ಕೃಪಾರ್ಥರಾದರು. ವ್ಯೂ ಪಾಯಿಂಟ್‌ನಿಂದ ಮೈಸೂರು ನಗರದ ಸೌಂದರ್ಯ ಸವಿಯಲು, ಬೆಟ್ಟದ ಪ್ರಕೃತಿ ಸೊಬಗಲ್ಲಿ ಆನಂದಿಸುವ ಸಲುವಾಗಿಯೂ ನೂರಾರು ಮಂದಿ ಭೇಟಿ ನೀಡಿದ್ದರು. ನವರಾತ್ರಿ ದಿನಗಳಲ್ಲೂ ಚಾಮುಂಡಿ ಬೆಟ್ಟಕ್ಕೆ ಭಕ್ತ ಸಮೂಹವೇ ಹರಿದುಬಂದಿತ್ತು.

ವ್ಯಾಪಾರಿಗಳಿಗೆ ಸಂತಸ: ದಸರಾ ಮಹೋತ್ಸವ ಹೋಟೆಲ್ ಉದ್ಯಮ ಸೇರಿದಂತೆ ಬೀದಿ ಬದಿ ವ್ಯಾಪಾರಿಗಳಿಂದ ಹಿಡಿದು ಎಲ್ಲಾ ಹಂತದ ವರ್ತಕರಿಗೂ ಹೊಸ ಚೈತನ್ಯ ನೀಡಿದೆ. 'ವಸತಿ ಸೌಕರ್ಯವುಳ್ಳ ಮೈಸೂರಿನ ಎಲ್ಲಾ ಹೋಟೆಲ್‌ಗಳೂ ಶನಿವಾರ ಹಾಗೂ ಭಾನುವಾರ ಬಹುತೇಕ ಭರ್ತಿಯಾಗಿವೆ. ದಸರಾ ದೀಪಾಲಂಕಾರ ಅವಧಿಯನ್ನು ವಿಸ್ತರಣೆ ಮಾಡಿರುವುದೂ ಇದಕ್ಕೆ ಕಾರಣ' ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

ವಾಹನ ದಟ್ಟಣೆ: ಮಧ್ಯಾಹ್ನದ ನಂತರ ಅರಮನೆ ಸುತ್ತ ಶನಿವಾರ ವಾಹನ ದಟ್ಟಣೆ ನಿರ್ಮಾಣವಾಗಿತ್ತು. ಅದರಲ್ಲೂ ನ್ಯೂ ಸಯ್ಯಾಜಿರಾವ್ ರಸ್ತೆ ಮೈಸೂರು ನಗರ ಪಾಲಿಕೆ ಬಳಿ ವೃತ್ತದಲ್ಲಿ ನಾಲ್ಕು ಕಡೆಯಿಂದ ಬಂದ ವಾಹನಗಳು ತಿರುವು ಪಡೆಯಲಾಗದೆ ಕೆಲಹೊತ್ತು ನಿಂತಲ್ಲೇ ನಿಂತಿದ್ದವು. ಇಲ್ಲಿ ಪೊಲೀಸ್ ಸಿಬ್ಬಂದಿ ಇಲ್ಲದ ಕಾರಣ ಸಂಚಾರ ಅಸ್ತವ್ಯಸ್ತವಾಗಿತ್ತು. ಚಾಮರಾಜ ಜೋಡಿ ರಸ್ತೆಯ ಪಾಠಶಾಲೆ ಸಿಗ್ನಲ್, ನೀಲಗಿರಿ ರಸ್ತೆ ಕುಸ್ತಿ ಅಖಾಡ, ಇಟ್ಟಿಗೆ ಗೂಡು ರಸ್ತೆ ಜಂಕ್ಷನ್, ಹಾರ್ಡಿಂಜ್ ವೃತ್ತ, ಚಾಮರಾಜ ವೃತ್ತದಲ್ಲೂ ವಾಹನ ದಟ್ಟಣೆ ಉಂಟಾಗಿತ್ತು.


ಮೈಸೂರು ತಾಲೂಕು ಒಕ್ಕಲಿಗ ಸಂಘದ ಕಟ್ಟಡ ಕಾಮಗಾರಿ ವೀಕ್ಷಿಸಲು ಮೈಸೂರಿಗೆ ಆಗಮಿಸಿದ್ದ ಆದಿಚುಂಚನಗಿರಿ ಮಠಾಧೀಶರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಶ್ರೀ ಸೋಮನಾಥ ಸ್ವಾಮೀಜಿ ಅವರನ್ನು ಸಂಘದ ಅಧ್ಯಕ್ಷ ಕೂರ್ಗಳ್ಳಿ ಮಹದೇವು ಸ್ವಾಗತಿಸಿ, ಅಭಿನಂದಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷರಾದ ಬೆಳವಾಡಿ ಶ್ರೀನಿವಾಸ್, ನಿರ್ದೇಶಕರಾದ ಕೃಷ್ಣೇಗೌಡ, ಜೈರಾಮ್, ನಾಗರಾಜ್, ಮೈಸೂರು ಡೈರಿ ನಿರ್ದೇಶಕರಾದ ಉಮಾಶಂಕರ್, ಸತೀಶ್, ವಕೀಲ ಜೀವನ್ ಮಹದೇವ್ ಉಪಸ್ಥಿತರಿದ್ದರು.

ಸಾರ್ವಜನಿಕರ ಸುಲಿಗೆ ಮಾಡುವ ಓಲಾ, ಊಬರ್ ವಾಹನ ಸೀಜ್

- ಸಾರಿಗೆ ಸಚಿವ ಶ್ರೀರಾಮುಲು ಸೂಚನೆ
- ಷರತ್ತು ಉಲ್ಲಂಘನೆ ಸಹಿಸಲಾಗದು



ಬೆಂಗಳೂರು,ಅ.8(ಕೆಎಂಶಿ)–ಲೈಸೆನ್ಸ್ ನೀಡುವಾಗ ಸಾರಿಗೆ ಇಲಾಖೆ ವಿಧಿಸಿರುವ ಷರತ್ತು ಉಲ್ಲಂಘಿಸಿ ಪ್ರಯಾಣಿಕರಿಂದ ದುಬಾರಿ ದರ ಪಡೆಯುವ ಓಲಾ, ಊಬರ್ ವಾಹನಗಳನ್ನು ಸೀಜ್ ಮಾಡಲು ಆದೇಶ ನೀಡಲಾಗಿದೆ ಎಂದು ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರಿಗೆ ಇಲಾಖೆ ನಿಯಮ ಉಲ್ಲಂಘಿಸಿರುವ ವಾಹಗಳನ್ನು ಸೀಜ್ ಮಾಡಿ, ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ ದುಬಾರಿ ದರ ಪಡೆಯುತ್ತಿರುವ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ನೋಟಿಸ್‌ಗೆ ಆ ಸಂಸ್ಥೆಗಳಿಂದ ಉತ್ತರ ಪಡೆದು ಒಂದೆರಡು ದಿನದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸೇವೆ ಒದಗಿಸಲು ಓಲಾ ಮತ್ತು ಊಬರ್ ಸಂಸ್ಥೆಗಳಿಗೆ ಲೈಸೆನ್ಸ್ ನೀಡಲಾಗಿತ್ತು. ಲೈಸೆನ್ಸ್ ನೀಡುವಾಗ ಇಲಾಖೆ ನಿಯಮಗಳು ಉಲ್ಲಂಘನೆಯಾಗಬಾರದು ಎಂಬ ಷರತ್ತು ವಿಧಿಸಲಾಗಿತ್ತು. ಆದರೂ ಸಂಸ್ಥೆಗಳು ನಿಯಮ ಉಲ್ಲಂಘಿಸುವ ಬಗ್ಗೆ ದೂರುಗಳು ಬರುತ್ತಿವೆ. ನೋಟಿಸ್‌ಗೆ ಆ ಸಂಸ್ಥೆಗಳು ನೀಡುವ ಉತ್ತರ ಪರಿಶೀಲಿಸಿದ ನಂತರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದರು.

ಮೀಸಲಾತಿ ಹೆಚ್ಚಳದಿಂದ ಸಮಸ್ಯೆ ಇಲ್ಲ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳಕ್ಕೆ ಯಾವುದೇ ರೀತಿಯ ತೊಡಕಾಗುವುದಿಲ್ಲ. ಹಾಗೆಯೇ ಯಾವುದೇ ಸಮುದಾಯಕ್ಕೆ ಈಗಿರುವ ಮೀಸಲಾತಿ ಪ್ರಮಾಣದಲ್ಲಿ ಶೇ.1ರಷ್ಟು ಕಡಿಮೆ ಮಾಡುವುದಿಲ್ಲ ಎಂದು ಸಚಿವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ರಾಜ್ಯ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಾಗ ಒಪ್ಪಿಗೆ ದೊರೆಯುವ ವಿಶ್ವಾಸವಿದೆ. ಎಸ್ಸಿ–ಎಸ್ಟಿ ವಿಚಾರದಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವ ಹಿಂದಿನ ಸಾಕಷ್ಟು ನಿದರ್ಶನಗಳಿವೆ. ಹೀಗಾಗಿ ಯಾವುದೇ ರೀತಿಯ ತೊಡಕಾಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ ತಮಿಳುನಾಡಿನಲ್ಲಿ ಶೇ.69, ಮಹಾರಾಷ್ಟ್ರದಲ್ಲಿ ಶೇ.68, ಮಧ್ಯಪ್ರದೇಶದಲ್ಲಿ ಶೇ.73, ರಾಜಸ್ಥಾನದಲ್ಲಿ ಶೇ.64, ಜಾರ್ಖಂಡ್‌ನಲ್ಲಿ ಶೇ.70, ಉತ್ತರಪ್ರದೇಶದಲ್ಲಿ ಶೇ.60ರಷ್ಟು ಮೀಸಲಾತಿ ಪ್ರಮಾಣವಿದ್ದು, ತೆಲಂಗಾಣ ಸರ್ಕಾರವೂ ಶೇ.10ರಷ್ಟು ಮೀಸಲಾತಿ ಪ್ರಮಾಣ ಹೆಚ್ಚಿಸಿದೆ. ಹೀಗಾಗಿ ರಾಜ್ಯದಲ್ಲಿ ಮೀಸಲಾತಿ ಶೇ.50ರ ಗಡಿ ದಾಟುವುದರಿಂದ ಕಾನೂನಿನ ತೊಡಕಾಗಲಿದೆ ಎಂಬ ಆತಂಕ ಬೇಡ ಎಂದು ಸ್ಪಷ್ಟಪಡಿಸಿದರು.

6 ಸಾಧಕರಿಗೆ ವಾಲ್ಮೀಕಿ ಪ್ರಶಸ್ತಿ: ಬೆಂಗಳೂರು ಕೇಂದ್ರ ವಿಭಾಗದ ಎಲ್.ಮುನಿಸ್ವಾಮಿ(ಸಾಮಾಜಿಕ ಕ್ಷೇತ್ರ), ಬೆಂಗಳೂರು ವಿಭಾಗ ಎನ್.ನಾಗಪ್ಪ, ಬೆಳಗಾವಿ ವಿಭಾಗದ ನಾಗಪ್ಪ ಎಚ್.ಕೋನಿ(ಇತರೆ ಕ್ಷೇತ್ರ), ಕಲ್ಬುರ್ಗಿ ವಿಭಾಗದ ಪದ್ಮಾ(ಕಲೆ), ಮೈಸೂರು ವಿಭಾಗ ಸುಭಾಷ್ (ಸಾಮಾಜಿಕ) ಹಾಗೂ ಕಲಬುರಗಿ ವಿಭಾಗದ ಉಷಾರಾಣಿ (ಕಲಾ ಮತ್ತು ಸಾಮಾಜಿಕ ಕ್ಷೇತ್ರ) ಈ ಆರು ಗಣ್ಯರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಪುರಸ್ಕೃತರಿಗೆ ಪ್ರಶಸ್ತಿ ಫಲಕ, 20 ಗ್ರಾಂ ಚಿನ್ನದ ಪದಕ ಹಾಗೂ 5 ಲಕ್ಷ ನಗದು ನೀಡಿ ಗೌರವಿಸಲಾಗುವುದು ಎಂದರು. ವಿಶ್ರಾಂತ ಪ್ರಾಧ್ಯಾಪಕ ಡಾ.ಕಟ್ಟಿಬಾಳ ಪನ್ನಂಗಧರ ಅವರ ನೇತೃತ್ವದ ಸಮಿತಿ 2022ನೇ ಸಾಲಿನ ವಾಲ್ಮೀಕಿ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಿದೆ ಎಂದರು.

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹಾರಂಗಿಯಲ್ಲಿ ನೂತನ ಸಾಕಾನೆ ಶಿಬಿರ, ಟ್ರೀಪಾರ್ಕ್ ಲೋಕಾರ್ಪಣೆ

● ದುಬಾರೆಯಿಂದ ಆರು ಸಾಕಾನೆಗಳ ಸ್ಥಳಾಂತರ ● ಪ್ರವಾಸಿಗರು, ಸ್ಥಳೀಯರಿಗೆ ಹರ್ಷ ● 10 ಕೋಟಿ ರೂ.ವೆಚ್ಚದಲ್ಲಿ ಹಾರಂಗಿ ರಸ್ತೆ ಅಭಿವೃದ್ಧಿ



ಕುಶಾಲನಗರ, ಅ.8– ಕುಶಾಲನಗರ ತಾಲೂಕಿನ ಹಾರಂಗಿ ಜಲಾಶಯದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಟ್ರೀಪಾರ್ಕ್ ಹಾಗೂ ಸಾಕಾನೆ ಶಿಬಿರವನ್ನು ಶನಿವಾರ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಲೋಕಾರ್ಪಣೆಗೊಳಿಸಿದರು.

ಕರ್ನಾಟಕ ಡೆಂಟಿಸ್ಟ್ ಕ್ಲಬ್: ಅರಣ್ಯ ಇಲಾಖೆ ಮಡಿಕೇರಿ ವಿಭಾಗ ವತಿಯಿಂದ ಶನಿವಾರ ಏರ್ಪಡಿಸಿದ್ದ ವನ್ಯಜೀವಿ ಸಪ್ತಾಹ ಸಮಾರೋಪ ಹಾಗೂ ಟ್ರೀಪಾರ್ಕ್, ಆನೆ ಶಿಬಿರ ಉದ್ಘಾಟಿಸಿದ ನಂತರ ಸಮಾರಂಭದಲ್ಲಿ ಮಾತನಾಡಿದ ಅವರು ಹಾರಂಗಿ ಜಲಾಶಯಕ್ಕೆ ಸಂಪರ್ಕ ಕಲ್ಪಿಸುವ ಕುಶಾಲನಗರ, ಗುಮ್ಮನಕೊಲ್ಲಿ ರಸ್ತೆಯನ್ನು 10 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತದೆ ಶಿಬಿರದಲ್ಲಿ ಆನೆ ಸಫಾರಿ ಆರಂಭಿಸುವ ಸಂಬಂಧ ಸಂಸದರು ಹಾಗೂ ಕೇಂದ್ರ ಮಂತ್ರಿಗಳಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು.

ಟ್ರೀಪಾರ್ಕ್ ಹಾಗೂ ಶಿಬಿರವನ್ನು ಅಭಿವೃದ್ಧಿ ಪಡಿಸಲು ಹೆಚ್ಚಿನ ಒತ್ತು ನೀಡಲಾಗುವುದು. ಜೊತೆಗೆ ಪರಿಸರಕ್ಕೆ ಪೂರಕವಾದ ಚಟುವಟಿಕೆ ಕೈಗೊಳ್ಳಬೇಕು, ಮರಗಿಡ ಬೆಳೆಸಬೇಕು, ಪರಿಸರ ಉಳಿಸಬೇಕು ಎಂದರು. ದುಬಾರೆ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ತೂಗು ಸೇತುವೆ ಮಂಜೂರಾಗಿದ್ದು, ನೀರಾವರಿ ಇಲಾಖೆ ವತಿಯಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಮಾತನಾಡಿ, ಹಾರಂಗಿ ಹಿನ್ನೀರಿನಲ್ಲಿ ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ಸ್ ವತಿಯಿಂದ ಹತ್ತು ವರ್ಷದ ಅವಧಿಗೆ ಬೋಟಿಂಗ್ ಹಾಗೂ ವಾಟರ್ ಗೇಮ್ ಗೆ ಅನುಮತಿ ದೊರೆತಿದೆ. ಶಿಬಿರದಲ್ಲಿ ಪರಿಸರಸ್ನೇಹಿ ಚಟುವಟಿಕೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಗಮನ ಹರಿಸಲಾಗುತ್ತದೆ ಎಂದರು.

ಮಡಿಕೇರಿ ವಿಭಾಗ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್.ಎನ್. ಮೂರ್ತಿ ಮಾತನಾಡಿ, ವನ್ಯಜೀವಿ ಸಪ್ತಾಹ ಕೊನೆ ದಿನ ಟ್ರೀಪಾರ್ಕ್ ಹಾಗೂ ಸಾಕಾನೆ ಶಿಬಿರ ಉದ್ಘಾಟಿಸಿರುವುದು ತುಂಬ ಅರ್ಥಪೂರ್ಣವಾಗಿದೆ ಎಂದರು. ಕಳೆದ ಎರಡು ವರ್ಷಗಳಿಂದ ಮೂರು ಸಾವಿರಕ್ಕೂ ಗಿಡ ನೀಡಲಾಗಿತ್ತು. ಕಾಡಾನೆಗಳಿಂದ ಅನೇಕ ಗಿಡಗಳು ಹಾನಿಯಾಗಿದ್ದು, ಮತ್ತೆ 2 ಸಾವಿರ ನೀಡಲಾಗುತ್ತಿದೆ. ಶಿಬಿರದ ಪರಿಸರ ಬದಲಾವಣೆ ಮಾಡುವುದರ ಜೊತೆಗೆ ಹಸಿರನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಪ್ರವಾಸಿಗರಿಗೆ ಶಿಬಿರ ವೀಕ್ಷಣೆ ಅವಕಾಶ ಕಲ್ಪಿಸಲಾಗಿದ್ದು, ಪ್ಲಾಸ್ಟಿಕ್ ಹಾಗೂ ವಾಟರ್ ಬಾಟಲ್ ನಿಷೇಧಿಸಲಾಗಿದೆ. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಮತ್ತಿಗೋಡು ಶಿಬಿರದ ಒತ್ತಡ ತಪ್ಪಿಸಲು ಭೀಮನಕಟ್ಟೆಯಲ್ಲಿ ನಾಲ್ಕನೇ ಸಾಕಾನೆ ಶಿಬಿರ ತೆರೆಯಲಾಗುತ್ತದೆ ಎಂದರು.

ಡಿಎಫ್ಓ ಪೂವಯ್ಯ ಮಾತನಾಡಿ, 2015 ರಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಟ್ರೀಪಾರ್ಕ್ ಅಭಿವೃದ್ಧಿ ಪಡಿಸಬೇಕು ಎಂಬ ಯೋಜನೆಯಡಿ 40 ಎಕರೆ ಪ್ರದೇಶದಲ್ಲಿ ಟ್ರೀಪಾರ್ಕ್ ಹಾಗೂ ಸಾಕಾನೆ ಶಿಬಿರ ಅಭಿವೃದ್ಧಿ ಪಡಿಸಲಾಗಿದೆ ಎಂದರು. ಈ ಜಾಗವನ್ನು ಅರಣ್ಯ ಇಲಾಖೆ ಹೆಸರಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಈ ಸಂದರ್ಭ ಕೂಡುಮಂಗಳೂರು ಗ್ರಾಪಂ ಅಧ್ಯಕ್ಷೆ ಇಂದಿರಾ ರಮೇಶ್, ಕುಶಾಲನಗರ ಪಪಂ ಅಧ್ಯಕ್ಷ ಬಿ.ಜೈವರ್ಧನ್, ಬಸವನಹಳ್ಳಿ ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಆರ್.ಕೆ.ಚಂದ್ರು, ಕೂಡುಮಂಗಳೂರು ಗ್ರಾಪಂ ಉಪಾಧ್ಯಕ್ಷ ಭಾಸ್ಕರ್ ನಾಯಕ್, ಸೋಮವಾರಪೇಟೆ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್, ಹಾರಂಗಿ ಶಿಬಿರದ ಡಿಆರ್ಎಫ್ಓ ಅನಿಲ್ ಡಿಸೋಜ, ಡಿವೈಎಸ್ಪಿ ಗಂಗಾಧರ, ಸಿಪಿಐ ಮಹೇಶ್, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

ಪ್ರವಾಸಿಗರ ಸಂಭ್ರಮ : ನೂತನ ಸಾಕಾನೆ ಶಿಬಿರ ಉದ್ಘಾಟನೆ ವಿಷಯ ತಿಳಿದು ಸ್ಥಳೀಯರು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಸಾಕಾನೆಗಳ ಚಟುವಟಿಕೆ ಹಾಗೂ ಸುಂದರವಾದ ಹಾರಂಗಿ ಹಿನ್ನೀರಿನ ಪ್ರಕೃತಿ ಸೌಂದರ್ಯ ವೀಕ್ಷಣೆ ಮಾಡಿ ಸಂಭ್ರಮಿಸಿದರು. ಸಾಕಾನೆಗಳ ಹತ್ತಿರ ನಿಂತ ತಮ್ಮ ಮೊಬೈಲ್‌ನಿಂದ ಸೆಲ್ಫಿ ಫೋಟೋ ತೆಗೆಸಿಕೊಂಡು ಸಂತಸಪಟ್ಟರು

ಆರು ಆನೆಗಳ ಸ್ಥಳಾಂತರ

ದುಬಾರೆ ಸಾಕಾನೆಗಳಾದ ರಾಮ (68 ವರ್ಷ) ಮಾವುತ ಎಂ.ಎನ್. ಮಂಜುನಾಥ್ ಕಾವಾಡಿಗ ಪೊನ್ನಪ್ಪ, ಏಕದಂತ (52) ಮಾವುತ ನಾಗರಾಜ್ ಕಾವಡಿಗ ಜೀವನ್, ಮಾರುತಿ(21) ಮಾವುತ ಭರತ್ ನಾಯಕ್, ಕಾವಾಡಿಗ ಸುನೀಲ್, ಸುಬ್ರಮಣಿ(35) ಮಾವುತ ಮೇಘರಾಜ್ ಕಾವಾಡಿಗ ಕರಿಯಣ್ಣ , ವಿಕ್ರಮ (58) ಮಾವುತ ಜೆ.ಕೆ.ಪುಟ್ಟ, ಕಾವಾಡಿಗ ಹೇಮಂತಕುಮಾರ, ವಿಜಯ (48) ಮಾವುತ ಭೋಜಪ್ಪ, ಕಾವಾಡಿಗ ಭರತ್ ಅವರನ್ನು ಹಾರಂಗಿ ಶಿಬಿರಕ್ಕೆ ಪ್ರಥಮ ಹಂತದಲ್ಲಿ ಸ್ಥಳಾಂತರ ಮಾಡಲಾಗಿದೆ.

ಬಾಳಾಜಿ ಗ್ರಾಮದಲ್ಲಿ ಮೊಸಳೆ ಪ್ರತ್ಯಕ್ಷ



ಗೋಣಿಕೊಪ್ಪಅ.8–ಬಾಳಾಜಿ ಗ್ರಾಮದಲ್ಲಿ ಶನಿವಾರ ಮೊಸಳೆ ಪ್ರತ್ಯಕ್ಷವಾಗಿದ್ದು, ತಿತಿಮತಿ ವಲಯ ಅರಣ್ಯ ಇಲಾಖೆ ಅಧಿ ಕಾರಿಗಳು ತೆರಳಿ ಕ್ರಮಕ್ಕೆ ಮುಂದಾಗಿದ್ದಾರೆ. ಗ್ರಾಮದ ಆಂಡಮಾಡ ಹರೀಶ್ ಎಂಬುವವರ ತೋಟದ ಸಮೀಪ ಮಧ್ಯಾಹ್ನ ಸುಮಾರಿಗೆ ಮೊಸಳೆ ಕಾಣಿಸಿಕೊಂಡಿದೆ. ಇದರಿಂದ ಸ್ಥಳೀಯರು ಭಯಗೊಂಡಿದ್ದಾರೆ. ಲಕ್ಷ್ಮಣತೀರ್ಥ ನದಿಗೆ ಸೇರುವ ಕೀರೆ ಹೊಳೆ ಮೂಲಕ ಬಂದಿರಬಹುದು ಎಂದು ಅನುಮಾನ ವ್ಯಕ್ತವಾಗಿದೆ.

ಅಪರಿಚಿತ ಶವ ಪತ್ತೆ

ಗೋಣಿಕೊಪ್ಪ, ಅ.8– ಗೋಣಿಕೊಪ್ಪ ಮಾರುಕಟ್ಟೆ ಸಮೀಪ ಅಪರಿಚಿತ ಪುರುಷನ ಶವ ಶುಕ್ರವಾರ ರಾತ್ರಿ ಪತ್ತೆಯಾಗಿದೆ.

40–45 ವಯಸ್ಸು, ಕುರುಚಲು ಗಡ್ಡ ಇದೆ. ಮೃತದೇಹವನ್ನು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ಶವಗಾರದಲ್ಲಿ ಇಡಲಾಗಿದೆ. ವಾರಸುದಾರರು ಗೋಣಿಕೊಪ್ಪ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08274247333 ನ್ನು ಸಂಪರ್ಕಿಸ ಬಹುದಾಗಿದೆ ಎಂದು ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಬಿಳಿಗೇರಿ ಆರೋಗ್ಯ ಕೇಂದ್ರಕ್ಕೆ ವೈದ್ಯರ ನೇಮಕ ಮಾಡದಿದ್ದರೆ ಅಹೋರಾತ್ರಿ ಧರಣಿ

ಮಡಿಕೇರಿ, ಅ.8– ಸೋಮವಾರಪೇಟೆ ತಾಲೂಕಿನ ಕಿರಗಂದೂರು ಗ್ರಾಪಂ ವ್ಯಾಪ್ತಿಯ ಬಿಳಿಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಕ್ಷಣ ವೈದ್ಯರನ್ನು ನೇಮಕ ಮಾಡಬೇಕು. ತಪ್ಪಿದಲ್ಲಿ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಬೇಕಾಗುತ್ತದೆ ಎಂದು ಎಐಟಿಯುಸಿ ಜಿಲ್ಲಾಧ್ಯಕ್ಷ ಹೆಚ್.ಎಂ. ಸೋಮಪ್ಪ ಎಚ್ಚರಿಕೆ ನೀಡಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಳಿಗೇರಿ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ ಇದ್ದು, ಹಲವು ಬಾರಿ ಎಐಟಿಯುಸಿ ಸಂಘಟನೆ ಹಾಗೂ ಗ್ರಾಮಸ್ಥರು ವೈದ್ಯರನ್ನು ನೇಮಿಸುವಂತೆ ಒತ್ತಾಯಿಸಿ ಆರೋಗ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಆದರೆ ಕೇವಲ ಭರವಸೆಗಳನ್ನು ನೀಡುತ್ತಾ ಬಂದಿರುವ ಅಧಿಕಾರಿಗಳು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರೇ ಇರುವ ಬಿಳಿಗೇರಿ, ತಾಕೇರಿ ಹಾಗೂ ಕಿರಗಂದೂರು ಗ್ರಾಮಸ್ಥರಿಗೆ ಈ ಆರೋಗ್ಯ ಕೇಂದ್ರ ಸಹಕಾರಿಯಾಗಿದೆ. ಅನಾರೋಗ್ಯ ಎದುರಾದಾಗ ಸುಮಾರು 15 ಕಿ.ಮೀ ದೂರದ ಮಾದಾಪುರ, ಸೋಮವಾರಪೇಟೆಗೆ ತೆರಳಿ ಚಿಕಿತ್ಸೆ ಪಡೆಯಬೇಕಾದ ಅನಿವಾರ್ಯತೆ ಇದ್ದು, ಬಡ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಕ್ಷಣ ವೈದ್ಯರನ್ನು ನೇಮಿಸಬೇಕು, ತಪ್ಪಿದಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಹೋರಾಟ ರೂಪಿಸುವುದಾಗಿ ಸೋಮಪ್ಪ ತಿಳಿಸಿದ್ದಾರೆ.

ಆನೆಕಾಡು ಬಳಿ ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ



ಕುಶಾಲನಗರ, ಅ.8– ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿ ಅವರಿಂದ 65 ಸಾವಿರ ರೂ. ಮೌಲ್ಯದ 2.125 ಕೆಜಿ ಒಣಗಿದ ಗಾಂಜಾ ವಶ ಪಡಿಸಿಕೊಂಡಿದ್ದಾರೆ.

ಮೈಸೂರಿನ ರಿಂಗ್ ರಸ್ತೆಯ ಮುನಾವರ್ ಖಾನ್ ಪುತ್ರ ಆಟೋ ಚಾಲಕ ಮುಜಾಹಿದ್ ಪಾಷಾ ಹಾಗೂ ಸುಂಟಿಕೊಪ್ಪದ ಅಬ್ದುಲ್ ಸತ್ತಾರ್ ಪುತ್ರ ಲೋಡರ್ ಮಹಮ್ಮದ್ ರಫೀಕ್ ಬಂಧಿತ ಆರೋಪಿಗಳಾಗಿದ್ದಾರೆ.

ಆನೆಕಾಡು ಬಳಿಕ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ ಕೃತ್ಯಕ್ಕೆ ಬಳಸಿದ್ದ ಕಾರು, ಎರಡು ಮೊಬೈಲ್ ಫೋನ್, ಒಂದು ಆಟೋರಿಕ್ಷಾ ವಶಕ್ಕೆ ಪಡೆದಿದ್ದಾರೆ. ಪೊಲೀಸ್ ಅಧೀಕ್ಷಕ ಎಂ.ಎ. ಅಯ್ಯಪ್ಪ ಅವರ ನಿರ್ದೇಶನದಂತೆ, ಉಪ ಅಧೀಕ್ಷಕ ಆರ್.ವಿ.ಗಂಗಾಧರಪ್ಪ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಬಿ.ಜಿ. ಮಹೇಶ್, ಗ್ರಾಮಾಂತರ ಠಾಣಾಧಿಕಾರಿ ಎಚ್.ವಿ.ಚಂದ್ರಶೇಖರ್, ಭಾರತಿ, ಪ್ರೊ, ಪಿಎಸ್ಐ ಕಾಶಿನಾಥ್, ಎಎಸ್ಐ ಕುಮಾರಿ, ಬಿ.ಎಸ್.ವಿಠಲ, ಸಿಬ್ಬಂದಿಗಳಾದ ಲೋಕೇಶ್, ಶಿವಕುಮಾರ, ಮಂಜುನಾಥ್, ಅಜಿತ್, ಪ್ರಕಾಶ್, ಸಂದೇಶ್, ರಮೇಶ್, ದಿವೇಶ್, ಕಾಂತಿ, ಹರ್ಷಾವತಿ, ಸುಂಟಿಕೊಪ್ಪ ಠಾಣೆಯ ಉದಯ, ಪ್ರವೀಣ್, ಸಿಡಿಆರ್ ಘಟಕದ ರಾಜೇಶ್, ಗಿರೀಶ್, ಪ್ರವೀಣ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ತಂಡಕ್ಕೆ ಪೊಲೀಸ್ ಅಧೀಕ್ಷಕರು ಬಹುಮಾನ ಘೋಷಿಸಿದ್ದಾರೆ.

ನಾಳೆ ತ್ರೈಮಾಸಿಕ ಕೆಡಿಪಿ ಸಭೆ

ಮಡಿಕೇರಿ, ಅ.8– ಪ್ರಸಕ್ತ(2022–23) ಸಾಲಿನ ಸೆಪ್ಟೆಂಬರ್–2022 ರ ಅಂತ್ಯದ ವರೆಗಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ(20 ಅಂಶಗಳ ಕಾರ್ಯಕ್ರಮ ಸೇರಿದಂತೆ) ಜಿಲ್ಲಾ ಮಟ್ಟದ ತ್ರೈಮಾಸಿಕ ಸಭೆಯು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಅಧ್ಯಕ್ಷತೆಯಲ್ಲಿ ಅ.10 ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಸಿಇಓ ಭಂವರ್ ಸಿಂಗ್ ಮೀನಾ ತಿಳಿಸಿದ್ದಾರೆ.

ಅ.27ರಿಂದ ಕೊಡವ ಕುಟುಂಬಗಳ ಹಾಕಿ ಸ್ಪರ್ಧೆ

ಸ್ಪರ್ಧೆಯ ಯಶಸ್ವಿಗೆ ಸಹಕಾರ : ಎ.ಎಸ್.ಪೊನ್ನಣ್ಣ



ವಿರಾಜಪೇಟೆ, ಅ.8– ಕೊಡವ ಹಾಕಿ ಅಕಾಡೆಮಿ ವತಿಯಿಂದ ಅ.27 ರಿಂದ ನ.6ರವರೆಗೆ ಪೊನ್ನಂಪೇಟೆಯ ಹಾಕಿ ಟರ್ಫ್ ಮೈದಾನದಲ್ಲಿ 5–ಎ ತಂಡ ಏರ್ಪಡಿಸಿರುವ ಕೊಡವ ಕುಟುಂಬಗಳ ಹಾಕಿ ಸ್ಪರ್ಧಾ ಕೂಟದ ಯಶಸ್ವಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ರಾಜ್ಯ ಹೈಕೋರ್ಟ್ ಹಿರಿಯ ವಕೀಲ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ತಿಳಿಸಿದರು.

ವಿರಾಜಪೇಟೆ ಚಿಕ್ಕಪೇಟೆಯಲ್ಲಿರುವ ಪಂಡಾಂಡ ದಿ– ಕುಟ್ಟಪ್ಪ ಅವರು ಈ ಹಿಂದೆ ಸ್ಥಾಪಕ ಅಧ್ಯಕ್ಷರಾಗಿದ್ದ ಕೊಡವ ಹಾಕಿ ಅಕಾಡೆಮಿ ಕಛೇರಿಗೆ ಭೇಟಿ ನೀಡಿ ಜಿಲ್ಲೆಯಲ್ಲಿರುವ ಕ್ರೀಡಾ ಸೌಲಭ್ಯಗಳ ಅವಶ್ಯಕತೆ ಬಗ್ಗೆ ಮಾಹಿತಿ ಪಡೆದ ಎ.ಎಸ್.ಪೊನ್ನಣ್ಣ ಅವರು ಯುವ ಜನಾಂಗಕ್ಕೆ ಹೆಚ್ಚಿನ ಕ್ರೀಡಾ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹಾಲಿ ಅಧ್ಯಕ್ಷ ಪಂಡಂಡ ಕೆ.ಬೋಪಣ್ಣ, ಕಾರ್ಯದರ್ಶಿ ಮಳೇಟಿರ ಶ್ರೀನಿವಾಸ್, ಕಾರ್ಯಾಧ್ಯಕ್ಷ ಮೆಕೇರಿರ ರವಿ ಪೆಮ್ಮಯ್ಯ, ಹಾಗೂ ಆಡಳಿತ ಮಂಡಳಿಯ ಸದಸ್ಯರು ಅಕಾಡೆಮಿಯ ಕಾರ್ಯ ಚಟುವಟಿಕೆಗಳ ಬಗ್ಗೆ ವಿಚಾರ ವಿನಿಮಯ ಮಾಡಿದರು.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ

ಸಮುದಾಯದವರಿಂದ ಸಂಭ್ರಮಾಚರಣೆ





ಚಾಮರಾಜನಗರ, ಅ.8–ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿದ ಹಿನ್ನೆಲೆಯಲ್ಲಿ ಸಮುದಾಯದವರು ನಗರದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರಲ್ಲದೆ, ಸರ್ಕಾರ ಹಾಗೂ ಮೀಸಲಾತಿ ಹೆಚ್ಚಳಕ್ಕಾಗಿ ಹೋರಾಡಿದ ಸಮುದಾಯಗಳ ಎಲ್ಲಾ ಸ್ವಾಮಿಗಳಿಗೂ ಅಭಿನಂದನೆ ಸಲ್ಲಿಸಿದರು.

ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಎಸ್‌ಸಿ, ಎಸ್‌ಟಿ ಸಮುದಾಯದವರು, ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮೀಜಿ ಸೇರಿದಂತೆ ಶೋಷಿತ ಸಮುದಾಯಗಳ ಶ್ರೀಗಳು ಹಾಗೂ ಮುಖ್ಯಮಂತ್ರಿ, ಸರ್ಕಾರಕ್ಕೆ ಜೈಕಾರ ಕೂಗಿ ಸಂಭ್ರಮಿಸಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಬಿಜೆಪಿ ಎಸ್‌ಟಿ ಮೋರ್ಚಾ ಮಾಜಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆಲ್ಲಂಬಳ್ಳಿ ಸೋಮನಾಯಕ, ನಾಯಕರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು. ಶ್ರೀನಿವಾಸನಾಯಕ, ಅರಕಲವಾಡಿ ನಾಗೇಂದ್ರ ಮಾತನಾಡಿ, ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಜ್ಞಾನ ಪ್ರಕಾಶ್ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮೀಜಿ ಸೇರಿದಂತೆ ಶೋಷಿತ ಸಮುದಾಯಗಳ ಶ್ರೀಗಳು ನ್ಯಾ.ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ಯಥಾವತ್ ಜಾರಿಗೊಳಿಸುವಂತೆ 243 ದಿನಗಳಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಹೋರಾತ್ರಿ ಧರಣಿ ನಡೆಸಿದರು. ಅದರ ಫಲವಾಗಿ ಸರ್ಕಾರ 2011 ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಲು ತೀರ್ಮಾನ ಕೈಗೊಂಡಿದೆ. ಇದಕ್ಕಾಗಿ ಸಹಕರಿಸಿದ ಮುಖ್ಯಮಂತ್ರಿಗಳು, ವಿಪಕ್ಷ ನಾಯಕರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಶಿವರಾಜ್, ನಗರಸಭಾ ಮಾಜಿ ಅಧ್ಯಕ್ಷರಾದ ಸುರೇಶ್‌ನಾಯಕ, ಮಹದೇವ ನಾಯಕ, ಯ.ರಾಜುನಾಯಕ, ಸುರೇಶ್ ನಾಗ್, ಕೃಷ್ಣನಾಯಕ, ನಾಗೇಂದ್ರ, ಶಿವುವಿರಾಟ್, ಸಿಂಗನಪುರ ಮಹೇಶ್, ಬುಲೆಟ್ ಚಂದ್ರು, ಕೆ.ಎಂ.ನಾಗರಾಜು, ರವಿಚಂದ್ರ ಪ್ರಸಾದ್, ಎಸ್.ಪಿ.ಮಹೇಶ್, ವೇಣುಗೋಪಾಲ್, ಬ್ಯಾಡಮೂಡ್ಲು ಬಸವಣ್ಣ ಇತರರಿದ್ದರು.

ಯಳಂದೂರು ವರದಿ: ಪರಿಶಿಷ್ಟ ಪಂಗಡಕ್ಕೆ ಸರ್ಕಾರ ಶೇ.7ರಷ್ಟು ಮೀಸಲಾತಿ ಹೆಚ್ಚಳ ಮಾಡಿರುವ ಕ್ರಮವನ್ನು ಸ್ವಾಗತಿಸಿ, ತಾಲೂಕು ನಾಯಕ ಮಂಡಳಿಯಿಂದ ಶನಿವಾರ ಸಂಭ್ರಮಾಚರಣೆ ಮಾಡಲಾಯಿತು. ಪಟ್ಟಣದ ಗಾಂಧಿ ಸರ್ಕಲ್ ಹಾಗೂ ಬಸ್ ನಿಲ್ದಾಣದಲ್ಲಿ ತಾಲೂಕು ನಾಯಕ ಮಂಡಳಿ ಸದಸ್ಯರು ಹಾಗೂ ಸಮುದಾಯದವರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮ ಆಚರಿಸಿದರು.

ಸಮುದಾಯದ ಮುಖಂಡ ಕಂದಹಳ್ಳಿ ಮಹೇಶ್ ಮಾತನಾಡಿ, ಮೀಸಲಾತಿ ವಿಚಾರವಾಗಿ ಹಲವು ವರ್ಷಗಳಿಂದಲೂ ನಾಯಕ ಜನಾಂಗ ಹಾಗೂ ಇದಕ್ಕೆ ಬೆನ್ನುಲುಬಾಗಿ ವಾಲ್ಮೀಕಿ ಪೀಠದ ಸ್ವಾಮೀಜಿಗಳು ಹೋರಾಟ ನಡೆಸುತ್ತಿದ್ದರು. 280 ದಿನಗಳ ನಿರಂತರವಾಗಿ ಹೋರಾಟಗಳ ಫಲವಾಗಿ ಈಗ ರಾಜ್ಯ ಸರ್ಕಾರ ಶೇ.3ರಷ್ಟಿದ್ದ ಮೀಸಲಾತಿಯನ್ನು ಶೇ.7ಕ್ಕೆ ಹೆಚ್ಚಿಸಿದೆ. ಇದರಿಂದ ಮುಂದಿನ ದಿನಗಳಲ್ಲಿ ಪರಿಶಿಷ್ಟ ವರ್ಗ ಎಲ್ಲಾ ಜನಾಂಗಗಳಿಗೂ ಅನುಕೂಲವಾಗಲಿದೆ. ಇದಕ್ಕೆ ಕಾರಣರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು, ಶಾಸಕರು, ಹೋರಾಟ ನಡೆಸಿದ ಎಲ್ಲಾ ಮುಖಂಡರಿಗೆ ತಾಲೂಕು ನಾಯಕ ಮಂಡಳಿಯಿಂದ ಅಭಿನಂದನೆ ಸಲ್ಲಿಸುವುದಾಗಿ ಅವರು ತಿಳಿಸಿದರು. ಈ ವೇಳೆ ತಾಲೂಕು ನಾಯಕ ಮಂಡಳಿ ಅಧ್ಯಕ್ಷ ವೈ.ಎನ್. ಮುರುಳಿಕೃಷ್ಣ, ಮುಖಂಡರಾದ ಭೀಮಪ್ಪ, ವೈ.ವಿ.ಉಮಾಶಂಕರ್, ಆಗ್ರಹಾರ ರಂಗಸ್ವಾಮಿ, ಮಹೇಶ್, ನಾಗರಾಜು, ಕಿಟ್ಟಿ ಚಂದ್ರಶೇಖರ್, ಉಮೇಶ್, ಚಂದ್ರು, ಶ್ರೀನಿವಾಸ್, ದೊರೆ ಸೇರಿದಂತೆ ಹಲವರಿದ್ದರು.

ಗುಂಡ್ಲುಪೇಟೆ ತಾಲೂಕಿನೆಲ್ಲೆಡೆ ಮಲೆಮಹದೇಶ್ವರರ ಜ್ಯೋತಿರಥ ಸಂಚಾರ



ಗುಂಡ್ಲುಪೇಟೆ, ಅ.8–ಜಿಲ್ಲಾ ಕೇಂದ್ರ ಚಾಮರಾಜನಗರದಿಂದ ತಾಲೂಕಿಗೆ ಆಗಮಿಸಿದ ಶ್ರೀ ಮಲೆಮಹದೇಶ್ವರರ ಜ್ಯೋತಿ ರಥವನ್ನು ಶಾಸಕ ಸಿ.ಎಸ್.ನಿರಂಜನ ಕುಮಾರ್ ನೇತೃತ್ವದಲ್ಲಿ ತೆರಕಣಾಂಬಿ ಹುಂಡಿ ಬಳಿ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.

ಅ.13ರಿಂದ 16ರವರೆಗ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ತ್ರಿವೇಣಿ ಸಂಗಮದಲ್ಲಿ ನಡೆಯಲಿರುವ ಮಹಾ ಕುಂಭಮೇಳ ಮಹೋತ್ಸವದ ಅಂಗವಾಗಿ ಸಂಚರಿಸುತ್ತಿರುವ ಶ್ರೀ ಮಲೆಮಹದೇಶ್ವರ ಜ್ಯೋತಿ ಹೊತ್ತ ಬೆಳ್ಳಿರಥವನ್ನು ಗ್ರಾಮದ ಸಂಗನಬಸವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಭಕ್ತಿಭಾವದಿಂದ ಮುಖಂಡರು ಬರಮಾಡಿಕೊಂಡರು. ನಂತರ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನಂದೀಶ್ ಮೂಡ್ಲುಪುರ, ಯು.ಎಂ.ಪ್ರಭುಸ್ವಾಮಿ, ಶಂಕರ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್ ಅವರು ತಾಲೂಕಿನ ಮುಖಂಡರಿಗೆ ಜ್ಯೋತಿಯನ್ನು ಹಸ್ತಾಂತರಿಸಿದರು. ಈ ವೇಳೆ ಶಾಸಕ ಸಿ.ಎಸ್.ನಿರಂಜನಕುಮಾರ್, ತಹಸೀಲ್ದಾರ್ ರವಿಶಂಕರ್, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಹೆಚ್.ಎಸ್.ನಂಜಪ್ಪ ಉತ್ಸವ ಮೂರ್ತಿಗೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು.

ನಂತರ ತೆರಕಣಾಂಬಿ, ಕಗ್ಗಳ, ಶಿಂಡನಪುರ, ಚಿಕ್ಕತುಪ್ಪೂರು, ಗುಂಡ್ಲುಪೇಟೆ ಪಟ್ಟಣ, ಮಾಡ್ರಹಳ್ಳಿ, ಗರಗನಹಳ್ಳಿ, ರಾಘವಾಪುರ ಬೇಗೂರು ಹಾಗೂ ಹಿರೀಕಾಟಿವರೆಗೆ ಸಾಗಿದ ರಥಕ್ಕೆ ಮಾರ್ಗದುದ್ದಕ್ಕೂ ಭಕ್ತರು ಪೂಜೆ ಸಲ್ಲಿಸಿ ಕಾಣಿಕೆ ಅರ್ಪಿಸಿದರು.

ಗುಂಡ್ಲುಪೇಟೆ ಪಟ್ಟಣದಲ್ಲಿ ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್, ಜೆಎಸ್ಎಸ್ ಕಾಲೇಜು ಪ್ರಾಂಶುಪಾಲ ಮರಿಸ್ವಾಮಿ ಸೇರಿದಂತೆ ಹಲವರು ರಥವನ್ನು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ರಾಜಮ್ಮ, ಸದಸ್ಯರಾದ ನಾರಾಯಣ ನಾಯ್ಕ, ಗೋವಿಂದನಾಯ್ಕ, ಎಪಿಎಂಸಿ ನಿರ್ದೇಶಕ ಮಹೇಶ್, ತಾಪಂ ಇಓ ಅರಸು, ಮಾಜಿ ಸದಸ್ಯರಾದ ಮಹೇಶ್, ಪ್ರಭಾಕರ್, ನಾಡಕಚೇರಿಯ ಉಪತಹಸೀಲ್ದಾರ್ ನಾಗೇಶ್, ಹಾಪ್‌ಕಾಮ್ಸ್ ಜಿಲ್ಲಾಧ್ಯಕ್ಷ ಕೆ.ಆರ್. ಲೋಕೇಶ್, ಅಕ್ರಮ–ಸಕ್ರಮ ಸಮಿತಿ ಉಪಾಧ್ಯಕ್ಷ ನಾಗರಾಜಪ್ಪ, ಪಿಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಮಳವಳ್ಳಿ ಮಹೇಶ್, ಜಿಪಂ ಮಾಜಿ ಉಪಾಧ್ಯಕ್ಷ ಪಿ.ಮಹದೇವಪ್ಪ, ಬಿಜೆಪಿ ಮಂಡಲಾಧ್ಯಕ್ಷ ಡಿ.ಪಿ.ಜಗದೀಶ್, ಮುಖಂಡರಾದ ಎಲ್.ಸುರೇಶ್, ಗಂಗಪ್ಪ ಸೇರಿದಂತೆ ಹಲವರಿದ್ದರು.

ಜಿಲ್ಲೆಯ ಗಣಿಗಾರಿಕೆ ಕುರಿತು ಉನ್ನತ ಮಟ್ಟದ ತನಿಖೆಗೆ ವಾಟಾಳ್ ನಾಗರಾಜ್ ಆಗ್ರಹ



ಚಾಮರಾಜನಗರ, ಅ.8–ಜಿಲ್ಲೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆ ಬಗ್ಗೆ ಸರ್ಕಾರ ಉನ್ನತ ತನಖೆ ನಡೆಸಬೇಕು ಎಂದು ಕನ್ನಡ ವಾಟಾಳ್ ಪಕ್ಷದ ಅಧ್ಯಕ್ಷ, ಚಳವಳಿಗಾರ ವಾಟಾಳ್ ನಾಗರಾಜ್ ಆಗ್ರಹಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆಯಾಗಿ 25 ವರ್ಷಗಳು ಆಗಿದೆ. ಜಿಲ್ಲೆ ಅಭಿವೃದ್ಧಿ ಬಗ್ಗೆ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಯಾರೂ ಕೂಡ ಚಾಮರಾಜನಗರ ಅಭಿವೃದ್ಧಿ ಬಗ್ಗೆ ಗಮನ ಕೊಡುತ್ತಿಲ್ಲ. ಜಿಲ್ಲೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆ ನೋಡಿದರೆ ಬಹಳ ನೋವು ಆಗುತ್ತದೆ. ಇದೊಂದು ಲೂಟಿ, ದರೋಡೆಯಾಗಿದೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು ಎಂದು ವಾಟಾಳ್‌ನಾಗರಾಜ್ ಒತ್ತಾಯಿಸಿದರು.

ಚಾಮರಾಜನಗರ ಸುತ್ತಮುತ್ತ ಹಲವರು ಕ್ವಾರೆಗಳು ತೆಗೆದಿದ್ದಾರೆ. 100, 200 300 ಅಡಿ ಭೂಮಿ ಅಗೆದಿದ್ದಾರೆ. ಕ್ವಾರೆ ಪಕ್ಕದಲ್ಲಿ ಎತ್ತರ ಗುಡ್ಡ ನಿರ್ಮಾಣ ಮಾಡಿದ್ದಾರೆ. ಇದನ್ನು ಯಾರು ಕೇಳುವವರಿಲ್ಲ. ಮುನ್ನೆಚ್ಚರಿಕೆ ಕ್ರಮಗಳು ಇಲ್ಲವೇ ಇಲ್ಲ. ಭೂ ವಿಜ್ಞಾನ ಇಲಾಖೆ ಇದ್ದು, ಇಲ್ಲವಾಗಿದೆ. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇತ್ತ ಗಮನಹರಿಸಬೇಕಿದೆ. ಕ್ವಾರೆಗಳು, ಜಲ್ಲಿಕಲ್ಲು ಕ್ರಸರ್‌ನಿಂದ ಬೆಳೆ, ರಸ್ತೆಗಳು ಹಾಳಾಗಿದೆ. ಕೆರೆಗಳು ಮಲೀನವಾಗುತ್ತದೆ. ಪ್ರಾಣಿ ಸಂಕುಲ ದಿಕ್ಕೆಟ್ಟು ಗ್ರಾಮಗಳತ್ತ ಬರುತ್ತಿದೆ. ಜಿಲ್ಲೆ ದಿವಾಳಿಯಾಗಿದೆ. ಈ ಸಂಬಂಧ ಸೋಮವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತೇನೆ ಎಂದರು.

ಟಿಪ್ಪು ಎಕ್ಸ್‌ಪ್ರೆಸ್ ಮುಂದುವರಿಸಿ: ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆ ಸರಿಯಲ್ಲ. ಬೇರೆ ರೈಲಿಗೆ ಒಡೆಯರ್ ಹೆಸರಿಡಬಹುದಿತ್ತು. ವಿರೋಧ ಪಕ್ಷ ಬೀದಿಗಿಳಿದು ಹೋರಾಟ ಮಾಡಿ ಟಿಪ್ಪು ಎಕ್ಸ್‌ಪ್ರೆಸ್ ಉಳಿಸಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಅಜಯ್, ಹುಂಡಿ ಬಸವಣ್ಣ, ಶಿವಲಿಂಗಮೂರ್ತಿ, ಗೋಪಾಲಯ್ಯ, ಕುಮಾರ್, ಬಿ.ವಿ.ರೇವಣ್ಣಸ್ವಾಮಿ, ಚೆನ್ನನಂಜಪ್ಪ, ನಾಗರಾಜು, ಪಾರ್ಥಸಾರಥಿ ಇತರರಿದ್ದರು.

ಹಾವು ಕಚ್ಚಿ ಬಾಲಕಿ ಸಾವು

ಹನೂರು, ಅ.8–ಹಾವು ಕಚ್ಚಿ ಬಾಲಕಿ ಮೃತಪಟ್ಟಿರುವ ಘಟನೆ ತಾಲೂಕಿನ ಕೋಣನಕೆರೆ ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.



ಗ್ರಾಮದ ಮಾದಯ್ಯ ಪುತ್ರಿ ಶ್ರೇಯಾ(16) ಮೃತಪಟ್ಟ ಬಾಲಕಿ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಪೋಷಕರಿಗೆ ಮಧ್ಯಾಹ್ನ ಊಟ ತೆಗೆದುಕೊಂಡು ಹೋಗುವ ವೇಳೆ ಜಮೀನಿನಲ್ಲಿ ಹಾವು ಕಚ್ಚಿದೆ. ಪರಿಣಾಮ ಬಾಲಕಿ ಶ್ರೇಯಾ ಕಿರುಚಿಕೊಂಡಿದ್ದಾಳೆ. ತಕ್ಷಣ ಬಾಲಕಿಯನ್ನು ಪೋಷಕರು ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಆದರೆ ಚಿಕಿತ್ಸೆ ಫಲಿಸದೆ ಬಾಲಕಿ ಅಸುನೀಗಿದ್ದಾಳೆ. ಈಕೆ 8ನೇ ತರಗತಿ ಓದುತ್ತಿದ್ದು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಮನೆಯಲ್ಲಿದ್ದಳು ಎಂದು ತಿಳಿದುಬಂದಿದೆ. ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಪೋಷಕರಿಗೆ ಮೃತದೇಹ ಹಸ್ತಾಂತರಿಸಲಾಯಿತು.

ಲಾರಿ ಡಿಕ್ಕಿ; ಪಾದಚಾರಿ ಸಾವು

ಕೊಳ್ಳೇಗಾಲ, ಅ.8–ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಕೊಳ್ಳೇಗಾಲ ತಾಲೂಕಿನ ಮಧುವನಹಳ್ಳಿ ಗ್ರಾಮದ ಬಳಿ ನಡೆದಿದೆ.

ನಂಜನಗೂಡು ತಾಲೂಕು ಕಡಬೂರು ಗ್ರಾಮದ ಬಸವಣ್ಣ(55) ಮೃತಪಟ್ಟವರು. ಇವರು ಪಾದಯಾತ್ರೆ ಮೂಲಕ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಯಾತ್ರೆ ಕೈಗೊಂಡಿದ್ದರು. ಮಧುವನಹಳ್ಳಿ ಗ್ರಾಮದ ಬಳಿ ಪಾದಯಾತ್ರೆಯಲ್ಲಿ ತೆರಳುತ್ತಿದ್ದ ವೇಳೆ ಹಿಂಬದಿಯಿಂದ ವೇಗವಾಗಿ ಬಂದ ಲಾರಿ, ಬಸವಣ್ಣ ಅವರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಅವರು ಅಸುನೀಗಿದ್ದಾರೆ. ಚಾಲಕನನ್ನು ಲಾರಿ ಸಮೇತ ಪೊಲೀಸರು ವಶಕ್ಕೆ ಪಡೆದಿದ್ದು, ಕೊಳ್ಳೇಗಾಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಗುದ್ದಲಿಪೂಜೆ



ಚಾಮರಾಜನಗರ,ಅ.8–ತಾಲೂಕಿನ ಕಾಡಂಚಿನ ಪುಣಜನೂರು ಗ್ರಾಪಂ ವ್ಯಾಪ್ತಿಯ ಹೊಸಪೋಡು, ಕಾಳಿಕಾಂಬ, ಕುಂಭೇಶ್ವರ ಕಾಲೋನಿಯಲ್ಲಿ ಸಿಸಿರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿ. ಟಿಎಸ್‌ಪಿ ಯೋಜನೆಯಡಿ ಹೊಸಪೋಡು ಗ್ರಾಮಕ್ಕೆ 20 ಲಕ್ಷ, ಕಾಳಿಕಾಂಬ ಕಾಲೋನಿಗೆ 20 ಲಕ್ಷ, ಕುಂಭೇಶ್ವರ ಕಾಲೋನಿಯಲ್ಲಿ 15 ಲಕ್ಷ ಸೇರಿದಂತೆ 55 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಲಾಗಿದೆ. ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆಬದ್ಧರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ, ಆಶ್ರಯ ಮನೆ, ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರ್ಕಾರ ಮಂಜೂರು ಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷ ಮಣಿನಾಯಕ, ಸದಸ್ಯರಾದ ಶಿವನಾಯಕ, ರಾಚಪ್ಪ, ನಾಗನಾಯಕ, ಮಹೇಶ್, ತಾಪಂ ಮಾಜಿ ಸದಸ್ಯ ಆರ್.ಮಹದೇವು, ಕುಂಭೇಶ್ವರ ಕಾಲನಿಸ್ವಾಮಿ, ಮರಿಸ್ವಾಮಿ ಸೇರಿದಂತೆ ಮುಖಂಡರು ಗ್ರಾಮಸ್ಥರಿದ್ದರು.

ಅ.11, ಗುಂಡ್ಲುಪೇಟೆ ತಾಲೂಕು ಕಚೇರಿಗೆ ಡಿಸಿ ಭೇಟಿ

ಚಾಮರಾಜನಗರ, ಅ.8– ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಅ.11 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಗುಂಡ್ಲುಪೇಟೆ ತಾಲೂಕು ಕಚೇರಿಗೆ ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು ಹಾಗೂ ತಾಲೂಕು ಕಚೇರಿಯ ಪರಿಶೀಲನೆ ನಡೆಸುವರು ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಸಂಪುಟ ಅಸ್ತು

ಸರ್ಕಾರಕ್ಕೆ ವರದಿ ಸಲ್ಲಿಸಲು ಸಂಪುಟ ಉಪಸಮಿತಿ ರಚಿಸಲಾಗಿದೆ ಎಂದರು. ನಿನ್ನೆ ನಡೆದ ಸರ್ವಪಕ್ಷಗಳ ನಾಯಕರ ಸಭೆಯಲ್ಲೂ ನ್ಯಾ. ನಾಗಮೋಹನದಾಸ್ ನೇತೃತ್ವದ ಸಮಿತಿಯ ವರದಿ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿತ್ತು.

ಅದರಂತೆ ಇಂದು ನಡೆದ ವಿಶೇಷ ಸಂಪುಟ ಸಭೆಯಲ್ಲಿ ತಕ್ಷಣವೇ ಮೀಸಲಾತಿ ಹೆಚ್ಚಳದ ಬಗ್ಗೆ ಸರ್ಕಾರದ ಆದೇಶ ಹೊರಡಿಸಿ ಅನುಷ್ಠಾನಗೊಳಿಸುವ ಬಗ್ಗೆ ತೀರ್ಮಾನಿಸಲಾಯಿತು ಎಂದು ಹೇಳಿದರು. ಒಂದೆರಡು ದಿನದಲ್ಲಿ ಸರ್ಕಾರದ ಆದೇಶ ಹೊರಬೀಳಲಿದ್ದು, ಆದೇಶದಲ್ಲಿ ಯಾವ ರೀತಿ ಮೀಸಲಾತಿ ಪ್ರಮಾಣ ಹೆಚ್ಚಳವಾಗಲಿದೆ, ಹೇಗೆ ಮೀಸಲಾತಿ ಅನುಷ್ಠಾನಗೊಳಿಸಬೇಕು ಎಂಬ ಸ್ಪಷ್ಟನೆ ಸಿಗಲಿದೆ. ಎಸ್ಸಿ-ಎಸ್ಟಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಅಲ್ಲದೆ, ಇದಕ್ಕೆ ನ್ಯಾಯಮೂರ್ತಿ ಸುಭಾಷ್ ಆಡಿ ನೇತೃತ್ವದ ಸಮಿತಿ ವರದಿ, ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ಸಮಿತಿ ವರದಿ, ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಗಳಿವೆ. ಆದರೆ ಇತರೆ ಹಿಂದುಳಿದ ವರ್ಗಗಳ ಬೇಡಿಕೆಗೆ ಸಂಬಂಧಿಸಿದಂತೆ ಯಾವುದೇ ಅಧ್ಯಯನದ ವರದಿಗಳು, ಆಯೋಗದ ವರದಿಗಳು ಸರ್ಕಾರದ ಮುಂದೆ ಸದ್ಯಕ್ಕಿಲ್ಲ ಎಂದರು. ಸದ್ಯಕ್ಕೆ ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ತೀರ್ಮಾನ ಕೈಗೊಳ್ಳಲಾಗಿದೆ. ಇದರಿಂದ ಶಿಕ್ಷಣ, ನೇಮಕಾತಿಗೆ ಸಂಬಂಧಿಸಿದಂತೆ ಅನುಕೂಲವಾಗಲಿದೆ. ಎಸ್ಸಿಯಲ್ಲಿ 103 ಜಾತಿಗಳು, ಎಸ್ಟಿಯಲ್ಲಿ 56ರಿಂದ 57 ಜಾತಿಗಳಿವೆ. ಈ ಸಮುದಾಯಗಳನ್ನು ಕಡೆಗಣಿಸುವಂತದ್ದಲ್ಲ ಎಂದು ಹೇಳಿದರು.

ನ್ಯಾಯಮೂರ್ತಿ ನಾಗಮೋಹನ ದಾಸ್ ವರದಿಯಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯಂತೆ ಒಳಮೀಸಲಾತಿ ಕಲ್ಪಿಸಬೇಕು ಎಂಬ ಉಲ್ಲೇಖವಿದೆ. ಹೀಗಾಗಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯನ್ನು ಮತ್ತೊಮ್ಮೆ ಅವಲೋಕನ ಮಾಡಿ ಒಳಮೀಸಲಾತಿ ಹೇಗೆ ಜಾರಿಗೊಳಿಸಬೇಕು ಎಂಬ ಬಗ್ಗೆ ವರದಿ ಪಡೆಯಲಾಗುವುದು. ಈಗಾಗಲೇ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಾಕಷ್ಟು ಹೋರಾಟಗಳು ನಡೆದಿವೆ. ಒಬಿಸಿಗೆ ಸೇರಿಸಬೇಕು, ಎಸ್ಟಿಗೆ ಸೇರಿಸಬೇಕು ಎಂಬ ಮನವಿಗಳಿವೆ. ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ ಒಟ್ಟು ಮೀಸಲಾತಿ ಬಗ್ಗೆ ಸರ್ಕಾರ ಮುಂದಿನ ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಿದೆ.

ಈಗಾಗಲೇ ತಮಿಳುನಾಡಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಶೇ.69ರಷ್ಟು ಮೀಸಲಾತಿ ನೀಡಲಾಗುತ್ತಿದೆ. ನ್ಯಾಯಾಲಯದಲ್ಲಿ ತಡೆಯಾಜ್ಞೆ ತರಬಾರದು ಎಂಬ ಕಾರಣಕ್ಕೆ ಮೀಸಲಾತಿ ಹೆಚ್ಚಳವನ್ನು ಷೆಡ್ಯೂಲ್ 9ರಡಿ ತರಬೇಕಿದೆ. ಕೆಲವು ರಾಜ್ಯಗಳು ಮೀಸಲಾತಿ ಹೆಚ್ಚಳವನ್ನು ಅನುಷ್ಠಾನ ಮಾಡಿವೆ. ಕೆಲವು ರಾಜ್ಯಗಳು ಮೀಸಲಾತಿ ಹೆಚ್ಚಳಕ್ಕೆ ನಿರ್ಧರಿಸಿವೆ. ಸಂವಿಧಾನದ ಪ್ರಕಾರ ಶೇ.50ರಷ್ಟು ಮಿತಿ ದಾಟಬಾರದು ಎಂಬ ಬಗ್ಗೆ ಸುಪ್ರೀಂಕೋರ್ಟ್ ತೀರ್ಪಿದೆ.

ಒಬಿಸಿ ವಿಚಾರದ ಬಗ್ಗೆಯೂ ಚರ್ಚೆ ಮಾಡಬೇಕಿದೆ. ಹೀಗಾಗಿ ನಾವು ಮಾತು ಕೊಟ್ಟಂತೆ ಎಸ್ಸಿ-ಎಸ್ಟಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡಿ ಅನುಷ್ಠಾನ ಮಾಡುತ್ತಿದ್ದೇವೆ. ಬೇರೆ ಸಮುದಾಯದ ಬೇಡಿಕೆ ಬಗ್ಗೆಯೂ ಚರ್ಚೆ ಮಾಡುತ್ತೇವೆ. ಆದರೆ ಆ ಬೇಡಿಕೆಗಳ ಕುರಿತಂತೆ ವೈಜ್ಞಾನಿಕ ಅಧ್ಯಯನದ ವರದಿ ಸದ್ಯಕ್ಕಿಲ್ಲ. ವರದಿ ಇಲ್ಲದೆ ಅನುಷ್ಠಾನ ಮಾಡಲಾಗುವುದಿಲ್ಲ ಎಂದರು. ಮೀಸಲಾತಿ ಪ್ರಮಾಣ ಹೆಚ್ಚಿಸಿರುವುದರಿಂದ ಯಾವ ರೀತಿ ಮೀಸಲಾತಿ ಹೊಂದಾಣಿಕೆ ಮಾಡಬೇಕು ಎಂಬ ಬಗ್ಗೆ ಆದೇಶದಲ್ಲಿ ಸ್ಪಷ್ಟಪಡಿಸಲಾಗುವುದು ಎಂದು ಹೇಳಿದರು.

ಮೀಸಲಾತಿ ಹೆಚ್ಚಳಕ್ಕೆ ಕಾನೂನು ರಕ್ಷಣೆ: ಸಿಎಂ

ತೀರ್ಮಾನ ಮಾಡಲಾಗುವುದು ಎಂದರು. ಮೀಸಲಾತಿ ಪ್ರಮಾಣ ಶೇ.50ರ ಗಡಿ ದಾಟುತ್ತಿದ್ದು, ಕಾನೂನಿನ ರಕ್ಷಣೆ ಸಿಗುತ್ತದೋ ಇಲ್ಲವೋ ಎಂಬ ಅನುಮಾನ ಎಲ್ಲರನ್ನು ಕಾಡುತ್ತಿದೆ. ಇಂದ್ರಸಾನಿ ಕೇಸ್‌ನಲ್ಲಿ ಸುಪ್ರೀಂಕೋರ್ಟ್ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಮುಖ್ಯ ವಾಹಿನಿಯಿಂದ ದೂರ ಉಳಿದವರನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಬಹುದು ಎಂದಿದೆ. ನ್ಯಾ. ನಾಗಮೋಹಮೋಹನ್ ದಾಸ್, ನ್ಯಾ. ಸುಭಾಷ್ ಅಡಿ ಅವರ ವರದಿಯಲ್ಲಿ ಈ ವಿಚಾರವಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಜನಸಂಖ್ಯೆ ಹೆಚ್ಚಳವಾಗಿರುವುದನ್ನು ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಮೀಸಲಾತಿ ಪ್ರಮಾಣ ಶೇ.50ರನ್ನು ಮೀರಿರುವುದರಿಂದ ಯಾವ ರೀತಿ ಅನುಷ್ಠಾನ ಮಾಡಬೇಕೆಂಬ ಬಗ್ಗೆ ಕಾನೂನು ತಜ್ಞರ ಜೊತೆ ಚರ್ಚೆ ನಡೆಸಲಾಗುತ್ತಿದೆ. ನ್ಯಾಯಮೂರ್ತಿ ನಾಗಮೋಹನ ದಾಸ್ ಸಮಿತಿ ವರದಿಯಲ್ಲಿ ತಳ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯವಿಲ್ಲ ಎಂಬ ಉಲ್ಲೇಖ ಮಾಡಿದ್ದಾರೆ. ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯಿದ್ದು, ಅದನ್ನು ಸಂಪುಟ ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ. ಅದಕ್ಕೂ ಮುನ್ನ ಯಾವ ರೀತಿ ಒಳಮೀಸಲಾತಿ ಕಲ್ಪಿಸಬೇಕೆಂಬ ವರದಿ ಬಗ್ಗೆ ಅಧ್ಯಯನ ಮಾಡಲಾಗುತ್ತದೆ ಎಂದು ಹೇಳಿದರು. ಒಳಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನ ಎರಡು ಮೂರು ತೀರ್ಪುಗಳಿದ್ದು, ಅವುಗಳನ್ನು ಅಧ್ಯಯನ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳದ ವಿಚಾರವಾಗಿ ಬಲವಾದ ಆಧಾರಗಳಿವೆ ಎಂದು ಮುಖ್ಯಮಂತ್ರಿ ಸಮರ್ಥಿಸಿಕೊಂಡರು. ಇತರೆ ಸಮುದಾಯದ ಮೀಸಲಾತಿ ಬೇಡಿಕೆ ವಿಚಾರಕ್ಕೆ ಸಂಬಂಧಿಸಿದಂತೆ ವರದಿ ಬಂದ ನಂತರ ತೀರ್ಮಾನ ಕೈಗೊಳ್ಳಲಾಗುವುದು. ಪಂಚಮಸಾಲಿ ಸಮುದಾಯದ ಬೇಡಿಕೆಯನ್ನು ಮುಂದಿನ ದಿನಗಳಲ್ಲಿ ನೋಡೋಣ ಎಂದು ಅವರು ಹೇಳಿದರು.

ಯಾವ ಪಕ್ಷಕ್ಕೂ ಅನುಕೂಲ ಆಗಲ್ಲ

ವಿಧಾನಸಭೆ, ಲೋಕಸಭೆಗೆ ಪ್ರವೇಶ ಮಾಡಿದರು. ಆದರೆ ದೇವೇಗೌಡರನ್ನು ನೆನಪಿಸಿಕೊಳ್ಳುತ್ತಿಲ್ಲ ಎಂದರು. ರಾಜಕೀಯ ಲಾಭಕ್ಕಾಗಿ ಬಿಜೆಪಿ ಮೀಸಲಾತಿ ಹೆಚ್ಚಳಕ್ಕೆ ಕೈ ಹಾಕಿದೆ. ಅದು ಜೇನುಗೂಡಿಗೆ ಕೈ ಹಾಕಿದಂತೆ. ಅದರಿಂದ ಯಾವ ಪಕ್ಷಕ್ಕೂ ಅನುಕೂಲವಾಗುವುದಿಲ್ಲ ಎಂದ ಅವರು, ಸರ್ಕಾರವು ಸಾಧಕ-ಬಾಧಕಗಳನ್ನು ಅವಲೋಕಿಸಿ ಅನುಷ್ಠಾನಗೊಳಿಸಬೇಕು ಎಂದರು. ಮೀಸಲಾತಿ ಹೆಚ್ಚಳವಷ್ಟೇ ಅಲ್ಲ, ಕಾಂಗ್ರೆಸ್‌ನ ಭಾರತ ಜೋಡೋ ಯಾತ್ರೆಯಿಂದಲೂ ನಮಗೆ ಎಫೆಕ್ಟ್ ಆಗುವುದಿಲ್ಲ. ಜೆಡಿಎಸ್ ಶಕ್ತಿ ಏನೆಂಬುದನ್ನು ಮುಂಬರುವ ಚುನಾ ವಣೆಯಲ್ಲಿ ತೋರಿಸುತ್ತೇವೆ. ಪಂಚರತ್ನ ಯೋಜನೆ ಮೂಲಕ ನಾಡಿನ ರೈತರು, ಬಡವರು, ಕಾರ್ಮಿಕರು ಸೇರಿದಂತೆ ಎಲ್ಲಾ ವರ್ಗದ ಜನರನ್ನು ಆರ್ಥಿಕ ಸಬಲರನ್ನಾಗಿ ಮಾಡುವ ಗುರಿ ನಮ್ಮದು ಎಂದು ಕುಮಾರಸ್ವಾಮಿ ನುಡಿದರು.

ಎಂಪಿ ಮಾಡಿದ್ದು ರೈಲು ಹೆಸರು ಬದಲಾವಣೆಗಲ್ಲ: ಟಿಪ್ಪು ಎಕ್ಸ್‌ಪ್ರೆಸ್ ರೈಲಿಗೆ ಒಡೆಯರ್ ಹೆಸರು ನಾಮಕರಣ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಪ್ರತಾಪ್ ಸಿಂಹರನ್ನು ಎಂಪಿ ಮಾಡಿರುವುದು ರೈಲುಗಳ ಹೆಸರು ಬದಲಾವಣೆ ಮಾಡಲು ಅಲ್ಲ, ಹಲವು ಜ್ವಲಂತ ಸಮಸ್ಯೆ ಗಳಿವೆ. ಪ್ರವಾಹ ಪೀಡಿತರು, ಮಳೆಹಾನಿ ಸಂತ್ರಸ್ತರಿಗೆ ಪರಿಹಾರ ನೀಡಲಿ. ಇದ್ಯಾವುದೋ ರೈಲಿನ ಹೆಸರು ಬದಲಿಸಿರುವುದೇ ಸಾಧನೆಯಲ್ಲ ಎಂದು ಪ್ರತಾಪ್ ಸಿಂಹ ವಿರುದ್ಧ ಕಿಡಿಕಾರಿದರು. ಗುಬ್ಬಿ ಶಾಸಕ ಶ್ರೀನಿವಾಸ ಅವರು ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆಗೆ ಸಾಥ್ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಅವರು ನಮ್ಮ ಪಕ್ಷದಲ್ಲೇ ಇಲ್ಲ. ಯಾರು ಯಾರಿಗೆ ಸಾಥ್ ನೀಡಿದರೂ ಜಾತ್ಯಾತೀತ ಜನತಾ ದಳಕ್ಕೆ ಹಿನ್ನಡೆಯಾಗುವುದಿಲ್ಲ. ಸಹಸ್ರಾರು ಕಾರ್ಯಕರ್ತರು ಪಕ್ಷಕ್ಕೆ ಸಾಥ್ ನೀಡುತ್ತಾರೆ ಎಂದು ನುಡಿದರು.

ರಸ್ತೆ ಕಾಮಗಾರಿ 3 ದಿನದಲ್ಲಿ ಆರಂಭ

ಎಸ್.ಎ.ರಾಮದಾಸ್ ಅವರು ಸುಮಾರು 150 ಕೋಟಿ ರೂ. ಹಾಗೂ ಮೇಯರ್ ಆಗಿದ್ದ ಸುನಂದಾ ಪಾಲನೇತ್ರ ಅವರು 25 ಕೋಟಿ ರೂ. ಅನುದಾನವನ್ನು ರಸ್ತೆ, ಚರಂಡಿ, ಪಾರ್ಕ್‌ಗಳ ಅಭಿವೃದ್ಧಿಗಾಗಿ ತಂದಿದ್ದರು. ಜೊತೆಗೆ ಪಾಲಿಕೆಯ 10 ಕೋಟಿ ರೂ. ಹಾಗೂ 15ನೇ ಹಣಕಾಸು ಯೋಜನೆಯಡಿ ಅನುದಾನವನ್ನು ರಸ್ತೆ ಡಾಂಬರೀಕರಣ ಕಾಮಗಾರಿಗೆ ಬಳಸಲಾಗುತ್ತಿದೆ ಎಂದು ಅವರು ತಿಳಿಸಿದರು. ಸುಮಾರು 250 ಕೋಟಿ ರೂ. ವೆಚ್ಚದ ರಸ್ತೆಗೆ ಡಾಂಬರ್ ಹಾಕಲು ಖರ್ಚು ಮಾಡುತ್ತಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಮೂರು ದಿನದೊಳಗಾಗಿ ಉಳಿದ ರಸ್ತೆ ಕಾಮಗಾರಿ ಆರಂಭಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಎರಡು ತಿಂಗಳೊಳಗಾಗಿ ಮೈಸೂರಿನ ಬಹುತೇಕ ಎಲ್ಲಾ ರಸ್ತೆಗಳಿಗೂ ಡಾಂಬರ್ ಹಾಕಲಾಗುವುದು. ಮೈಸೂರು ಮಹಾನಗರ ಪಾಲಿಕೆ, ಮುಡಾ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಏಕ ಕಾಲದಲ್ಲಿ ರಸ್ತೆ ಕಾಮಗಾರಿಗಳು ನಡೆಯಲಿದ್ದು, 2 ತಿಂಗಳೊಳಗಾಗಿ ಎಲ್ಲಾ ರಸ್ತೆಗಳಿಗೂ ಡಾಂಬರ್ ಹಾಕುವ ಕೆಲಸ ಪೂರ್ಣಗೊಳಿಸಲು ಉದ್ದೇಶಿಸಲಾ ಗಿದೆ ಎಂದು ಮಹೇಶ್ ಅವರು ತಿಳಿಸಿದರು.

ಜೆಡಿಎಸ್‌ಗೆ ಜನರೇ ಶಕ್ತಿ ಕೊಡಬೇಕು

ಮೀಸಲಾತಿ ಅಂತ ಎಂದೂ ಹೇಳಿರಲಿಲ್ಲ. ಆದರೂ ನಮ್ಮ ಸರ್ಕಾರದಲ್ಲಿ ಮಾಡಿದೆ ಎಂದು ಹೇಳಿದರು. ನನ್ನ ಕಣ್ಣ ಮುಂದೆ ಜೆಡಿಎಸ್ ಅಧಿಕಾರಕ್ಕೆ ಬರೋದು ಸತ್ಯ ಮತ್ತೆ ಕುಮಾರಸ್ವಾಮಿ ಸಿಎಂ ಆಗುತ್ತಾರೆ, ಇದು ನಡೆದೆ ನಡೆಯುತ್ತದೆ ಯಾರಿಗೂ ಸಂಶಯ ಬೇಡ. ನನಗೆ ಇನ್ನೂ ಹೋರಾಟ ಮಾಡುವ ಶಕ್ತಿ ಇದೆ, ಕೊನೆಯವರೆಗೂ ರಾಜ್ಯದ ನೆಲ ಜಲದ ವಿಷಯದಲ್ಲಿ ಅನ್ಯಾಯವಾಗಲು ಬಿಡುವುದಿಲ್ಲ ಎಂದರು. ನಾನು ಸಿಎಂ ಆಗುವಾಗಲು ಹೋರಾಟ ಆಯ್ತು, ನಾನು 90ರ ದಶಕದಲ್ಲಿ ಏಕಾಂಗಿಯಾಗಿ ಹೋರಾಟ ಮಾಡಿದೆ. ನಾನು ಸಿಎಂ ಆಗಿದ್ದಾಗ ರಾಜ್ಯದಲ್ಲಿ 16 ಲೋಕಸಭಾ ಸ್ಥಾನ ಬಂತು. ಆಗ ಕೆಲವರು ಕುಮಾರಸ್ವಾಮಿ ಅವರನ್ನು ಹಠ ಮಾಡಿ ನೀವು ಲೋಕಸಭೆಗೆ ಹೋಗಿ ಅಂದ್ರು ಆಗ ಗೆದ್ದು ಬಂದರು ಎಂದು ವಿವರಿಸಿದರು.

ಮುಖ್ಯಮಂತ್ರಿ ಅಭಿನಂದಿಸಿದ ವಾಲ್ಮೀಕಿ ಶ್ರೀಗಳು

ಕೋಟಿ ಜನರ ಪರವಾಗಿ ಮುಖ್ಯಮಂತ್ರಿಗಳಿಗೆ ಹಾಗೂ ಸಚಿವ ಸಂಪುಟದ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಬಸವರಾಜ ಬೊಮ್ಮಾಯಿ ರಾಜ್ಯದ ಧೀಮಂತ ಮುಖ್ಯಮಂತ್ರಿ. ನಾಳೆ ವಾಲ್ಮೀಕಿ ಜಯಂತಿ ಆಚರಣೆ ವೇಳೆಯೂ ವಿಜಯೋತ್ಸವ ನಡೆಸಲಾಗುವುದು. ನಾಳೆ 150 ಸಮುದಾಯದವರಿಂದ ಸರ್ಕಾರ, ಸಿಎಂಗೆ ಅಭಿನಂದನೆ ಸಲ್ಲಿಸಲಾಗುವುದು. ಇಷ್ಟು ದಿನ ನಡೆಸಿದ ಧರಣಿ ವಾಪಸ್ ಪಡೆದಿದ್ದೇವೆ ಎಂದು ಘೋಷಣೆ ಮಾಡಿದರು. ಸ್ವಾಮೀಜಿ ಅವರು ಮಾತನಾಡುತ್ತಿದ್ದ ವೇಳೆ ಕಂದಾಯ ಸಚಿವ ಆರ್.ಅಶೋಕ್ ಅವರು ಕ್ಯಾಮೆರಾದ ಮೂಲಕ ಚಿತ್ರೀಕರಣ ಮಾಡಿದರು.

ನಾಡ ಪ್ರಭು ಕೆಂಪೇಗೌಡರ ಕುರಿತ ವಿಚಾರ ಸಂಕಿರಣಕ್ಕೆ ಚಾಲನೆ

ಬೆಂಗಳೂರಲ್ಲಿ ಕೆಂಪೇಗೌಡರು ನಿರ್ಮಿಸಿದ ಕೆರೆಗಳ ಉಳಿಸಿದ್ದರೆ ಮೇಕೆದಾಟು ಯೋಜನೆ ಅಗತ್ಯವಿರಲಿಲ್ಲ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅಭಿಮತ ● ಅಭಿವೃದ್ಧಿ ಹೆಸರಲ್ಲಿ ಕೆರೆಗಳು ನಿರ್ನಾಮವಾಗಿವೆ

ಮೈಸೂರು, ಅ.8(ಎಂಟಿವೈ)- ಬೆಂಗಳೂರಿನಲ್ಲಿ ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ್ದ ಕೆರೆಗಳನ್ನು ಉಳಿಸಿಕೊಂಡಿದ್ದರೆ, ಕುಡಿಯುವ ನೀರಿನ ಪೂರೈಕೆಗಾಗಿ ಮೇಕೆದಾಟು ಯೋಜನೆ ಆವಶ್ಯಕತೆ ಮುನ್ನಲೆಗೆ ಬರುತ್ತಿರಲಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಆಯೋಜಿಸಿದ್ದ 'ನಾಡಪ್ರಭು ಕೆಂಪೇಗೌಡ ಮತ್ತು ಒಕ್ಕಲಿಗ ರಾಜಮನೆತನದ ಇತಿಹಾಸ' ಕುರಿತು ಎರಡು ದಿನಗಳ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರಿನ ವಿವಿಧೆಡೆ ಕೆಂಪೇಗೌಡರು ಒಂದು ಸಾವಿರಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದ್ದರು. ಆದರೆ, ಅಭಿವೃದ್ಧಿ ಹೆಸರಿನಲ್ಲಿ ಹಲವು ಕೆರೆಗಳು ಕಣ್ಮರೆಯಾಗಿವೆ. ಆ ಕೆರೆಗಳನ್ನು ನಾವು ಉಳಿಸಿಕೊಂಡಿದ್ದರೆ, ಇಂದು ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿರಲಿಲ್ಲ. ಅದನ್ನು ಪರಿಹರಿಸಲು ಮೇಕೆದಾಟು ಯೋಜನೆಯ ಅವಶ್ಯಕತೆಯೂ ಇರುತ್ತಿರಲಿಲ್ಲ ಎಂದರು.

ಕೆರೆಗಳನ್ನು ಉಳಿಸಿಕೊಂಡು ಬೆಂಗಳೂರಿನ ಅಭಿವೃದ್ಧಿಗೆ ಬೇರೆ ಜಾಗ ಬಳಸಬಹುದಾಗಿತ್ತು. ಆದರೆ, ಹಲವಾರು ಕೆರೆಗಳು ಅಭಿವೃದ್ಧಿ ಕಾಮಗಾರಿಗಾಗಿ ಮುಚ್ಚಿರುವುದು ಬೇಸರದ ಸಂಗತಿ. ರಾಜ್ಯದ ಅಭಿವೃದ್ಧಿಗೆ ಕೆಂಪೇಗೌಡ ಹಾಗೂ ಮೈಸೂರು ರಾಜಮನೆತನ



ನೀಡಿದ ಕೊಡುಗೆ ಅಪಾರ. ಕೆಂಪೇಗೌಡ ವಂಶಸ್ಥರು ಬೆಂಗಳೂರು ನಗರವನ್ನು ಕಟ್ಟದೆ ಇದ್ದಿದ್ದರೆ ರಾಜ್ಯದ ಪರಿಸ್ಥಿತಿ ಹೇಗಿರುತ್ತಿತ್ತು ಎಂದು ಊಹಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಬೆಂಗಳೂರು ಇಂದು ದೊಡ್ಡ ನಗರವಾಗಿ ಬೆಳೆದು ನಿಂತಿದೆ. ಅದಕ್ಕೆ ಭದ್ರ ಬುನಾದಿ ಹಾಕಿದವರು ನಾಡಪ್ರಭು ಕೆಂಪೇಗೌಡರು ಎಂದು ಸ್ಮರಿಸಿದರು.

ಒಕ್ಕಲಿಗ ಸಮುದಾಯ ಸ್ವಾಭಿಮಾನದ ಸಮಾಜ. ಈ ಸಮುದಾಯಕ್ಕೆ ಕೊಟ್ಟು ಅಭ್ಯಾಸವಿದೆಯೇ ಹೊರತು ತೆಗೆದುಕೊಂಡು ಅಭ್ಯಾಸವಿಲ್ಲ. ಸಮುದಾಯ ಎಲ್ಲ ಕ್ಷೇತ್ರಗಳಲ್ಲೂ ತನ್ನ ಛಾಪನ್ನು ಮೂಡಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು, ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ರಾಜಕೀಯದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಸಾಧನೆ ಮಾಡಿದ್ದಾರೆ. ಇವರೆಲ್ಲಾ ನಮ್ಮ ಸಮುದಾಯದ ದಿಗ್ಗಜರಿದ್ದಂತೆ. ಹಲವು ಕ್ಷೇತ್ರಗಳಲ್ಲಿ ಕೊಡುಗೆ ನೀಡಿರುವ ಒಕ್ಕಲಿಗ ಸಮುದಾಯ ಉಳಿಯಬೇಕು. ತುಳಿತಕ್ಕೆ ಒಳಗಾಗಿರುವ ಇತರೆ ಸಮಾಜಗಳು ಸಹ ಬೆಳೆಯಬೇಕು. ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಶತ ಶತಮಾನಗಳಿಂದ ಒಕ್ಕಲಿಗ ಸಮುದಾಯ ನಾಡನ್ನು ಆಳ್ವಿಕೆ ಮಾಡುತ್ತಾ ಬಂದಿದೆ. ಒಕ್ಕಲಿಗರ ಡಿಎನ್‌ಎನಲ್ಲಿಯೇ ನಾಯಕತ್ವದ ಗುಣ ಇದೆ. ಇದರಿಂದ ನಾಡನ್ನು ಮುನ್ನಡೆಸುವ ಶಕ್ತಿ ಸಮುದಾಯಕ್ಕೆ ಇದೆ. ಕೆಂಪೇಗೌಡರು ಒಂದು ಭಾಗದವರು, ಗಂಗರು ಮತ್ತೊಂದು ಭಾಗದವರು ಎಂಬ ಭಾವನೆ ಬೇಡ. ಅವರೆಲ್ಲರೂ ನಮ್ಮವರೇ ಎಂದು ತಿಳಿಯಬೇಕು. ನಮ್ಮ ಸಮುದಾಯದವರು ನಾಮಧಾರಿ ಒಕ್ಕಲಿಗ, ಕುಂಚಿಟಿಗ ಸೇರಿದಂತೆ ಬೇರೆ ಬೇರೆ ಹೆಸರುಗಳಲ್ಲಿ ರಾಜ್ಯದ ವಿವಿಧೆಡೆ ನೆಲೆಸಿದ್ದು, ಅವರೆಲ್ಲರೂ ಒಕ್ಕಲಿಗರು ಎಂಬ ಭಾವನೆ ಮೂಡಬೇಕು. ಬೆಂಗಳೂರನ್ನು ಕಟ್ಟಿದವರು ಕೆಂಪೇಗೌಡರಾದರೆ, ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದವರು ಕುವೆಂಪು. ವಿಧಾನ ಸೌಧ ನಿರ್ಮಾಣ ಮಾಡಿದ ಕೆಂಗಲ್ ಹನುಮಂತಯ್ಯ ಕೂಡ ನಮ್ಮವರೇ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಸಹ ನಮ್ಮವರೇ. ಇವರೆಲ್ಲರ ಸಾಧನೆ ಹಾಗೂ ಇತಿಹಾಸವನ್ನು ನಮ್ಮ ಯುವ ಸಮುದಾಯಕ್ಕೆ ತಿಳಿಸಿಕೊಡುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ನಮ್ಮ ಸಮುದಾಯದ ಇತಿಹಾಸವನ್ನು ಯುವ ಸಮುದಾಯಕ್ಕೆ ತಿಳಿಸಿದರೆ ಸ್ವಾಭಿಮಾನ ಹಾಗೂ ಶಕ್ತಿ ಬರುತ್ತದೆ. ಈ ಶಕ್ತಿ ಹಾಗೂ ಸ್ವಾಭಿಮಾನದಿಂದ ನಮ್ಮ ಸಮುದಾಯ ಹಾಗೂ ದೇಶಕ್ಕೆ ಉಪಯೋಗವಾಗುತ್ತದೆ. ಈ ರೀತಿ ಎಲ್ಲ ಸಮುದಾಯಗಳು ಸ್ವಾಭಿಮಾನದಿಂದ ತಮ್ಮ ಶಕ್ತಿಯನ್ನು ಸಮರ್ಥವಾಗಿ ಬಳಸಿದರೆ ದೇಶ ಅಭಿವೃದ್ಧಿ ಹೊಂದುತ್ತದೆ. ಒಕ್ಕಲಿಗ ಸಮುದಾಯ 108 ಸಾಧಕರ ಕೃತಿಗಳನ್ನು ಹೊರ ತರುವ ಕಾರ್ಯವನ್ನು ಶ್ರೀಮಠ ಕೈಗೊಂಡಿದೆ. ಈಗಾಗಲೇ 54 ಸಾಧಕರ ಕೃತಿಗಳು ಹೊರ ಬಂದಿದ್ದು, ಇನ್ನು 54 ಸಾಧಕರ ಕೃತಿಗಳು ಹೊರ ಬರಲಿದೆ. ಸಾಕಷ್ಟು ಅಧ್ಯಯನ ಮಾಡಿ ಕೃತಿಗಳನ್ನು ರಚಿಸಲಾಗುತ್ತಿದೆ ಎಂದರು.

ಈ ಸಂದರ್ಭ ದಿ. ಮಳಲಿ ವಸಂತ್ ಕುಮಾರ್ ರಚನೆಯ 'ನಾಡ ಪ್ರಭು ಕೆಂಪೇಗೌಡ' ಕೃತಿ ಬಿಡುಗಡೆ ಮಾಡಲಾಯಿತು. ಸಾಹಿತಿ ಡಾ|| ಲತಾ ರಾಜಶೇಖರ್ ಅವರಿಗೆ 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶಾಸಕ ಎಲ್. ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ಸಂಘದ ಅಧ್ಯಕ್ಷ ಬೆಟ್ಟೇಗೌಡ, ಗೌರ ವಾಧ್ಯಕ್ಷ ಸಿ.ಪಿ. ಕೃಷ್ಣಕುಮಾರ್, ಗೌರವ ಸಲಹೆಗಾರರಾದ ದೇವೇಗೌಡ, ಡಾ.ಬಿ. ಎನ್. ರವೀಶ್, ಜೆಡಿಎಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಶ್ರೀನಿವಾಸ್ ಹಾಗೂ ಇತರರು ಉಪಸ್ಥಿತರಿದ್ದರು.

ಟನ್ ಕಬ್ಬಿಗೆ 4,500 ರೂ. ದರ ನಿಗದಿಗೊಳಿಸುವುದೂ ಸೇರಿ ವಿವಿಧ ಬೇಡಿಕೆ

ಅ.15ರೊಳಗೆ ಈಡೇರದಿದ್ದರೆ ರಾಜ್ಯಾದ್ಯಂತ ಹೋರಾಟ

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಗಡುವು

ಮೈಸೂರು,ಅ.8(ಪಿಎಂ)- ಟನ್ ಕಬ್ಬಿಗೆ 4,500 ರೂ. ದರ ನಿಗದಿಗೊಳಿಸಿ ಎಸ್‌ಎಪಿ ದರ ಘೋಷಿಸಬೇಕು, ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷೇಧಿಸಬೇಕು, ವಿದ್ಯುತ್ ಖಾಸಗೀಕರಣ ಮಸೂದೆ ಕೈಬಿಡಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವ ಬಗ್ಗೆ ಸರ್ಕಾರ ಅ.15ರೊಳಗೆ ಕ್ರಮ ವಹಿಸುವುದಾಗಿ ಭರವಸೆ ನೀಡಿದೆ. ಆ ಬಳಿಕವೂ ಯಾವುದೇ ಸ್ಪಂದನೆ ಇಲ್ಲವಾದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಬೂ ಸವಾರಿ ದಿನದಂದು ಮೈಸೂರು-ಮಂಡ್ಯ ಜಿಲ್ಲೆಯ 8 ಸ್ಥಳಗಳಲ್ಲಿ ರಸ್ತೆ ತಡೆಯೊಂದಿಗೆ ಪ್ರತಿಭಟನೆ ನಡೆಸಿದಾಗ, ಅ.15ರೊಳಗೆ ಬೇಡಿಕೆ ಈಡೇರಿಸುವ ಭರವಸೆಯು ಸರ್ಕಾರದಿಂದ ಬಂದ ಹಿನ್ನೆಲೆಯಲ್ಲಿ ಅಂದು ಪ್ರತಿಭಟನೆ ಕೈಬಿಡಲಾಯಿತು. ಅಂದು ಎರಡೂ ಜಿಲ್ಲೆಗಳ ವಿವಿಧ ರಸ್ತೆಗಳಲ್ಲಿ ಹಸು, ಎತ್ತು, ಎತ್ತಿನ ಗಾಡಿ, ಟ್ರ್ಯಾಕ್ಟರ್‌ಗಳೊಂದಿಗೆ ರಸ್ತೆಗಿಳಿದು ಹೋರಾಟ ನಡೆಸಲಾಯಿತು ಎಂದರು.

ಅಡಿಕೆ ಬೆಳೆಗಾರರ ಹೋರಾಟ: ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳಲು ಮುಂದಾಗುವ ಮೂಲಕ ನರೇಂದ್ರ ಮೋದಿಯವರು ಅಡಿಕೆ ಬೆಳೆಗಾರರ ಹೊಟ್ಟೆ ಮೇಲೆ ಹೊಡೆಯಲು ಹೊರಟಿ



ದ್ದಾರೆ. ದೇಶ ಮತ್ತು ರಾಜ್ಯದಲ್ಲಿಯೂ ಹೆಚ್ಚಾಗಿ ಅಡಿಕೆ ಬೆಳೆ ಬೆಳೆಯಲಾಗುತ್ತಿದೆ. ರಾಜ್ಯದ ಅಡಿಕೆ ಬೆಳೆಯುವ ಪ್ರದೇಶದಲ್ಲಿ ಬಹುತೇಕ ಬಿಜೆಪಿ ಸಂಸದರೇ ಇದ್ದು, ಅವರು ಭೂತಾನ್‌ನಿಂದ ಆಮದು ಮಾಡಿಕೊಳ್ಳುವುದರ ವಿರುದ್ಧ ದನಿ ಎತ್ತಬೇಕು. ಈ ಸಂಬಂಧ ಇದೇ ತಿಂಗಳ ಕೊನೆಯಲ್ಲಿ ಅಡಿಕೆ ಬೆಳೆಯುವ ಜಿಲ್ಲೆಗಳಲ್ಲಿ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ದೇಶದಲ್ಲಿ ಸಾಮಾನ್ಯ ಜನತೆ ಜೀವನ ಸಾಗಿಸಲು ಆಗದಂತಹ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ. ಮತ್ತೊಂದು ಕಡೆ ದೊಡ್ಡ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಸರ್ಕಾರಗಳು ಕಾರ್ಪೊರೇಟ್ ಕಂಪನಿಗಳ ಏಜೆಂಟ್ ಆಗಿ ಬಿಟ್ಟಿದ್ದು, ಅವರ ಕೈ ಗೊಂಬೆಯಾಗಿ ಕೆಲಸ ಮಾಡುತ್ತಿವೆ. ಹಾಗಾಗಿ ದೇಶದಲ್ಲಿ ಮುಂದುವರೆದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನತೆ ಸಜ್ಜಾಗಬೇಕಿದೆ. ಎಲ್ಲಾ ಪಕ್ಷಗಳೂ ಅಧಿಕಾರವಿದ್ದಾಗ ಕಾರ್ಪೊರೇಟ್ ಕಂಪನಿಗಳ ಕೈ ಗೊಂಬೆಯಾಗಿಯೇ ವರ್ತಿಸಿವೆ. ಹಿಂದೆ ಕಾಂಗ್ರೆಸ್ ಶೇ.10ರಷ್ಟಿದ್ದರೆ, ಈಗಿನ ಬಿಜೆಪಿ ಶೇ.90ರಷ್ಟು ಕಾರ್ಪೊರೇಟ್ ಕಂಪನಿಗಳ ಪರವಾಗಿದೆ ಎಂದು ಕಿಡಿಕಾರಿದರು.

ಕೆಜಿ ತಂಬಾಕಿಗೆ ಕನಿಷ್ಠ 220 ರೂ. ಕೊಡಿ: ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, ಇಡೀ ರಾಜ್ಯದ ತುಂಬಾಕು ಬೆಳೆಯುವ ಪ್ರದೇಶದಲ್ಲಿ ಈ ವರ್ಷ ಅತಿವೃಷ್ಟಿಯಿಂದ ಬೆಳೆಗೆ ಹಾನಿಯಾಗಿದೆ. ಆದರೂ ಬೆಳೆ ಹಾನಿ ಬಗ್ಗೆ ಸರ್ಕಾರದಿಂದ ಯಾವುದೇ ಸಮೀಕ್ಷೆ ನಡೆದಿಲ್ಲ ಎಂದರು.

ಇದೀಗ ಅ.10ರಂದು ತಂಬಾಕು ಹರಾಜು ಮಾರುಕಟ್ಟೆ ಪ್ರಾರಂಭವಾಗುತ್ತಿದ್ದು, ಮಾರುಕಟ್ಟೆ ಪ್ರಾರಂಭಕ್ಕೂ ಮುನ್ನ ತಂಬಾಕು ಮಂಡಳಿಯು ಕಂಪನಿ ಮುಖ್ಯಸ್ಥರು, ಬೆಳೆಗಾರರರು, ಜನಪ್ರತಿನಿಧಿಗಳ ಸಭೆ ನಡೆಸಿ, ದರ ನಿಗದಿಗೊಳಿಸುವ ವಾಡಿಕೆ ಇತ್ತು. ಆದರೆ ಈ ಬಾರಿ ಯಾವುದೇ ಸಭೆ ನಡೆಸದೇ ಏಕಾಏಕಿ ಮಾರುಕಟ್ಟೆ ಪ್ರಾರಂಭಿಸಲಾಗುತ್ತಿದೆ. ತಂಬಾಕು ಬೆಳೆಗೆ ಉತ್ಪಾದನಾ ವೆಚ್ಚವೇ ಕೆಜಿಗೆ 180 ರೂ. ಆಗಿದೆ. ಹಾಗಾಗಿ ತಂಬಾಕು ಬೆಳೆಗಾರರಿಗೆ ನಷ್ಟ ಉಂಟಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಕೆಜಿ ತಂಬಾಕಿಗೆ ಕನಿಷ್ಠ 220 ರೂ. ಪ್ರಾರಂಭದ ದರ ನಿಗದಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಮಧುಚಂದನ್, ಮುಖಂಡರಾದ ಪ್ರಸನ್ನ ಎನ್.ಗೌಡ, ಮರಂಕಯ್ಯ, ಹೊಸಕೋಟೆ ಬಸವರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ಟ್ರಕ್‌ಗೆ ಬಸ್ ಡಿಕ್ಕಿ: ಬೆಂಕಿ ಹೊತ್ತಿ 12 ಸಾವು, 38 ಮಂದಿಗೆ ಗಾಯ

ಮುಂಬೈ, ಅ.8- ಮಹಾರಾಷ್ಟ್ರದ ನಾಸಿಕ್‌ನಲ್ಲಿ ಮುಂಬೈಗೆ ತೆರಳುತ್ತಿದ್ದ ಬಸ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಮಗು ಸೇರಿದಂತೆ 12 ಮಂದಿ ಸಾವನ್ನಪ್ಪಿದ್ದು, ಸುಮಾರು 38 ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಸಿಕ್‌ನ ನಾದುರಾ ನಾಕಾ ಬಳಿ ಮುಂಜಾನೆ 5:30ರ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಸಿಕ್‌ನಿಂದ ಪುಣೆಗೆ ತೆರಳುತ್ತಿದ್ದ ಟ್ರಕ್‌ಗೆ ಯವತ್ಮಾಲ್‌ನಿಂದ ಮುಂಬೈಗೆ ಬರುತ್ತಿದ್ದ ಬಸ್ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ನಡೆದಿದೆ. ಗಾಯಗೊಂಡ 38 ಮಂದಿಯಲ್ಲಿ ಮೂವರು ಗಂಭೀರ ರಾಗಿದ್ದಾರೆ. ಹೀಗಾಗಿ ಸಾವಿನ ಸಂಖ್ಯೆ ಇನ್ನು ಏರಿಕೆಯಾಗಬಹುದು, ವೈದ್ಯರ ದೃಢೀಕರಣದ ಬಳಿಕವೇ ನಿಖರವಾದ ಸಾವಿನ ಸಂಖ್ಯೆಯನ್ನು ಹೇಳಬಹುದು ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಮೃತರ ಸಂಬಂಧಿಕರಿಗೆ 5 ಲಕ್ಷ ರೂ ಪರಿಹಾರ ನೀಡಲಾಗುವುದು ಎಂದು ಮಹಾರಾಷ್ಟ್ರಸಿಎಂ ಏಕನಾಥ್ ಶಿಂಧೆ ಹೇಳಿದ್ದಾರೆ.

ಮೈಸೂರಿನ ಎಸ್.ಎಚ್.ಸುಭಾಷ್ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ

ಮೈಸೂರು, ಅ.8- 2022ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ರಾಜ್ಯದ ವಿವಿಧ ಕ್ಷೇತ್ರದ 6 ಮಂದಿ ಸಾಧಕರು ಆಯ್ಕೆಯಾಗಿದ್ದು, ಮೈಸೂರಿನ ಸರಸ್ವತಿಪುರಂ ನಿವಾಸಿ ಎಸ್.ಎಚ್.ಸುಭಾಷ್ ಸಾಮಾಜಿಕ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಲವಕುಶ ಅನಾಥಾಲಯದ ಸಂಸ್ಥಾಪಕ ಎಲ್.ಮುನಿಸ್ವಾಮಿ, ಚಿಕ್ಕಬಳ್ಳಾಪುರದ ಎನ್.ನಾಗಪ್ಪ, ಬೆಳಗಾವಿಯ ನಾಗಪ್ಪ ಹೆಚ್.ಕೋಣಿ, ವಿಜಯನಗರ ಜಿಲ್ಲೆಯ ರಂಗಭೂಮಿ ಕಲಾವಿದೆ ಪಿ.ಪದ್ಮ(ಪದ್ಮಾವತಿ), ಬಳ್ಳಾರಿಯ ಉಷಾರಾಣಿ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ಕಾರ್ಯದರ್ಶಿ ಶಂಭುಲಿಂಗಯ್ಯ ತಿಳಿಸಿದ್ದಾರೆ.

ಗ್ರಾಪಂ ಅಧ್ಯಕ್ಷರ ಅಧಿಕಾರ ಮೊಟಕು ನಿರ್ಧಾರಕ್ಕೆ ವಿರೋಧ

ಕೂಡಲೇ ನಿರ್ಣಯ ಕೈಬಿಡಲು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಆಗ್ರಹ

ಮೈಸೂರು,ಅ.8(ಪಿಎಂ)- ರಾಜ್ಯ ಬಿಜೆಪಿ ಸರ್ಕಾರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ-1993ಕ್ಕೆ ತಿದ್ದುಪಡಿ ತಂದು ಗ್ರಾಪಂ ಸದಸ್ಯರ ಅಧಿಕಾರ ಮೊಟಕುಗೊಳಿಸಿದೆ. ಪಂಚಾಯತಿ ಹಣಕಾಸು ವ್ಯವಹಾರ ಸಂಬಂಧ ಪಂಚಾಯಿತಿ ಅಧ್ಯಕ್ಷರ ಸಹಿ ಅಧಿಕಾರ ಹಿಂಪಡೆಯಲಾಗಿದೆ. ಸದರಿ ತಿದ್ದುಪಡಿ ಕೈಬಿಟ್ಟು ಈ ಹಿಂದಿನಂತೆ ಚುನಾಯಿತ ಪ್ರತಿನಿಧಿಗಳ ಅಧಿಕಾರ ಮುಂದುವರೆಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ನಿರ್ಣಯ ಕೈಗೊಂಡಿರುವ ಬಿಜೆಪಿ ಸರ್ಕಾರ, ಆ ಮೂಲಕ ಪಂಚಾಯತ್ ರಾಜ್ಯ ವ್ಯವಸ್ಥೆಗೆ ಅಪಮಾನ ಮಾಡುತ್ತಿದೆ. ಅಧಿಕಾರ ವಿಕೇಂದ್ರೀಕರಣದ ಮಹತ್ವದ ಆಶಯದೊಂದಿಗೆ ಜಾರಿಗೆ ತಂದ ಸದರಿ ಅಧಿನಿಯಮಕ್ಕೆ ತಿದ್ದುಪಡಿ ಮೂಲಕ ಪಂಚಾಯಿತಿ ಅಧ್ಯಕ್ಷರ ಅಧಿಕಾರವನ್ನು ಪಿಡಿಓ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಗೆ ನೀಡಲಾಗಿದೆ. ಇದು ಸರಿಯಲ್ಲ ಎಂದು ಪ್ರತಿಪಾದಿಸಿದರು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ



1993ರ ಪ್ರಕರಣಗಳಿಗೆ ತಿದ್ದುಪಡಿ ಮತ್ತು ಗ್ರಾಮ ಪಂಚಾಯಿತಿ ನೌಕರರ ಸೇವಾ ವಿಷಯಗಳ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಕಳೆದ ಆಗಸ್ಟ್‌ನಲ್ಲಿ ನಡೆದ ಸಭೆಯಲ್ಲಿ ನಡಾವಳಿಗಳನ್ನು ರೂಪಿಸಲಾಗಿದೆ. ಅವುಗಳನ್ನು ಜಾರಿಗೊಳಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ. ಮಾತ್ರವಲ್ಲದೆ, ಈ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವಂತೆ ಇಲಾಖೆಯ ಅಧೀನ ಕಾರ್ಯದರ್ಶಿಗೆ ನಿರ್ದೇಶನ ನೀಡಲಾಗಿದೆ. ಆ ಮೂಲಕ ಪಂಚಾಯತ್ ರಾಜ್ ಆಶಯವನ್ನೇ ಬುಡಮೇಲು ಮಾಡಲು ಸರ್ಕಾರ ಹೊರಟಿದೆ ಎಂದು ದೂರಿದರು.

ಪಂಚಾಯಿತಿ ಹಣಕಾಸು ವ್ಯವಹಾರ ಸಂಬಂಧ ಚೆಕ್‌ಗಳಿಗೆ ಅಧ್ಯಕ್ಷರು ಹಾಗೂ ಪಿಡಿಓ ಸಹಿ ಹಾಕುವುದು ಕಡ್ಡಾಯವಾಗಿತ್ತು. ಇದೀಗ ತಿದ್ದುಪಡಿ ಮೂಲಕ ಈ ಅಧಿಕಾರವನ್ನು ಪಿಡಿಓಗೆ ಮಾತ್ರ ಉಳಿಸಿದ್ದು, ದ್ವಿತೀಯ ದರ್ಜೆ ಸಹಾಯಕರಿಗೂ ವಿಸ್ತರಿಸಲಾಗಿದೆ ಎಂದರು.

ಗ್ರಾಪಂ ಸದಸ್ಯರ ಅಧಿಕಾರಕ್ಕೂ ಕುತ್ತು: ಪಂಚಾಯಿತಿ ವ್ಯಾಪ್ತಿಯ ಕಟ್ಟಡ, ಹೋಟೆಲ್, ಅಂಗಡಿ ಆರಂಭಕ್ಕೆ ಪರವಾನಗಿ ನೀಡಲು ಗ್ರಾಮ ಪಂಚಾಯಿತಿ ಸದಸ್ಯರ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತಿತ್ತು. ಇದೀಗ ಸಭೆಗಳು ಸಕಾಲಕ್ಕೆ ನಡೆಯದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ನೆಪ ಮುಂದಿಟ್ಟು ತಿದ್ದುಪಡಿ ಮೂಲಕ ಈ ಅಧಿಕಾರವನ್ನೂ ಪಿಡಿಓಗಳಿಗೆ ನೀಡಲಾಗಿದೆ. ಈ ತಿದ್ದುಪಡಿಯನ್ನು ಸರ್ಕಾರ ಕೂಡಲೇ ಹಿಂಪಡೆದು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಈ ಹಿಂದಿನಂತೆ ಮುಂದುವರೆಯಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಸಿಗೆ ಶೇ.17 ಹಾಗೂ ಎಸ್‌ಟಿಗೆ ಶೇ.7ರಷ್ಟು ಮೀಸಲಾತಿ ಹೆಚ್ಚಿಸುವ ಸರ್ಕಾರದ ನಿರ್ಣಯವು ಶೀಘ್ರ ಜಾರಿಯಾಗಬೇಕು ಎಂದು ಇದೇ ವೇಳೆ ಆಗ್ರಹಿಸಿದರು. ರಾಜ್ಯ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ಜಿಲ್ಲಾಧ್ಯಕ್ಷ ನಾಗರಾಜು, ಉಪಾಧ್ಯಕ್ಷ ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಡತೊರೆ ಮಹೇಶ್, ತಾಲೂಕು ಅಧ್ಯಕ್ಷ ಗುರುಮೂರ್ತಿ, ಮುಖಂಡ ನಿಂಗರಾಜ್ ಗೋಷ್ಠಿಯಲ್ಲಿದ್ದರು.

'ಟಿಪ್ಪು ಎಕ್ಸ್‌ಪ್ರೆಸ್'ಗೆ ಮರುನಾಮಕರಣ ಸಣ್ಣತನ

ಮೈಸೂರು,ಅ.8(ಪಿಎಂ)- 'ಟಿಪ್ಪು ಎಕ್ಸ್‌ಪ್ರೆಸ್'ಗೆ 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಮರುನಾಮಕರಣ ಮಾಡಿರುವುದು ದೊಡ್ಡ ಸಾಧನೆಯೇನಲ್ಲ. ಇದೊಂದು ಸಣ್ಣತನದ ಕೆಲಸ ಎಂದು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಖಂಡಿಸಿದರು.

ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ಒಡೆಯರ್ ಕೊಡುಗೆ ಅಪಾರವಾಗಿದೆ. ಹೆಸರಿಲ್ಲದ ಸಾಕಷ್ಟು ರೈಲುಗಳಿದ್ದು, ಅವುಗಳಲ್ಲಿ ಯಾವುದಾದರೂ ರೈಲಿಗೆ ಒಡೆಯರ್ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಬಹುದಿತ್ತು. ಈಗಾಗಲೇ ಇದ್ದ ಹೆಸರು ತೆಗೆಯುವುದು ಸರಿಯಲ್ಲ. ಟಿಪ್ಪು ಒಬ್ಬ ಸ್ವಾತಂತ್ರ್ಯ ಸೇನಾನಿಯಾಗಿದ್ದು, ಅವರ ಹೆಸರು ಕೈಬಿಟ್ಟಿರುವುದು ನಿಜವಾಗಲು ಒಪ್ಪತಕ್ಕದ್ದಲ್ಲ. ಜನಪರ ಕಾರ್ಯಕ್ರಮಗಳನ್ನು ಕೊಡಲು ಇವರಿಂದ ಆಗುತ್ತಿಲ್ಲ. ಬದಲಿಗೆ ಈ ರೀತಿಯಲ್ಲಿ ಸಮಾಜದಲ್ಲಿ ವಿಷಬೀಜ ಬಿತ್ತಲಾಗುತ್ತಿದೆ ಎಂದರು.

ಮೈಸೂರು ಮಿತ್ರ

ಕ್ಷುಲ್ಲಕ ಕಾರಣಕ್ಕೆ ಯುವಕನ ಹತ್ಯೆ

ಕೆಲವೇ ಗಂಟೆಯಲ್ಲಿ ಏಳು ಮಂದಿ ಆರೋಪಿಗಳ ಬಂಧನ

ಕ್ರೈಂ ಬಾಕ್ಸ್

ಮೈಸೂರು, ಅ.8–ಮೈಸೂರಿನ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಯುವಕನನ್ನು ಇರಿದು ಹತ್ಯೆ ಮಾಡಿದ ಏಳು ಮಂದಿ ಆರೋಪಿಗಳನ್ನು ಕೆಲವೇ ಗಂಟೆಗಳಲ್ಲಿ ಬಂಧಿಸುವಲ್ಲಿ ಮೈಸೂರು ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಗುಂಪೊಂದು ಅ.6ರಂದು ರಾತ್ರಿ 12 ಗಂಟೆ ಸುಮಾರಿನಲ್ಲಿ ಶಾಂತಿನಗರ ನಿವಾಸಿ ಸದಾಕತ್(24) ಎಂಬಾತನನ್ನು ಚಾಕುವಿನಿಂದ ಇರಿದು ಹತ್ಯೆಗೈದಿದ್ದು, ಆತನ ಸ್ನೇಹಿತ ಗೌಸಿಯಾನಗರದ ಹನೀಫ್ ಬೇಗ್ ಎಂಬಾತನನ್ನು ತೀವ್ರವಾಗಿ ಗಾಯಗೊಳಿಸಿತ್ತು. ಈ ಪ್ರಕರಣದಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಮೈಸೂರು ನಗರ ಪೊಲೀಸರು ನಿತಿನ್, ಧನುಷ್, ಮತ್ತೋರ್ವ ಧನುಷ್, ಭಾಸ್ಕರ್, ವಿಘ್ನೇಶ್, ಕಾರ್ತಿಕ್ ಅಲಿಯಾಸ್ ಅಪ್ಪಿ ಮತ್ತು ಗಿರೀಶ್‌ನನ್ನು ಬಂಧಿಸಿದೆ.

ವಿವರ: ಹತ್ಯೆಗೀಡಾದ ಸದಾಕತ್ ಮತ್ತು ಆತನ ಸ್ನೇಹಿತ ಹನೀಫ್ ಬೇಗ್ ಅ.6ರಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಎದುರಿಗಿರುವ ಜಟಕಾ ಸ್ಟ್ಯಾಂಡ್ ಬಳಿಯ ತಳ್ಳುವ ಗಾಡಿಯಲ್ಲಿ ಟೀ ಕುಡಿಯುತ್ತಿದ್ದಾಗ ಮೂವರ ತಂಡಕ್ಕೂ ಇವರ ಸ್ನೇಹಿತನಾದ ನೌಷಧ್ ಎಂಬಾತನಿಗೂ ಗಲಾಟೆ ನಡೆಯುತ್ತಿತ್ತು. ಈ ವೇಳೆ ಅವರನ್ನು ಬಿಡಿಸಲು ಇವರಿಬ್ಬರೂ ಹೋದಾಗ ಮಾತಿಗೆ ಮಾತು ಬೆಳೆದು ಗಿರೀಶ್ ಎಂಬಾತನ ಮೇಲೆ ಸದಾಕತ್ ಹಲ್ಲೆ ನಡೆಸಿದ್ದಾನೆ.

ಆಗ ಗಿರೀಶ್ ಮೊಬೈಲ್‌ನಲ್ಲಿ ಧನುಷ್ ಎಂಬಾತನನ್ನು ಕರೆಯುತ್ತಿರುವುದನ್ನು ಗಮನಿಸಿದ ಸದಾಕತ್, ಹನೀಫ್ ಬೇಗ್ ಮತ್ತು ನೌಷಧ್ ಆ ಸ್ಥಳದಿಂದ ಬಸ್ ನಿಲ್ದಾಣದ ನಾನ್–ಸ್ಟಾಪ್ ಬಸ್‌ಗಳು ನಿಲುಗಡೆಯಾಗುವ ಪ್ಲಾಟ್‌ಫಾರಂ ಬಳಿ ಇರುವ ತಳ್ಳುಗಾಡಿಯಲ್ಲಿ ಟೀ ಕುಡಿಯುತ್ತಿದ್ದಾಗ ರಾತ್ರಿ 12 ಗಂಟೆ ಸುಮಾರಿನಲ್ಲಿ 7 ಮಂದಿ ಇದ್ದ ತಂಡ ಆಗಮಿಸಿ ಇವರ ಮೇಲೆ ಹಲ್ಲೆಗೆ ಮುಂದಾಗಿದೆ. ಆ ವೇಳೆ ನೌಷಧ್ ಸ್ಥಳದಿಂದ ಓಡಿ ಹೋಗಿದ್ದು, ಯುವಕರ ತಂಡವು ಸದಾಕತ್ ಮತ್ತು ಹನೀಫ್ ಬೇಗ್‌ನನ್ನು ಚಾಕುವಿನಿಂದ ಇರಿದಿದೆ. ಸ್ಥಳದಲ್ಲಿ ಹನೀಫ್ ಬೇಗ್ ಕುಸಿದು ಬಿದ್ದರೆ, ಸ್ಥಳದಿಂದ ಓಡಿ ಹೋದ ಸದಾಕತ್ ಲಷ್ಕರ್ ಪೊಲೀಸ್ ಠಾಣೆ ಬಳಿ ಇರುವ ಗುಜರಿ ಸಮೀಪ ಕುಸಿದು ಬಿದ್ದಿದ್ದಾನೆ. ಇಬ್ಬರೂ ಗಾಯಾಳುಗಳನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿ ಚಿಕಿತ್ಸೆ ಫಲಕಾರಿಯಾಗದೇ ಸದಾಕತ್ ಸಾವನ್ನಪ್ಪಿದ್ದಾನೆ.

ಎರಡು ಗುಂಪುಗಳ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ನಡೆದಿದ್ದ ಈ ಘಟನೆ ಬೇರೆ ರೀತಿಯ ತಿರುವು ಪಡೆಯುವ ಅಪಾಯವಿದ್ದ ಕಾರಣ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಗೀತಾ ಪ್ರಸನ್ನ ಮತ್ತು ದೇವರಾಜ ಉಪ ವಿಭಾಗದ ಎಸಿಪಿ ಶಶಿಧರ್ ಮಾರ್ಗದರ್ಶನದಲ್ಲಿ ವಿಶೇಷ ತಂಡವನ್ನು ರಚಿಸಿದ್ದರು.

ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್, ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್, ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜೀವನ್, ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ರಾಜು ಉಸ್ತುವಾರಿಯಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ಗೌತಮ್ ಗೌಡ, ಶ್ರೀಮತಿ ಧನಲಕ್ಷ್ಮಿ, ಸುನಿಲ್, ಎಎಸ್‌ಐಗಳಾದ ಸಿದ್ದರಾಜು, ಸಿ.ಕೆ.ಕುಮಾರಸ್ವಾಮಿ, ದೊಡ್ಡಯ್ಯ, ಸಿಬ್ಬಂದಿಗಳಾದ ಲಿಂಗರಾಜು, ಮಂಜುನಾಥ್, ಆದಂ, ಮರಿಸ್ವಾಮಿ, ಮಧುಕೇಶ್, ರಾಜೇಗೌಡ, ಚಿನ್ನಪ್ಪ ಮಾ.ಕಲ್ಲೋಳಿ, ಮಂಜುನಾಥ ಗದಗ್ಯೆಗೋಳ, ಲಾಳೇಸಾಬ್ ನದಾಫ್, ಸತ್ಯ, ಮಹೇಶ, ರಮೇಶ, ಶ್ರೀನಿವಾಸ, ಸಮೀಉಲ್ಲಾ, ಮಹದೇವ ಪ್ರಸಾದ್, ಗಿರೀಶ್, ತಾಂತ್ರಿಕ ವಿಭಾಗದ ಹೆಡ್ ಕಾನ್ಸ್‌ಟೇಬಲ್ ಕುಮಾರ್ ಅವರನ್ನೊಳಗೊಂಡ ತಂಡ ಕ್ಷಿಪ್ರ ಕಾರ್ಯಾಚರಣೆ ನಡೆಸಿ 7 ಮಂದಿ ಆರೋಪಿಗಳನ್ನು ಕೆಲವೇ ಗಂಟೆಗಳಲ್ಲಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಎಲ್ಲಾ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಸ್ಪಷ್ಟನೆ: 'ಮೈಸೂರು ಮಿತ್ರ'ನ ಅ.8ರ ಸಂಚಿಕೆಯಲ್ಲಿ ಪ್ರಕಟವಾದ ಈ ಪ್ರಕರಣದ ವರದಿಯಲ್ಲಿ ಸದಾಕತ್‌ನನ್ನು ಆತನ ಸ್ನೇಹಿತ ಹನೀಫ್ ಇತರರೊಂದಿಗೆ ಸೇರಿ ಚಾಕುವಿನಿಂದ ಇರಿದು ಕೊಲೆಗೈದು ಪರಾರಿಯಾಗಿದ್ದನೆಂದು ತಪ್ಪಾಗಿ ಪ್ರಕಟವಾಗಿತ್ತು. ಅದಕ್ಕಾಗಿ ವಿಷಾಧಿಸುತ್ತೇವೆ. –ಸಂ


ಟೊಮ್ಯಾಟೊ ಬೆಳೆಗೆ ಎಲೆ ಚುಕ್ಕೆ ರೋಗ

ಎಚ್ಚರಿಕೆ ವಹಿಸಲು ತೋಟಗಾರಿಕೆ ಅಧಿಕಾರಿಗಳ ಸೂಚನೆ

ಮೈಸೂರು, ಅ.8(ಎಂಕೆ)– ಮೈಸೂರು ಜಿಲ್ಲೆಯಲ್ಲಿ ಹುಣಸೂರು, ಹೆಚ್.ಡಿ.ಕೋಟೆ, ಜಯಪುರ, ವರುಣಾ ಸೇರಿದಂತೆ ಒಂದೂವರೆ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಟೊಮ್ಯಾಟೊ ಬೆಳೆ ಬೆಳೆಯಲಿದ್ದು, ರೈತರು ಎಲೆ ಚುಕ್ಕೆ ರೋಗ ಸೇರಿದಂತೆ ಟೊಮ್ಯಾಟೊ ಬೆಳೆಗೆ ಹಾನಿಯುಂಟು ಮಾಡುವ ರೋಗಗಳ ಬಗ್ಗೆ ಎಚ್ಚರಿಕೆ ವಹಿಸುವಂತೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಟೊಮ್ಯಾಟೊ ಗಿಡದ ಎಲೆ ಚೆನ್ನಾಗಿದ್ದರಷ್ಟೇ ಉತ್ತಮ ಇಳುವರಿ ಪಡೆಯಲು ಸಾಧ್ಯ. ಇಲ್ಲದಿದ್ದರೆ ಗಿಡದ ಬೆಳವಣಿಗೆಯಲ್ಲಿ ಕುಂಠಿತವಾಗುವುದು, ಹೂ ಬಿಡುವ ಪ್ರಮಾಣ ಕಡಿಮೆಯಾಗುವುದು, ಕಾಯಿಗಳು ಉದುರುವುದು ಸೇರಿದಂತೆ ಹಲವು ಸಮಸ್ಯೆಗಳಿಂದ ಇಳುವರಿ ಕಡಿಮೆಯಾಗುವುದಲ್ಲದೆ ಗುಣಮಟ್ಟದ ಟೊಮ್ಯಾಟೊ ಬೆಳೆ ಬೆಳೆಯುವುದು ಕಷ್ಟವಾಗುತ್ತದೆ. ಆದ್ದರಿಂದ ರೈತರು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದ್ದಾರೆ.

ಚುಕ್ಕೆ ರೋಗ ಬಾಧಿತ ಗಿಡದ ಎಲೆಗಳು ಕಂದು ಮತ್ತು ಕಪ್ಪು ಬಣ್ಣಕ್ಕೆ ತಿರುಗಿ ನಂತರ ಕಾಯಿಗಳ ಮೇಲೆ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಕಾಯಿ ಬಲಿತು ಹಣ್ಣಾಗುವುದಕ್ಕೂ ಮುನ್ನವೇ ಗಿಡದಿಂದ ಉದುರುತ್ತವೆ. ಚುಕ್ಕಿ ರೋಗಕ್ಕೆ ಕಾರಣವಾಗಿರುವ ಶಿಲೀಂಧ್ರಗಳು ಗಿಡದ ಎಲೆಗಳನ್ನು ತಿನ್ನುವುದರಿಂದ





ಕಾಂಡದ ಭಾಗ ಕೊಳೆತು ಗಿಡಗಳು ಸೊರಗುತ್ತವೆ. ಚುಕ್ಕೆ ರೋಗ ಬೆಳೆಗಾರರಿಗೆ ದೊಡ್ಡ ಪೆಟ್ಟು ಕೊಡುತ್ತಿದ್ದು, ಮುಂಜಾಗ್ರತೆ ವಹಿಸದಿದ್ದರೆ ಬೆಳೆದಿರುವುದನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಎಚ್ಚರಿಸಿದ್ದಾರೆ.

ಹುಣಸೂರಿನಲ್ಲಿ ಜಾಸ್ತಿ: ಮೈಸೂರು ಜಿಲ್ಲೆಯ ಹುಣಸೂರು ತಾಲೂಕು ವ್ಯಾಪ್ತಿಯಲ್ಲಿ ಬೆಳೆದಿರುವ ಟೊಮ್ಯಾಟೊ ಬೆಳೆಯಲ್ಲಿ ಎಲೆ ಚುಕ್ಕೆ ರೋಗ ಹೆಚ್ಚಾಗಿ ಕಾಣಿಸಿಕೊಂಡಿದ್ದು, ಸೂಕ್ತ ಸಂದರ್ಭದಲ್ಲಿ ರಸಾಯನಿಕ ಕ್ರಿಮಿನಾಶಕಗಳನ್ನು ಬಳಕೆ ಮಾಡದಿದ್ದರೆ ರೋಗ ಇನ್ನೂ ಹೆಚ್ಚಿನ ಪ್ರದೇಶಕ್ಕೆ ಹರಡುವ ಸಾಧ್ಯತೆ ಹೆಚ್ಚಾಗುತ್ತದೆ. ಹೆಚ್ಚಿನ ಮಳೆ ಹಾಗೂ ಶೀತದ ವಾತಾವರಣದಿಂದ ಎಲೆ ಚುಕ್ಕೆ ರೋಗ ಬಾಧಿಸಲಿದೆ ಎಂದಿದ್ದಾರೆ.

ಎಲೆ ಚುಕ್ಕೆ ರೋಗ: ಎಲೆಯ ಮೇಲೆಲ್ಲಾ ಕಪ್ಪನೆಯ ವೃತ್ತಾಕಾರದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ನಂತರ ಒಂದಕ್ಕೊಂದು ಸೇರಿಕೊಂಡು ಒಣಗಲು ಪ್ರಾರಂಭವಾಗುತ್ತದೆ. ಇದರ ನಿಯಂತ್ರಣಕ್ಕೆ ಬೆಳೆ ನಾಟಿ ಮಾಡಿದ 8–10 ವಾರಗಳ ನಂತರ 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲೂಪಿ ರಸಾಯನಿಕವನ್ನು ನೀರಿನಲ್ಲಿ(ಪ್ರತಿ ಹೆಕ್ಟೇರ್‌ಗೆ 625 ಲೀಟರ್ ಸಿಂಪರಣೆ) ಬೆರೆಸಿ ಸಿಂಪಡಿಸುವುದರಿಂದ ಎಲೆ ಚಿಕ್ಕೆ ರೋಗವನ್ನು ನಿಯಂತ್ರಣಕ್ಕೆ ತರಬಹುದು ಎಂದು ಮಾಹಿತಿ ನೀಡಿದ್ದಾರೆ.

ಅಂಗಮಾರಿ ರೋಗ: ಟೊಮ್ಯೊಟೊ ಬೆಳೆಯ ಆರಂಭದಲ್ಲಿ ಎಲೆಯ ಮೇಲ್ಭಾಗದಲ್ಲಿ ಕಂದು ಕಪ್ಪು ಮಿಶ್ರಿತ ಚುಕ್ಕೆಗಳಾಗಿ ನಂತರ ಎಲೆಗಳು ಒಣಗಲಿದ್ದು, 3 ಗ್ರಾಂ ದೊಡೀನ್ ಅಥವಾ 2 ಗ್ರಾಂ ಮ್ಯಾಂಕೋಜೆಬ್ ಅಥವಾ 2.5 ಗ್ರಾಂ ಕ್ಯುಪ್ರಸ್ ಆಕ್ಸೈಡ್ ಅನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ 15 ದಿನಗಳ ಅಂತರದಲ್ಲಿ 2 ಬಾರಿ ಸಿಂಪಡಿಸಬೇಕು. **ದುಂಡಾಣು ಸೊರಗು ಬೇರು ರೋಗ**ದಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ, ಗಿಡವು ಬಾಡಿ ಒಣಗುತ್ತದೆ. ಈ ರೋಗಕ್ಕೆ ತುತ್ತಾದ ಗಿಡದ ಕಾಂಡವನ್ನು ಸೀಳಿ ನೋಡಿದಾಗ ಕಂದು ಬಣ್ಣ ಕಾಣಿಸುತ್ತದೆ. ದುಂಡಾಣು ಸೊರಗು ಬೇರು ರೋಗ ಬಾಧಿತ ಪ್ರದೇಶದಲ್ಲಿ ಟೊಮ್ಯಾಟೊ ಅಥವಾ ಅದೇ ವರ್ಗಕ್ಕೆ ಸೇರಿದ ಬದನೆ, ಹೊಗೆಸೊಪ್ಪು ಮೆಣಸಿಕಾಯಿ, ಅಲೂಗಡ್ಡೆ ಬೆಳೆಯದಿರುವುದು ಸೂಕ್ತ. ಹಾಗೆಯೇ ಟೊಮ್ಯೊಟೊ ಗಿಡಗಳ ಬೆಳವಣಿಗೆ ಕುಂಠಿತಕ್ಕೆ ಕಾರಣವಾಗುವ ಗಂಟು ಬೇರು ಜಂತು ರೋಗ, ಬೂದಿ ರೋಗ ಹಾಗೂ ಫ್ಯೂಸೇರಿಯಂ ಸೊರಗು ರೋಗಗಳ ನಿಯಂತ್ರಣಕ್ಕೆ ಸೂಕ್ತ ರಸಾಯನಿಕ ಕ್ರಿಮಿನಾಶಕಗಳನ್ನು ಬಳಸಬೇಕು. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆಗೆ ಭೇಟಿ ನೀಡಿ ಮಾಹಿತಿ ಪಡೆಯುವಂತೆ ಮನವಿ ಮಾಡಿದ್ದಾರೆ.

ಶ್ರೀ ಇಗ್ಗುತ್ತಪ್ಪ ಕೊಡವ ಅಸೋಸಿಯೇಷನ್ ಕ್ರೀಡಾ ಕಣ ಇಂದು ಉದ್ಘಾಟನೆ



ಮೈಸೂರು, ಅ.8–ಮೈಸೂರಿನ ವಿವೇಕಾನಂದ ನಗರದಲ್ಲಿರುವ ಶ್ರೀ ಇಗ್ಗುತ್ತಪ್ಪ ಕೊಡವ ಅಸೋಸಿಯೇಷನ್ ಹೆಚ್.ಡಿ.ಕೋಟೆ ರಸ್ತೆ ಪರಸಯ್ಯನ ಹುಂಡಿ ಸಿಎ ನಿವೇಶನ ಸಂಖ್ಯೆ–1ರಲ್ಲಿ ನೂತನವಾಗಿ ನಿರ್ಮಿಸಿರುವ ಕ್ರೀಡಾ ಕಣವನ್ನು ನಾಳೆ (ಅ.9) ಬೆಳಗ್ಗೆ 9.15ಕ್ಕೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದಾರೆ. ಕೆಎಸ್‌ಟಿಡಿಸಿ ನಿರ್ದೇಶಕ ಡಾ. ಪ್ರಫುಲ್ಲಾ ಮಲ್ಲಾಡಿ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಚ್ಚಿಮಂಡ ಬಿ.ಗಪ್ಪಣ್ಣ, ನಗರ ಪಾಲಿಕೆ ಸದಸ್ಯ ಮಲ್ಲೆಟ್ಟಿರ ಬಿ.ಸುಬ್ಬಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ಭರವಸೆ ಪೈಲ್ವಾನ್ ಯಶವಂತ್ ಗುರಿ ಈಗ 'ಕರ್ನಾಟಕ ಕೇಸರಿ' ಗೆಲ್ಲುವುದು

ಬಲಾಢ್ಯರ ವಿರುದ್ಧವೇ ಒಂದೇ ದಿನ 7 ಕುಸ್ತಿ ಗೆದ್ದ ಬಲಶಾಲಿ





ಚಿಕ್ಕಮಗಳೂರಿನ ತರೀಕೆರೆಯ ಬಯಲು ರಂಗಮಂದಿರದಲ್ಲಿ ಶನಿವಾರ ರಾತ್ರಿ ನಡೆದ ರಾಜ್ಯ ಮಟ್ಟದ ದಸರಾ ಬಯಲು ಜಂಗಿ ಕುಸ್ತಿ ಸ್ಪರ್ಧೆಯಲ್ಲಿ 'ತರೀಕೆರೆ ಕೇಸರಿ'ಗೆದ್ದ ಸಂಭ್ರಮ

ಮೈಸೂರು, ಅ.8(ಎಂಕೆ)– ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಮೊದಲ ಬಾರಿಗೆ ವಿಭಾಗದ ಮಟ್ಟದಲ್ಲಿ ಆಯೋಜಿಸಿದ್ದ 'ದಸರಾ ಕುಮಾರ್' ಪ್ರಶಸ್ತಿ ಜಯಿಸುವ ಮೂಲಕ ಕೀರ್ತಿ ತಂದ ಮೈಸೂರಿನ ಪೈಲ್ವಾನ್ ಆರ್.ಯಶವಂತ್ ಕರ್ನಾಟಕ ಕೇಸರಿ ಪ್ರಶಸ್ತಿ ಗೆಲ್ಲುವ ತವಕದಲ್ಲಿದ್ದಾರೆ.

ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ 6 ದಿನಗಳ ಕಾಲ ನಡೆದ ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಗಮನ ಸೆಳೆದ ಸುಣ್ಣದಕೇರಿ ಭೂತಪ್ಪನ ಗರಡಿಯ ಪೈ.ಆರ್.ಯಶವಂತ್, ಸಿಎಂ ಕಪ್ ಪಂದ್ಯಾವಳಿಯ ಫ್ರೀ ಸ್ಟೈಲ್ ಕುಸ್ತಿಯಲ್ಲಿ(125 ಕೆಜಿ ವಿಭಾಗ) ಚಿನ್ನದ ಪದಕ ಹಾಗೂ 'ದಸರಾ ಕುಮಾರ್' ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವ ಮೂಲಕ ಬೆಳ್ಳಿ ಗದೆ ತಮ್ಮದಾಗಿಸಿಕೊಂಡಿದ್ದರು.

'ದಸರಾ ಕುಮಾರ್' ಪ್ರಶಸ್ತಿ ಜೊತೆಗೆ 'ದಸರಾ ಕಂಠೀರವ' ಪ್ರಶಸ್ತಿಯನ್ನೂ ಗೆಲ್ಲುವ ಫೇವರಿಟ್ ಆಗಿದ್ದ ಯಶವಂತ್, ಫೈನಲ್ ಪಂದ್ಯದಲ್ಲಿ ಮುದೋಳ್ ಪೈಲ್ವಾನ್ ವಿರುದ್ಧ ಸೆಣಸಾಡಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಮುಂದಿನ ವರ್ಷದಲ್ಲೂ ಪ್ರಶಸ್ತಿ ಗೆಲ್ಲುವ ಮೈಸೂರಿನ ಭರವಸೆಯ ಪೈಲ್ವಾನ್ ಆಗಿ ಹೊರಹೊಮ್ಮಿದ್ದಾರೆ.

ಒಂದೇ ದಿನ 7 ಪಂದ್ಯ: 'ದಸರಾ ಕುಮಾರ್' ಹಾಗೂ 'ದಸರಾ ಕಂಠೀರವ' ಪ್ರಶಸ್ತಿಗಳಿಗೆ ಕುಸ್ತಿ ಮಾಡಿದ ಯಶವಂತ್ ಒಂದೇ ದಿನದಲ್ಲಿ ಫೈನಲ್, ಸೆಮಿ ಫೈನಲ್ ಸೇರಿದಂತೆ 7 ಪಂದ್ಯಗಳಲ್ಲಿ ಪ್ರತಿಸ್ಪರ್ಧಿ ಪೈಲ್ವಾನರ ವಿರುದ್ಧ ಸೆಣಸಾಡಿ ಜಯಿಸಿದ್ದರು. ಅಲ್ಲದೆ ಹಿಂದಿನ ದಿನ ನಡೆದ ಸಿಎಂ ಕಪ್‌ನಲ್ಲೂ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದ್ದ ಅವರು, ಬಹುದಿನಗಳ ಬಳಿಕ ಮೈಸೂರಿನ ಭರವಸೆಯ ಪೈಲ್ವಾನ್ ಎಂದೇ ಗುರ್ತಿಸಿಕೊಂಡಿದ್ದಾರೆ.

ದಸರಾ ಕಂಠೀರವ ಹಾಗೂ ಕರ್ನಾಟಕ ಕೇಸರಿ ಗೆಲ್ಲುವ ಗುರಿ: ಈ ವರ್ಷ 'ದಸರಾ ಕುಮಾರ್' ಜಯಿಸಲು ಸಾಧ್ಯವಾಗಿದ್ದು, ಮುಂದಿನ ವರ್ಷ 'ದಸರಾ ಕಂಠೀರವ' ಪ್ರಶಸ್ತಿ ಗೆಲುವಿಗಾಗಿ ತಯಾರಿ ನಡೆಸುತ್ತೇನೆ ಎಂದಿರುವ ಯಶವಂತ್, ಸರ್ಕಾರದಿಂದ ಆಯೋಜಿಸುವ ಕುಸ್ತಿ ಹಬ್ಬದಲ್ಲಿ ಭಾಗವಹಿಸಿ 'ಕರ್ನಾಟಕ ಕೇಸರಿ' ಪ್ರಶಸ್ತಿ ಗೆಲ್ಲುವ ತವಕದಲ್ಲಿದ್ದಾರೆ.

ನಾಡಕುಸ್ತಿಗಳಲ್ಲಿ ಭಾಗಿ: ಬೆಳಗಾವಿ, ಕೊಲ್ಲಾಪುರ, ತರಿಕೇರೆ ಸೇರಿದಂತೆ ಹಲವಡೆ ನಡೆಯುವ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿದ್ದೇನೆ. ಮಹಾರಾಷ್ಟ್ರದಲ್ಲಿ ನಡೆಯುವ ನಾಡಕುಸ್ತಿಗಳಲ್ಲಿಯೂ ಭಾಗವಹಿಸಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಪಾಯಿಂಟ್ ಕುಸ್ತಿ ಪಂದ್ಯಾವಳಿಗಳಲ್ಲಿಯೂ ಅವಕಾಶ ಸಿಕ್ಕಾಗ ಭಾಗವಹಿಸುತ್ತಿದ್ದೇನೆ. ದಸರಾ ಕುಸ್ತಿ ಮುಕ್ತಾಯದ ಬಳಿಕ ಚಿಕ್ಕಮಗಳೂರಿನ ತರೀಕೆರೆಯ ಬಯಲು ರಂಗಮಂದಿರದಲ್ಲಿ ಅ.6 ರಿಂದ ನಡೆಯುತ್ತಿರುವ ರಾಜ್ಯಮಟ್ಟದ ದಸರಾ ಬಯಲು ಜಂಗಿ ಕುಸ್ತಿ ಸ್ಪರ್ಧೆಯಲ್ಲೂ ಚಿನ್ನದ ಪದಕ ಗಳಿಸಿದ್ದೇನೆ ಎಂದು ಪೈ.ಯಶವಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಒಳ್ಳೆಯ ಪೈಲ್ವಾನ್ ಜೊತೆಗೆ ಸೆಣಸಿದ ಖುಷಿ ಇದೆ: 'ದಸರಾ ಕಂಠೀರವ' ಪಶಸ್ತಿಯ ಫೈನಲ್ ಪಂದ್ಯದಲ್ಲಿ ಮುದೋಳ್ ಪೈಲ್ವಾನ್ ಸುನೀಲ್ ಪಡತಾರೆ ಜೊತೆ ಕುಸ್ತಿ ಮಾಡಿದ್ದು ಖುಷಿ ಇದೆ. ಅನುಭವಿ ಪೈಲ್ವಾನ್‌ನೊಂದಿಗೆ ಕುಸ್ತಿ ಮಾಡಿದ್ದರಿಂದ ಕಲಿಯುವುದಕ್ಕೂ ಅವಕಾಶವಾಯಿತು. ದೈಹಿಕ ಆರೋಗ್ಯ ಕಾಪಾಡಿಕೊಳ್ಳುವ ಉದ್ದೇಶದಿಂದ ಗರಡಿ ಮನೆಗೆ ಹೋಗಿದ್ದರ ಪರಿಣಾಮ ಇಂದು ಹಲವೆಡೆ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ–ಪ್ರಶಸ್ತಿಗಳನ್ನು ಗೆಲ್ಲಲ್ಲು ಸಾಧ್ಯವಾಯಿತು ಎಂದರು.



ಮೈಸೂರು ಅಮಿಟಿ ರೌಂಡ್ ಟೇಬಲ್ ಸದಸ್ಯರು ವಾಸವಿ ಶಾಂತಿಧಾಮಕ್ಕೆ ಭೇಟಿ ನೀಡಿ ಅಲ್ಲಿನ ಸದಸ್ಯರೊಂದಿಗೆ ಕರ್ನಾಟಕ ಸಂಗೀತ ಆಲಿಸಿ, ನಂತರ ದಿನಸಿ ವಿತರಣೆ ಮಾಡಿದರು. ಈ ವೇಳೆ ಇಲ್ಲಿನ ಸದಸ್ಯರೊಂದಿಗೆ ಅಮಿಟಿ ರೌಂಡ್ ಟೇಬಲ್ ಅಧ್ಯಕ್ಷೆ ಅರ್ಪೂ ರಂಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಸರಾ ವಸ್ತು ಪ್ರದರ್ಶನದಲ್ಲಿ ಮೂಲ ಸೌಕರ್ಯ ತ್ವರಿತ ಸುಧಾರಣೆ

ಕುಡಿಯುವ ನೀರು, ಆಂಬುಲೆನ್ಸ್, ಶೌಚಾಲಯಗಳ ಹೆಚ್ಚುವರಿ ವ್ಯವಸ್ಥೆ





ಮಿತ್ರನ ಫಲಶ್ರುತಿ

ಮೈಸೂರು, ಅ.8(ಎಂಕೆ)– ನಾಡಹಬ್ಬ ಮೈಸೂರು ದಸರಾ ನಂತರ ಪ್ರವಾಸಿಗರ ಆಕರ್ಷಣೀಯ ಸ್ಥಳವಾಗಿರುವ ದಸರಾ ವಸ್ತುಪ್ರದರ್ಶನದಲ್ಲಿ ಕುಡಿಯುವ ನೀರು, ಶೌಚಾಲಯ, ಪ್ರಥಮ ಚಿಕಿತ್ಸೆ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ವಸ್ತು ಪ್ರದರ್ಶನ ಪ್ರಾಧಿಕಾರ ಮುಂದಾಗಿದೆ.

ಅ.8ರ 'ಮೈಸೂರು ಮಿತ್ರ'ನಲ್ಲಿ '**ವಸ್ತು ಪ್ರದರ್ಶನದಲ್ಲಿ ಮೂಲ ಸೌಕರ್ಯ ಕೊರತೆ:** ಪ್ರವಾಸಿಗರ ಪರದಾಟ' ಶೀರ್ಷಿಕೆಯಡಿ ಸುದ್ದಿ ಪ್ರಕಟವಾದ ಕೂಡಲೇ ಎಚ್ಚೆತ್ತ ಪ್ರಾಧಿಕಾರದ ಅಧಿಕಾರಿ ವರ್ಗ ವಸ್ತು ಪ್ರದರ್ಶನದ ಆವರಣದಲ್ಲಿನ ಪ್ರಮುಖ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. 2 ಸ್ಥಳಗಳಲ್ಲಿ ಶೌಚಾಲಯ, ತುರ್ತು ಚಿಕಿತ್ಸೆಗಾಗಿ ಆಂಬುಲೆನ್ಸ್ ಹಾಗೂ ಹೆಚ್ಚುವರಿ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪಾಲಿಕೆಗೆ ಪತ್ರ: ವಸ್ತು ಪ್ರದರ್ಶನದಲ್ಲಿನ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಕವರ್ ಬಳಕೆ ಕಡಿವಾಣ ಹಾಕುವ ಕುರಿತು ನಗರ ಪಾಲಿಕೆಗೆ ಪತ್ರ ಬರೆಯಲಾಗಿದೆ. ನಮ್ಮ ಸಿಬ್ಬಂದಿ ಕೂಡ ಪ್ಲಾಸ್ಟಿಕ್ ಬಳಕೆ ಮಾಡದಂತೆ ಮಳಿಗೆ ಮಾಲೀಕರಿಗೆ ತಿಳಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಕವರ್ ಬಳಕೆಗೆ ಕಡಿವಾಣ ಹಾಕಲಾಗುವುದು ಎಂದು ದಸರಾ ವಸ್ತುಪ್ರದರ್ಶನ ಪ್ರಾಧಿಕಾರಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ರುದ್ರೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಿರೀಕ್ಷೆಗೂ ಮೀರಿ ಪ್ರವಾಸಿಗರು ವಸ್ತುಪ್ರದರ್ಶನಕ್ಕೆ ಬರುತ್ತಿದ್ದಾರೆ. ಒಂದೇ ದಿನ ಸಾವಿರಾರು ಜನರು ಬಂದಾಗ ಮೂಲ ಸೌಕರ್ಯದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಹೆಚ್ಚು. ಈ ಮೊದಲು ಕಲ್ಪಿಸಿದ್ದ ಸೌಕರ್ಯಗಳನ್ನು ಹೆಚ್ಚಿಸಲಾಗಿದೆ. ರಾತ್ರಿ 8 ಗಂಟೆಯವರೆಗೆ ಇರುತ್ತಿದ್ದ ಶುಶ್ರೂಷಕಿಯರು ರಾತ್ರಿ 10 ಗಂಟೆವರೆಗೂ ಇರುವಂತೆ ಕ್ರಮವಹಿಸಲಾಗಿದೆ. ಅ.10 ರಿಂದ ಮೊಬೈಲ್ ಎಟಿಎಂ ಅನ್ನು ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಸರ್ವರ್ ಸರಿಯಾಗಿದೆ: ಟಿಕೆಟ್ ಕೌಂಟರ್‌ನಲ್ಲಿ ಉಂಟಾಗಿದ್ದ ಸರ್ವರ್ ಸಮಸ್ಯೆಯನ್ನು ನಿವಾರಿಸಲಾಗಿದೆ. ಅಗ್ನಿಶಾಮಕ ವಾಹನ ಹಾಗೂ ಆಂಬುಲೆನ್ಸ್ ಇಡೀ ದಿನ ವಸ್ತು ಪ್ರದರ್ಶನದಲ್ಲಿ ಇರುವಂತೆ ನೋಡಿಕೊಳ್ಳಲಾಗುವುದು. ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಹಂತ ಹಂತವಾಗಿ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ತಿಳಿಸಿದರು.

ನಾರಾಯಣ ಶಾಸ್ತ್ರಿ ರಸ್ತೆಯ ಫುಟ್‌ಪಾತ್‌ನಲ್ಲಿ ರಾಶಿ ರಾಶಿ ಮಣ್ಣು



ಮೈಸೂರು, ಅ.8(ಜಿಎ)– ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಫುಟ್‌ಪಾತ್ ಮೇಲೆ ರಾಶಿ ರಾಶಿ ಮಣ್ಣು ಬಿದ್ದಿದ್ದು, ಸಾರ್ವಜನಿಕರು ಮತ್ತು ಹಿರಿಯ ನಾಗರಿಕರು ಓಡಾಡುವುದೇ ಕಷ್ಟಕರವಾಗಿದೆ. ದಸರಾ ಅಂಗವಾಗಿ ನಾರಾಯಣಶಾಸ್ತ್ರಿ ರಸ್ತೆಗೆ ಡಾಂಬರೀಕರಣ ಮಾಡುವ ವೇಳೆ ರಸ್ತೆಯಲ್ಲಿದ್ದ ಕಟ್ಟಡದ ತ್ಯಾಜ್ಯ, ಮಣ್ಣಿನ ರಾಶಿಯನ್ನು ಫುಟ್‌ಪಾತ್ ಮೇಲೆ ಸುರಿದಿದ್ದು, ಇದರಿಂದ ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

ಮೈಸೂರಿನಲ್ಲಿ ಗುಂಡಿ ಬಿದ್ದಿದ್ದ ಈ ರಸ್ತೆಗಳಿಗೆ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಡಾಂಬರೀಕರಣ ಮಾಡಲು ಪಾಲಿಕೆ ಆರಂಭಿಸಿತ್ತು. ಅದರಂತೆ ನಗರದ ನಾರಾಯಣ ಶಾಸ್ತ್ರಿ ರಸ್ತೆ(ಮೋರ್ ಮೆಗಾ ಸ್ಟೋರ್‌ನಿಂದ ಶಾಂತಲ ಚಿತ್ರಮಂದಿರದವರೆಗೂ) ಡಾಂಬರೀಕರಣ ಮಾಡಲಾಗಿದೆ.

ಡಾಂಬರೀಕರಣ ಮಾಡುವ ಮುನ್ನ ರಸ್ತೆಯಲ್ಲಿರುವ ಮಣ್ಣನ್ನು ಫುಟ್‌ಪಾತ್ ಮೇಲೆ ಸುರಿಯಲಾಗಿದೆ. ಈ ರಸ್ತೆಯಲ್ಲಿ ಕೆಲ ಪೈಪ್‌ಲೈನ್ ಮತ್ತು ಇತರೆ ಕೇಬಲ್ ಅಳವಡಿಸಲು ಗುಂಡಿಗಳನ್ನು ತೆಗೆಯಲಾಗಿತ್ತು. ಈ ಗುಂಡಿಗೆ ಕೆಲವರು ಬಿದ್ದು ಗಾಯಗೊಂಡಿದ್ದರು. ಇದನ್ನು ಗಮನಿಸಿದ್ದ ಸ್ಥಳೀಯ ನಿವಾಸಿಗಳು, ಈ ಗುಂಡಿಗಳಿಗೆ ಕಟ್ಟಡದ ತ್ಯಾಜ್ಯವನ್ನು ಸುರಿದು ಅಪಘಾತವನ್ನು ತಡೆಯಲು ಮುಂದಾಗಿದ್ದರು. ಆದರೆ, ಡಾಂಬರೀಕರಣ ಮಾಡುವ ವೇಳೆ ಈ ಕಟ್ಟಡದ ತ್ಯಾಜ್ಯವನ್ನು ತೆಗೆದಿರುವ ಸಿಬ್ಬಂದಿ ಸ್ಥಳೀಯ ನಿವಾಸಿಗಳ ಮನೆಗಳ ಮುಂದೆಯೇ ಅದನ್ನು ಸುರಿದಿದ್ದಾರೆ ಎಂದು ನಾಗರಿಕರೊಬ್ಬರು 'ಮೈಸೂರು ಮಿತ್ರ'ನ ಬಳಿ ದೂರಿದರು.

ಈ ಮಾರ್ಗದಲ್ಲಿ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಿದ್ದು, ವಿದ್ಯಾರ್ಥಿಗಳು ಹೆಚ್ಚಾಗಿ ಈ ರಸ್ತೆ ಬಳಸುತ್ತಾರೆ. ಸೋಮವಾರದಿಂದ ದಸರಾ ರಜೆ ಮುಗಿಸಿ ಶಾಲೆಗೆ ಹಿಂದಿರುಗುವ ವಿದ್ಯಾರ್ಥಿಗಳು ಈ ಸಮಸ್ಯೆಯಿಂದ ಫುಟ್‌ಪಾತ್ ಬಿಟ್ಟು ರಸ್ತೆಯನ್ನು ಬಳಸಿ ಏನಾದರೂ ಅನಾಹುತವಾದರೆ, ಯಾರು ಜವಾಬ್ದಾರಿ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಬೇಕಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅವಕಾಶಗಳು ಅವಶ್ಯ

● ಮುಖ್ಯಮಂತ್ರಿ ಬೊಮ್ಮಾಯಿ ಪ್ರತಿಪಾದನೆ ● ಸಮಾನ ಅವಕಾಶದಿಂದ ಬದಲಾವಣೆ ತರಲು ಸಾಧ್ಯ



ಬೆಂಗಳೂರು, ಅ.8(ಕೆಂಶಿ)– ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸಮಾನ ಅವಕಾಶಗಳು ಅಗತ್ಯ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಷ್ಟ್ರೀಯ ಬಸವ ಪ್ರತಿಷ್ಠಾನ ಇಂದು ಹಮ್ಮಿಕೊಂಡಿದ್ದ ಸರ್ವಧರ್ಮ ಸಂಸತ್–2022 ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬದಲಾವಣೆ ತರಲು ಸಮಾನ ಅವಕಾಶಗಳನ್ನು ನೀಡಿದಾಗ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರು ಮೇಲೆ ಬರುತ್ತಾರೆ. ಆ ಅವಕಾಶವೇ ಇಲ್ಲದಿದ್ದರೆ, ತುಳಿತಕ್ಕೆ ಒಳಪಟ್ಟರೆ, ತಲೆಮಾರುಗಳು ಕಷ್ಟಪಡುವಂತಾದರೆ ಎಂದಿಗೂ ಆರೋಗ್ಯಕರ ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯಲ್ಲಿ ಹೆಚ್ಚಳ ಮಾಡುವ ಅವಕಾಶ ಹಾಗೂ ಸಂಕಲ್ಪವನ್ನು ಎಲ್ಲಾ ಹಿರಿಯರು ಆಶೀರ್ವಾದ ಮಾಡಿ ಕೊಟ್ಟಿದ್ದಾರೆ ಎಂದು ಭಾವಿಸುವುದಾಗಿ ತಿಳಿಸಿದರು.

ನಮ್ಮೆಲ್ಲರ ಪ್ರಯತ್ನ ಮನುಷ್ಯನಿಂದ ಮಾನವನೆಡೆಗೆ ಹೋಗುವತ್ತ ಇರಬೇಕು. ಧರ್ಮ ಮನುಷ್ಯನನ್ನು ಮಾನವನೆಡೆಗೆ ಕೊಂಡೊಯ್ಯುವ ವಾಹನ. ಇದನ್ನು ನಾವು ಅರ್ಥ ಮಾಡಿಕೊಂಡಾಗ ನಮ್ಮ ನಾಡು, ದೇಶ ಹಾಗೂ ಜಗತ್ತು ಅತ್ಯಂತ ಪ್ರೀತಿ, ವಿಶ್ವಾಸದಿಂದ ಕೂಡಿರುತ್ತದೆ. ನಮ್ಮ ದೇಶಕ್ಕೆ ಚಾರಿತ್ರ್ಯದ ಅಗತ್ಯವಿದೆ. ದೇಶದ ಸಂಸ್ಕೃತಿ, ಪರಂಪರೆ ಮತ್ತು ಪ್ರತಿ ನಾಗರಿಕನ ಚರಿತ್ರೆಯ ಮೇಲೆ ದೇಶ ತನ್ನ ಮೌಲ್ಯಗಳನ್ನು ಹೆಚ್ಚಿಸಿ ಕೊಳ್ಳುತ್ತದೆ ಎಂದರು.

ಎಲ್ಲರಿಗೂ ಸಮಾನ ಅವಕಾಶ, ಗೌರವ, ಮತ್ತು ಕಾಯಕ ನಿಷ್ಠೆಯ ಬದುಕನ್ನು ಬಸವಣ್ಣ ಸಾರಿದ್ದಾರೆ. ಧರ್ಮದಲ್ಲಿ ಸಮಾನತೆ ಮಾತ್ರವಲ್ಲ, ಲಿಂಗ ಬೇಧ ಮರೆತು ಅಲ್ಲಿಯೂ ಸಮಾನತೆ ತರುವ ಅಗತ್ಯವಿದೆ. ಕೌಟುಂಬಿಕ ಸಮಾನತೆಯಿಂದ ಹಿಡಿದು ಮಾನವಕುಲಕ್ಕೆ ಸಮಾನತೆ ತರಬೇಕಿದೆ. ವೃತ್ತಿ ಗೌರವದ ಜೊತೆಗೆ ಮೇಲು ಕೀಳು ಇಲ್ಲದಿರುವುದು ಅಗತ್ಯ. ಜ್ಞಾನಕ್ಕೆ ಜಾತಿ, ಧರ್ಮ ಇಲ್ಲ. ಕಾಯಕ ಸಮುದಾಯಗಳು ತುಳಿತಕ್ಕೆ ಒಳಗಾದ ಸಂದರ್ಭದಲ್ಲಿ ಬಸವಣ್ಣ ಕೈಗೊಂಡ ವೈಚಾರಿಕ ಕ್ರಾಂತಿ, ಸಾಮಾಜಿಕ ಕ್ರಾಂತಿಯಾಗಿ ಬದಲಾಯಿತು. ತನ್ನನ್ನು ತಾನೇ ಇದಕ್ಕೆ ಅರ್ಪಿಸಿಕೊಳ್ಳುವ ಪ್ರಸಂಗ ಬಂದರೂ ಹಿಂದೆ ಮುಂದೆ ನೋಡಲಿಲ್ಲ. ಸಮಾಜದಲ್ಲಿ ಮತ್ತೊಮ್ಮೆ ಸಂಘರ್ಷ ದೂರ ಮಾಡಿ ಸಮಾನತೆ ತರುವ ಕಾಲ ಕೂಡಿ ಬಂದಿದೆ ಎಂದು ಹೇಳಿದರು.

ಸಮ್ಮೇಳನಗಳಿಗೆ ಬಂದಾಗ ಒಂದು ಅಂಶವಾದರೂ ಒಳ್ಳೆಯದು ಪಡೆಯಬೇಕು. ಆಗ ಸಾರ್ಥಕತೆ ಬರುತ್ತದೆ. ಬಸವ ಪ್ರತಿಷ್ಠಾನ ಉತ್ತಮ ಕೆಲಸವನ್ನು ಮಾಡುತ್ತಿರುವುದು ಶ್ಲಾಘನೀಯ. ಬೆಂಗಳೂರಿನಂಥ ದೊಡ್ಡ ನಗರಗಳಲ್ಲಿ ಸಮ್ಮೇಳನಗಳ ಅಗತ್ಯವಿದೆ ಎಂದರು. ಮನುಷ್ಯರ ನಡುವೆ ಸಂಬಂಧಗಳು ಕಡಿಮೆಯಾಗುತ್ತಿರುವ ನಗರಗಳಲ್ಲಿ ಇದರ ಅವಶ್ಯಕತೆ ಬಹಳ ಇದೆ ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟರು.

ಹುಟ್ಟುವಾಗ ನಮಗೆ ಯಾವುದೇ ಧರ್ಮ ಇರುವುದಿಲ್ಲ. ಜಗತ್ತನ್ನು ಬಿಟ್ಟು ಹೋಗುವಾಗಲೂ ಯಾವುದೇ ಧರ್ಮ ಇರುವುದಿಲ್ಲ. ಆದರೆ ಬದುಕಿನಲ್ಲಿ ನಾವು ಹಲವಾರು ಧರ್ಮಕ್ಕೆ ಸೇರುತ್ತೇವೆ. ನಂತರ ಜಾತಿ, ಉಪಜಾತಿ, ಪಂಗಡಕ್ಕೆ ಸೇರುತ್ತೇವೆ. ಇವೆಲ್ಲವೂ ಸಾಮಾಜಿಕ ವ್ಯವಸ್ಥೆಯಾಗಿ ನಾವು ಮನುಜರು ಕಾಲಕಾಲಕ್ಕೆ ಮಾಡಿಕೊಂಡಿರುವ ವ್ಯವಸ್ಥೆ. ಇದು ಸರಿ ತಪ್ಪು ಅನ್ನುವುದಕ್ಕಿಂತ ವ್ಯವಸ್ಥೆ ಅವಶ್ಯಕತೆ ಮತ್ತು ಅದರ ವ್ಯಾಪ್ತಿ ಎಷ್ಟಿರಬೇಕೆನ್ನುವುದು ಬಹಳ ಮುಖ್ಯ. ಮನುಷ್ಯ ಸಾಮಾಜಿಕ ಜೀವಿ. ಧರ್ಮಗಳು ಮಾನವನ ಉದ್ಧಾರಕ್ಕಾಗಿ ಇದೆಯೇ ಹೊರತಾಗಿ ಸಂಘರ್ಷಕ್ಕಾಗಿ ಅಲ್ಲ. ಯಾವ ಧರ್ಮ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆಯೋ ಅದು ಧರ್ಮವೇ ಅಲ್ಲ ಎಂದರು.

ಬಸವಣ್ಣನವರು ನಮ್ಮ ಜೀವನದ ಎಲ್ಲಾ ಸಮಸ್ಯೆಗಳಿಗೆ ಬಹಳ ಸುಲಭವಾಗಿ ಪರಿಹಾರ ನೀಡಿದ್ದಾರೆ. 'ದಯವಿಲ್ಲದ ಧರ್ಮ ಅದಾವುದಯ್ಯ' ಎಂದು ಒಂದೇ ವಾಕ್ಯದಲ್ಲಿ ತಿಳಿಸಿದ್ದಾರೆ. ನಮ್ಮ ಅಸ್ತಿತ್ವವನ್ನು ಶುದ್ಧವಾಗಿಟ್ಟುಕೊಳ್ಳುವ ವಿಧಾನವನ್ನು ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂದು ಸರಳವಾಗಿ ತಿಳಿಸಿದ್ದಾರೆ. ಕಾಯಕವೇ ಕೈಲಾಸ ಎಂದು ಬದುಕುವ ಮಂತ್ರವನ್ನು ಹೇಳಿಕೊಟ್ಟಿದ್ದಾರೆ. ಅವನ್ನು ಅರಿತು,ಅನುಕರಿಸಿ, ಅಳವಡಿಸಿಕೊಳ್ಳಬೇಕಿದೆ.

ಪೂಜೆಗಿಂತ ಕಾಯಕ ದೊಡ್ಡದು ಎಂದ ಬಸವಣ್ಣ ಸ್ವಾವಲಂಬಿ ಹಾಗೂ ಜೀವನವನ್ನು ಕಾಯಕದಿಂದ ಕಟ್ಟಿಕೊಳ್ಳಲು ಸಾಧ್ಯ. ಅಂಥ ಕಡೆ ಸಮಾನತೆ ಇರುತ್ತದೆ. ಸಮಾನತೆಯಿದ್ದ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ ಎಂದರು. ಸಮ್ಮೇಳನದಲ್ಲಿ ಆಗುವ ನಿರ್ಣಯಗಳನ್ನು ಮುದ್ರಿಸಿ ಹಂಚುವ ಕೆಲಸವಾಗಬೇಕು. ಇದು ಜಗತ್ತಿಗೆ ತಿಳಿಯಬೇಕು. ಸಮ್ಮೇಳನದ ಜೀವಾಳ ಮುಂದುವರಿಯಬೇಕು. ಮುಂದಿನ ವರ್ಷದೊಳಗೆ ಪ್ರಗತಿ ಕಾಣವಂತಾಗಬೇಕು ಎಂದು ಹೇಳಿದರು.

ನಾನು ಎಂದಿಗೂ ದ್ವೇಷ, ಜಾತಿ ರಾಜಕಾರಣ ಮಾಡಿಲ್ಲ

ಬಸವೇಶ್ವರ ದೇವಾಲಯ ನಿರ್ಮಾಣ ಕಾಮಗಾರಿಗೆ ಶಾಸಕ ಸಾ.ರಾ.ಮಹೇಶ್ ಚಾಲನೆ



ಚುಂಚನಕಟ್ಟೆ, ಅ.8– ಕಳೆದ 14 ವರ್ಷಗಳ ರಾಜಕೀಯ ಜೀವನದಲ್ಲಿ ನಾನು ಎಂದಿಗೂ ದ್ವೇಷ ಮತ್ತು ಜಾತಿ ರಾಜಕಾರಣ ಮಾಡಿಲ್ಲ. ಜೊತೆಗೆ ಭ್ರಷ್ಟಾಚಾರಕ್ಕೂ ಅವಕಾಶ ಮಾಡಿಕೊಟ್ಟಿಲ್ಲ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಶ್ರೀರಾಮಪುರ ಗ್ರಾಮದಲ್ಲಿ ಬಸವೇಶ್ವರ ದೇವಾಲಯ ನಿರ್ಮಾಣ ಕಾಮಗಾರಿ, ಗ್ರಾಮ ಪರಿಮಿತಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನನ್ನ ಶಾಸಕತ್ವದ ಅವಧಿಯಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ಅನುದಾನ ತರುವುದರೊಂದಿಗೆ ವೈಯಕ್ತಿಕವಾಗಿಯೂ ಸಾಧ್ಯವಾದಷ್ಟು ಸೇವೆ ಮಾಡಿದ್ದು ಇದನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುತ್ತೇನೆ ಎಂದರು.

ಅಧಿಕಾರ ಎಂದಿಗೂ ಶಾಶ್ವತವಲ್ಲ. ಆದರೆ ನಮಗೆ ಸಿಕ್ಕ ಅವಕಾಶ ಸದ್ಬಳಕೆ ಮಾಡಿಕೊಂಡು ಸಮಾಜದಲ್ಲಿ ನೊಂದವರು ಮತ್ತು ಹಿಂದುಳಿದವರ ನೆರವಿಗೆ ಬರುವುದು ಎಲ್ಲರ ಕರ್ತವ್ಯ. ಇದನ್ನು ಪ್ರತಿಯೊಬ್ಬ ಚುನಾಯಿತ ಜನಪ್ರತಿನಿಧಿ ಮನಗೊಂಡು ಕೆಲಸ ನಿರ್ವಹಿಸಿದರೆ ಸಮಾನತೆಯ ಸಮಾಜ ನಿರ್ಮಾಣ ಮಾಡಬಹುದೆಂದು ನುಡಿದರು.

ಮತದಾರರು ನಮ್ಮನ್ನು ಚುನಾಯಿಸುವುದು ಜನರ ಸಂಕಷ್ಟಗಳನ್ನು ಪರಿಹರಿಸಿ ಕ್ಷೇತ್ರದ ಅಭಿವೃದ್ಧಿ ಮಾಡುವುದಕ್ಕಾಗಿಯೇ ಹೊರತು ತಮ್ಮ ಹಿಂಬಾಲಕರನ್ನು ಬೆಳೆಸುವುದಕ್ಕಾಗಿ ಅಲ್ಲ. ಆದ್ದರಿಂದ ನನ್ನ ಅಧಿಕಾರವಧಿಯಲ್ಲಿ ಇಂತಹ ಯಾವುದೇ ಸ್ವಾರ್ಥದ ಕೆಲಸಗಳನ್ನು ಮಾಡಿಲ್ಲವೆಂದು ಸ್ಪಷ್ಟಪಡಿಸಿದರು.

ರಾಜಕಾರಣ ಮಾಡಿಕೊಂಡು ಸಾರ್ವಜನಿಕ ಜೀವನದಲ್ಲಿ ಇದ್ದು ಚುನಾಯಿತ ಜನಪ್ರತಿನಿಧಿಗಳಾಗುವವರು ತಮ್ಮ ಮನಸ್ಸಿಗೆ ಸಮಾಧಾನವಾಗುವಂತೆ ಕೆಲಸ ಮಾಡುವುದು ಅಸಾಧ್ಯವಾಗಿದ ಪರಿಸ್ಥಿತಿ ನಿರ್ಮಾಣವಾಗಿರುವುದು ಅತ್ಯಂತ ವಿಷಾದನೀಯ ಸಂಗತಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಾನು ಮಾಡುತ್ತಿರುವ ಅಭಿವೃದ್ಧಿ ಪರ ಕೆಲಸ ಮತ್ತು ಜನಸೇವೆ ಮೆಚ್ಚಿ ಕ್ಷೇತ್ರದ ಮತದಾರರು ಸತತವಾಗಿ 3 ಬಾರಿ ಆಯ್ಕೆ ಮಾಡಿದ್ದು ಅವರ ನಂಬಿಕೆ ಮತ್ತು ವಿಶ್ವಾಸಕ್ಕೆ ಧಕ್ಕೆ ಬಾರದ ರೀತಿ ಕೆಲಸ ಮಾಡಿಕೊಂಡು ಹೋಗುತ್ತೇನೆ ಎಂದರು.

ಇದೇ ವೇಳೆ ಶಾಸಕ ಸಾ.ರಾ.ಮಹೇಶ್ ಮತ್ತು ಅವರ ಪತ್ನಿ ಅನಿತಾ ಸಾ.ರಾ.ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಗ್ರಾಪಂ ಸದಸ್ಯ ಅಭಿಷೇಕ್ ಮತ್ತು ಗ್ರಾಮದ ಯುವ ಮುಖಂಡ ಪ್ರಸಾದ್ ಮಾತನಾಡಿದರು. ಈ ವೇಳೆ ಸಿದ್ದಾಪುರ ಗ್ರಾಪಂ ಅಧ್ಯಕ್ಷ ತ್ಯಾಗರಾಜು, ಸದಸ್ಯೆ ಉಮಾ, ಸುಕನ್ಯಾ, ಗ್ರಾಮದ ಮುಖಂಡರಾದ ಭೋಜೇಗೌಡ, ಕರೀಗೌಡ, ಜಯರಾಮೇಗೌಡ, ಪ್ರಸನ್ನಕುಮಾರ್, ಶಿವಣ್ಣ, ಸಣ್ಣರಾಮೇಗೌಡ, ಸುರೇಶ್, ಆನಂದ, ಭಾಸ್ಕರ್, ಲೋಕೇಶ್, ತಂದ್ರೆ ಮಂಜ, ಗಿರೀಶ, ತಹಸೀಲ್ದಾರ್ ಎಸ್.ಸಂತೋಷ್, ತಾಪಂ ಇಓ ಹೆಚ್.ಕೆ.ಸತೀಶ್, ಪಂಚಾಯತ್ ರಾಜ್ ಸಹಾಯಕ ಅಭಿಯಂತರ ಓಂಕಾರ್, ಸಿದ್ಧಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಎಸ್.ಹರಿಚಿದಂಬರ, ಸಿದ್ದಾಪುರ ಪಿಡಿಓ ಶಿವಕುಮಾರ್ ಮತ್ತಿತರರಿದ್ದರು.

ಶ್ರೀಕಂಠೇಶ್ವರನಿಗೆ ಅರ್ಜುನ್ ಸರ್ಜಾ ವಿಶೇಷ ಪೂಜೆ



ನಂಜನಗೂಡು, ಅ.8– ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬಹುಭಾಷಾ ನಟ ಅರ್ಜುನ್ ಸರ್ಜಾ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀಕಂಠೇಶ್ವರನ ದರ್ಶನ ಪಡೆದು ಕೆಲಕಾಲ ಧ್ಯಾನಾಸಕ್ತರಾಗಿದ್ದ ಅವರು, ಪಾರ್ವತಿದೇವಿಗೆ ಕುಂಕುಮಾರ್ಚನೆ ಸಲ್ಲಿಸಿದರು. ದೇವಾಲಯದಿಂದ ಅವರನ್ನು ಬರಮಾಡಿಕೊಂಡು ಶೇಷವಸ್ತ್ರ, ಫಲ–ತಾಂಬೂಲ ನೀಡಿ ಗೌರವಿಸಲಾಯಿತು.

ನಟ ಅರ್ಜುನ್ ಸರ್ಜಾ ಮಾತನಾಡಿ, ಭುಜದ ನೋವಿನಿಂದ ಬಳಲುತ್ತಿದ್ದ ವೇಳೆ ಶ್ರೀಕಂಠೇಶ್ವರನಲ್ಲಿ ಹರಕೆ ಹೊತ್ತಿದ್ದೆ. ಭುಜದ ನೋವು ಕಡಿಮೆಯಾದ ಹಿನ್ನೆಲೆಯಲ್ಲಿ ಶ್ರೀಕಂಠೇಶ್ವರನಿಗೆ ಪೂಜೆ ಸಲ್ಲಿಸಿ ಪತ್ನಿ, ಪುತ್ರಿಯರ ಹೆಸರಿನಲ್ಲಿ ಅರ್ಚನೆ ಮಾಡಿಸಿರುವುದಾಗಿ ತಿಳಿಸಿದರು. ದೇವಾಲಯಕ್ಕೆ ಬಂದ ನೆಚ್ಚಿನ ನಟನನ್ನು ನೋಡಲು ಅಭಿಮಾನಿಗಳು ಕಾತುರದಿಂದ ಕಾದಿದ್ದರಲ್ಲದೆ ಸೆಲ್ಫಿ ತೆಗೆದುಕೊಳ್ಳಲು ಮುಗಿ ಬಿದ್ದರು.

ಕಾನೂನು ಸುವ್ಯವಸ್ಥೆಗೆ ಧಕ್ಕೆ ಬಾರದಂತೆ ಹಬ್ಬ ಆಚರಿಸಿ: ಎಸ್ಪಿ



ಹುಣಸೂರು, ಅ.8– ಕಾನೂನು ಸುವ್ಯವಸ್ಥೆಗೆ ಧಕ್ಕೆ ಬಾರದಂತೆ ಪೊಲೀಸರೊಂದಿಗೆ ಪ್ರತಿಯೊಬ್ಬರೂ ಸಹಕರಿಸುವ ಮೂಲಕ ಹಬ್ಬಗಳನ್ನು ಆಚರಿಸಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಸೂಚಿಸಿದರು.

ಹುಣಸೂರು ನಗರ ಠಾಣೆಯಲ್ಲಿ ಈದ್–ಮಿಲಾದ್ ಹಬ್ಬದ ಅಂಗವಾಗಿ ಆಯೋಜಿಸಿದ್ದ ಸಭೆಯಲ್ಲಿ ಮುಖಂಡರಿಂದ ಮಾಹಿತಿ ಪಡೆದ ನಂತರ ಮಾತನಾಡಿದ ಅವರು ಮಧ್ಯಾಹ್ನ ಆರಂಭವಾಗುವ ಮಿಲಾದ್ ಮೆರವಣಿಗೆ ಸಂಜೆ ಮುಕ್ತಾಯವಾಗಿ ರಾತ್ರಿ 10ರೊಳಗೆ ಎಲ್ಲಾ ರೀತಿಯ ಕಾರ್ಯಕ್ರಮ ಮುಕ್ತಾಯಗೊಳಿಸಬೇಕು. ರಾತ್ರಿ ವೇಳೆ ಧ್ವನಿವರ್ಧಕ ಬಳಸಲು ಅವಕಾಶವಿಲ್ಲ ಎಂದರು.

ಮಿಲಾದ್ ಮೆರವಣಿಗೆ ವೇಳೆ ಮುಖಂಡರು ಜವಾಬ್ದಾರಿ ವಹಿಸಿ, ಯುವಕರನ್ನು ಗಮನಿಸಬೇಕು. ವ್ಯಾಟ್ಸಾಪ್‌ಗಳಲ್ಲಿ ಬರುವ ಇಲ್ಲ ಸಲ್ಲದ ಮಾಹಿತಿಗಳನ್ನು ಶೇರ್ ಮಾಡುವುದು, ಪ್ರಚೋದನೆ ಮಾಡುವವರ ವಿರುದ್ಧ ಶಿಸ್ತು ಕ್ರಮ ವಹಿಸಲಾಗುವುದು ಎಂದು ಎಚ್ಚರಿಸಿದರು.

ಈದ್–ಮಿಲಾದ್ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ ಮಿಲಾದ್ ಸಮಿತಿ ಅಧ್ಯಕ್ಷ ಸರದಾರ್ ಹಾಗೂ ಜಿಪಂ ಮಾಜಿ ಸದಸ್ಯ ಫಜಲುಲ್ಲಾ, ಮಧ್ಯಾಹ್ನ 2.30ಕ್ಕೆ ಶಬ್ಬೀರ್ ನಗರದ ಶಾಹಿ ಮಸೀದಿಯಿಂದ ಆರಂಭವಾಗುವ ಮೆರವಣಿಗೆಯು ಕಲ್ಪತರು ವೃತ್ತ, ಅಕ್ಷಯ ಬಂಡಾರ್, ಬಜಾರ್ ರಸ್ತೆ, ಜೆ.ಎಲ್.ಬಿ.ರಸ್ತೆ, ಹೆಚ್.ಡಿ.ಕೋಟೆ ವೃತ್ತ, ಎಸ್.ಜೆ.ರಸ್ತೆ, ಸಂವಿಧಾನ ವೃತ್ತದ ಮೂಲಕ ಈದ್ಗಾ ಮೈದಾನಕ್ಕೆ ಮೆರವಣಿಗೆ ಆಗಮಿಸಲಿದೆ. ಅಲ್ಲಿ ಉಪಹಾರ ವಿತರಣೆ ನಂತರ ಕಾರ್ಯಕ್ರಮ ಮುಕ್ತಾಯವಾಗಲಿದ್ದು, ಹಬ್ಬಕ್ಕಾಗಿ ಮುಖಂಡರ ಸಮಿತಿ ರಚಿಸಿಕೊಂಡಿದ್ದು, ಲೋಪವಾಗದಂತೆ ಎಚ್ಚರ ವಹಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಡಿವೈಎಸ್.ಪಿ.ರವಿಪ್ರಸಾದ್, ಇನ್‌ಸ್ಪೆಕ್ಟರ್ ಶ್ರೀನಿವಾಸ್, ನಗರಸಭೆ ಮಾಜಿ ಸದಸ್ಯ ಅಯೂಬ್ ಖಾನ್, ಬಷೀರ್ ಅಹಮದ್, ಮಜಾಜ್ ಅಹಮದ್ ಸೇರಿದಂತೆ ಮಿಲಾದ್ ಆಚರಣಾ ಸಮಿತಿ ಸದಸ್ಯರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪೊನ್ನಿಯನ್ ಸೆಲ್ವನ್–1(ತ): ಬೆ.10.05ಕ್ಕೆ, ರಾ.7.05ಕ್ಕೆ, ಕಾಂತಾರ (ಕ): ಮ.1.15ಕ್ಕೆ, ಸಂ.4.10ಕ್ಕೆ, ರಾ.10.15ಕ್ಕೆ
ಸ್ಕ್ರೀನ್ 2	ಗುರುಶಿಷ್ಯರು (ಕ): ಸಂ.4ಕ್ಕೆ, ಗುಡ್‌ಬೈ (ಹಿಂ): ಮ.1.25ಕ್ಕೆ, ರಾ.7.10ಕ್ಕೆ, ವಿಕ್ರಂ ವೇದಾ (ಹಿಂ): ಸಂ.4.15ಕ್ಕೆ, ರೋರ್ಸ್ಚಾಚ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಗುಡ್‌ಬೈ (ಹಿಂ): ಬೆ.10ಕ್ಕೆ, ಸ್ವಾತಿ ಮುತ್ಯಂ (ತೆ): ಮ.12.50ಕ್ಕೆ, ಟಿಕೆಟ್ ಆಫ್ ಪ್ಯಾರಡೈಸ್ (ಇಂ): ಮ.3.15ಕ್ಕೆ, ಸಂ.5.20ಕ್ಕೆ, ದಿ ಗೋಸ್ಟ್ (ತೆ): ರಾ.7.25ಕ್ಕೆ, ಗಾಡ್‌ಫಾದರ್ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಸಂ.4ಕ್ಕೆ, ತೋತಾಪುರಿ –1(ಕ): ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.15ಕ್ಕೆ, ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಗಾಡ್‌ಫಾದರ್ (ತೆ): ಬೆ.9.35ಕ್ಕೆ, ಮ.3.45ಕ್ಕೆ, ರಾ.10.20ಕ್ಕೆ, ದಿ ಗೋಸ್ಟ್ (ತೆ): ಮ.12.50ಕ್ಕೆ, ಗುರುಶಿಷ್ಯರು (ಕ): ರಾ.7ಕ್ಕೆ.
ಸ್ಕ್ರೀನ್ 4	ಪೊನ್ನಿಯನ್ ಸೆಲ್ವನ್ –1(ತ): ಬೆ.9.30ಕ್ಕೆ, ಮ.3.35ಕ್ಕೆ, ರಾ.10.10ಕ್ಕೆ, ತೋತಾಪುರಿ –1(ಕ): ಮ.12.45ಕ್ಕೆ, ವಿಕ್ರಮ್ ವೇದಾ (ಹಿಂ): ಸಂ.6.55ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ಚೆಕ್ ಮೇಟ್ (ಕ): ಬೆ.10ಕ್ಕೆ, ಗುರುಶಿಷ್ಯರು (ಕ): ಮ.12.50ಕ್ಕೆ, ಗಾಡ್ ಫಾದರ್ (ತೆ): ಸಂ.4ಕ್ಕೆ, ರಾ.9.50ಕ್ಕೆ, ದಿ ಗೋಸ್ಟ್ (ತೆ): ರಾ.7.05ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.9.55ಕ್ಕೆ, ಮ.12.55ಕ್ಕೆ, ಮ.3.55ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.11.40ಕ್ಕೆ, ಮ.3.10ಕ್ಕೆ, ಪೊನ್ನಿಯನ್ ಸೆಲ್ವನ್–1 (ತ): ಸಂ.6.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಗುರುಶಿಷ್ಯರು (ಕ): ಬೆ.10.45ಕ್ಕೆ, ದಿ ಗೋಸ್ಟ್ (ತೆ): ಮ.3.45ಕ್ಕೆ, ವಿಕ್ರಮ್ ವೇದಾ (ಹಿಂ): ಸಂ.6.30ಕ್ಕೆ, ಕಾಂತಾರ (ಕ): ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.35ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ತೋತಾಪುರಿ 1(ಕ): ಬೆ.10.30ಕ್ಕೆ, ಸಂ.4.25ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, ಗುರು ಶಿಷ್ಯರು (ಕ): ಬೆ.10.15ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.11.30ಕ್ಕೆ, ಸಂ.6.30ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಬೆ.8ಕ್ಕೆ, ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ನಾನೇ ವರುವೆನ್ (ತ): ಬೆ.10.50ಕ್ಕೆ, ಮ.1.30ಕ್ಕೆ, ರಾ.7.35ಕ್ಕೆ, ಅವತಾರ್ ರೀ ರಿಲೀಸ್ (ಇಂ): ಮ.3ಕ್ಕೆ, ಡೋಂಟ್ ವರಿ ಡಾರ್ಲಿಂಗ್ (ಇಂ): ಸಂ.4.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.9ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.15ಕ್ಕೆ, ಚುಪ್ (ಹಿಂ): ಮ.1.25ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಗಾಡ್‌ಫಾದರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಡ್‌ಫಾದರ್ (ಹಿ)	4 ಪ್ರದರ್ಶನಗಳು
ಪ್ರಭಾ	
ಘೋಸ್ಟ್ (ತೆ)	4 ಪ್ರದರ್ಶನಗಳು

ಹರದನಹಳ್ಳಿ ಶಾಲೆಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಭೇರ್ಯ, ಅ.8– ಸಾಲಿಗ್ರಾಮ ತಾಲೂಕಿನ ಹರದನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಒಸಾಟ್ ಸಂಸ್ಥೆ ವತಿಯಿಂದ 40 ಲಕ್ಷ ರೂ. ವೆಚ್ಚದಲ್ಲಿ 3 ಶಾಲಾ ಕೊಠಡಿ ಹಾಗೂ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಶಾಸಕ ಸಾ.ರಾ.ಮಹೇಶ್ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ತಮ್ಮ ಶಾಸಕರ ಅನುದಾನದಲ್ಲಿ ಹರದನಹಳ್ಳಿ ಶಾಲಾ ಕೊಠಡಿಗಳ ನಿರ್ಮಾಣ ಮಾಡಲಾಗುವುದು. ಶಾಸಕನಾಗಿ ಕ್ಷೇತ್ರ ಅಭಿವೃದ್ಧಿ ಮಾಡುವುದರೊಂದಿಗೆ ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿರುವುದಾಗಿ ತಿಳಿಸಿದರಲ್ಲದೇ ಸಮಾಜ ಸೇವೆ ಮಾಡುವವರನ್ನು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಾತಿ ಘೋಷಿಸಿರುವುದು ಸಂತಸ ತಂದಿದೆ ಎಂದ ಅವರು, ಗ್ರಾಪಂಗೆ ಕೊಟ್ಟಿರುವ ಅಧಿಕಾರವನ್ನು ಮತ್ತಷ್ಟು ಬಲಪಡಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಗ್ರಾಪಂಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಅಭಿವೃದ್ಧಿ ಕೆಲಸಗಳನ್ನು ಮಾಡಲು ಕ್ರಮ ಕೈಗೊಳ್ಳಬೇಕು. ಗ್ರಾಪಂ ಅಧ್ಯಕ್ಷರಿಗೆ ನೀಡಿದ ಅಧಿಕಾರ ಮೊಟಕುಗೊಳಿಸಬಾರದು. ಈ ಹಿಂದೆ ಅಧ್ಯಕ್ಷರಿಗೆ ನೀಡಿದ್ದ ಚೆಕ್ ಸಹಿ ಸೇರಿದಂತೆ ಇತರ ಅಧಿಕಾರಗಳನ್ನು ಮುಂದುವರಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಗ್ರಾಪಂ ಅಧ್ಯಕ್ಷೆ ನಂದಿನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಕೊಡುಗೆ ನೀಡಿರುವ ಡಾ.ದಮಯಂತಿ, ಗ್ರಾಪಂ ಉಪಾಧ್ಯಕ್ಷೆ ಶೈಲಜಾ, ಸದಸ್ಯರಾದ ಪ್ರದೀಪ್, ಎಸ್.ಆರ್. ಮಂಜುಳಾ, ಜಯರಾಮ್, ಭೇರ್ಯ ಗ್ರಾಪಂ ಅಧ್ಯಕ್ಷೆ ಜ್ಯೋತಿ, ಶೀಗವಾಳು ಗ್ರಾಪಂ ಅಧ್ಯಕ್ಷ ತುಳಸಿರಾಮ, ಮಾಜಿ ಅಧ್ಯಕ್ಷ ಹೆಚ್.ಜೆ.ಗೋಪಾಲ್, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಟಿ.ರಾಮೇಗೌಡ, ತಹಸೀಲ್ದಾರ್ ಕೆ.ಎನ್.ಮೋಹನ್ ಕುಮಾರ್, ತಾಪಂ ಇಓ ಸತೀಶ್, ಬಿಇಓ ಗಾಯತ್ರಿ, ಎಸ್ಐ ಕುಮುದಾ, ಒಸಾಟ್ ಸಂಸ್ಥೆ ಮುಖ್ಯಸ್ಥ ಸುಬ್ರಹ್ಮಣ್ಯ, ಮುಖ್ಯ ಶಿಕ್ಷಕಿ ರೇಣುಕಾ, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು, ಮುಖಂಡರಾದ ಹೆಚ್.ಎನ್.ರಮೇಶ್, ಹೆಚ್.ಟಿ.ಅನಂತ, ಹೆಚ್.ಟಿ.ಶ್ರೀನಿವಾಸ್, ಶಿಕ್ಷಕರು, ಜನಪ್ರತಿನಿಧಿಗಳು, ಮುಖಂಡರು, ವಿದ್ಯಾರ್ಥಿಗಳಿದ್ದರು.

ಮುಳ್ಳೂರಲ್ಲಿ ಗಾಂಧಿ ಜಯಂತಿ, ಪೋಷಣ್ ಅಭಿಯಾನ



ಸರಗೂರು, ಅ.8– ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಗಾಂಧಿ ಜಯಂತಿ ಹಾಗೂ ಪೋಷಣ್ ಅಭಿಯಾನ ಮಾಸಾಚರಣೆ ಕಾರ್ಯಕ್ರಮ ನಡೆಯಿತು.

ಈ ವೇಳೆ ಅಂಗನವಾಡಿ ಮೇಲ್ವಿಚಾರಕಿ ಚಿನ್ನಮ್ಮ ಮಾತನಾಡಿ, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಹಾಗೂ ಗರ್ಭಿಣಿ, ಬಾಣಂತಿಯರ ಆರೋಗ್ಯದ ಕಡೆ ಹೆಚ್ಚು ಗಮನ ಕೊಡುವುದು ಸೂಕ್ತ ಎಂದರು. ಮುಳ್ಳೂರು ಗ್ರಾಪಂ ಅಧ್ಯಕ್ಷ ಗೋವಿಂದಾಚಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖಂಡ ಶಿವಪ್ಪ, ಗ್ರಾಪಂ ಸದಸ್ಯರಾದ ಸಿದ್ದರಾಜು, ಮಹೇಶ್, ಶಿವಾನಂದ, ಶಿವಚನ್ನ, ತಾಪಂ ಮಾಜಿ ಅಧ್ಯಕ್ಷ ರವಿಕುಮಾರ್, ಅಂಗನವಾಡಿ ಕಾರ್ಯಕರ್ತೆರು, ಸಹಾಯಕಿಯರು, ಮಕ್ಕಳು ಸಾರ್ವಜನಿಕರು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರಕ್ಕೆ ಅಭಿನಂದನೆ



ತಿ.ನರಸೀಪುರ ಅ.8– ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಂಪುಟ ಸಂಪುಟ ಸಹೋದ್ಯೋಗಿಗಳಿಗೆ ರಾಜ್ಯ ಬಿಜೆಪಿ ಎಸ್‌ಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಎಸ್.ಮಹೇಶ್ ಕುಮಾರ್ ಅಭಿನಂದನೆ ಸಲ್ಲಿಸಿದ್ದಾರೆ.



ಪಿರಿಯಾಪಟ್ಟಣ ತಾಲೂಕಿನ ಕೋಗಿಲವಾಡಿ ಗ್ರಾಮದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಲಕ್ಷ್ಮಣ್, ಜಿಪಂ ಎಇಇ ಮಲ್ಲಿಕಾರ್ಜುನ್, ಇಂಜಿನಿಯರ್ ಪಾಷಾ, ಗ್ರಾಮದ ಮುಖಂಡರಿದ್ದರು.

ವೃದ್ಧೆ ನಾಪತ್ತೆ



ತಿ.ನರಸೀಪುರ, ಅ.8– ತಾಲೂಕಿನ ಆರ್.ಪಿ.ಹುಂಡಿ ಗ್ರಾಮದ ವೃದ್ಧೆಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಗ್ರಾಮದ ಚಿಕ್ಕಹೊನ್ನಮ್ಮ (60) ಸೆ.30 ರಂದು ಬೆಳಗ್ಗೆ ಮನೆಯಿಂದ ಹೊರ ಹೋದವರು ಮನೆಗೆ ವಾಪಸ್ಸಾಗಿಲ್ಲ ಎಂದು ಕುಟುಂಬದ ಸದಸ್ಯರು ಅ.7ರಂದು ಪಟ್ಟಣದ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ: 08227–261227, 9480805033 ಸಂಪರ್ಕಿಸಿ.

ವಿದ್ಯಾರ್ಥಿಗಳು ಉನ್ನತ ಸ್ಥಾನಕ್ಕೇರುವ ಮೂಲಕ ಕೀರ್ತಿ ತನ್ನಿ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಎನ್.ಮಹೇಶ್



ಹೆಚ್.ಡಿ.ಕೋಟೆ, ಅ.8– ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಭ್ಯಾಸ ಪಡೆದು ಉನ್ನತ ಸ್ಥಾನಕ್ಕೇರುವ ಮೂಲಕ ತಾಲೂಕಿಗೆ ಕೀರ್ತಿ ತರಬೇಕು ಎಂದು ಶಾಸಕ ಎನ್.ಮಹೇಶ್ ತಿಳಿಸಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಭಾರತೀಯ ವಿದ್ಯಾರ್ಥಿ ಸಂಘ ಹೆಚ್.ಡಿ.ಕೋಟೆ ತಾಲೂಕು ಘಟಕದಿಂದ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದಿರುವುದು ಸಂತಸದ ವಿಚಾರ ಎಂದ ಅವರು ಮುಂಬರುವ ದಿನಗಳಲ್ಲಿ ಉತ್ತಮ ಅಂಕ ಪಡೆದು ಉನ್ನತ ಹುದ್ದೆ ಅಲಂಕರಿಸುವಂತೆ ಸಲಹೆ ನೀಡಿದರು.

ಇದೇ ವೇಳೆ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಮಾಜ ಸೇವಕ, ಬಿಜೆಪಿ ಮುಖಂಡ ಡಾ. ಕೃಷ್ಣಸ್ವಾಮಿ ಅವರು ಪ್ರಥಮ ಬಹುಮಾನ 3 ಸಾವಿರ, ದ್ವಿತೀಯ 2 ಸಾವಿರ, ತೃತೀಯ ಸಾವಿರ ರೂ. ಹಾಗೂ 300ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಲಾ 500 ರೂ. ಮತ್ತು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ನಿರ್ದೇಶಕ ಜಿ.ಬಿ.ವಿನಯ್ ಕುಮಾರ್, ಬಿವಿಎಸ್ ಅಧ್ಯಕ್ಷ ಉಮೇಶ್, ಮೈಸೂರು ವಿವಿ ವಿಶ್ರಾಂತ ಪ್ರೊಫೆಸರ್ ಶಿವರಾಜಪ್ಪ, ಪುರಸಭಾಧ್ಯಕ್ಷೆ ಅನಿತಾ, ಸದಸ್ಯರಾದ ವೆಂಕಟೇಶ್, ನಂಜಪ್ಪ, ಜಿಲ್ಲಾ ಸಂಯೋಜಕರಾದ ಎಚ್.ಎಸ್.ಗಣೇಶ್ ಮೂರ್ತಿ, ರವಿಕುಮಾರ್, ಪ್ರಕಾಶ್, ವಕೀಲ ಮೋಹನ್, ಶಿವಕುಮಾರ್, ಗೋಪಾಲಯ್ಯ, ಮಲ್ಲೇಗೌಡ, ರಾಜು, ರಾಮುಲು, ಸೋಮಶೇಖರ್, ವಿರಾಜನಾಯಕ, ರಾಜೇಶ್ ಇತರರಿದ್ದರು.

ಮಹದೇಶ್ವರ ಜ್ಯೋತಿ ಯಾತ್ರೆಗೆ ಅದ್ಧೂರಿ ಸ್ವಾಗತ



ನಂಜನಗೂಡು, ಅ.8– ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿಯಲ್ಲಿ ನಡೆಯುವ ಮಹಾಕುಂಭ ಮೇಳದ ಅಂಗವಾಗಿ ಮಹದೇಶ್ವರ ಬೆಟ್ಟದಿಂದ ಆಗಮಿಸಿರುವ ಶ್ರೀಮಹದೇಶ್ವರ ಜ್ಯೋತಿ ಯಾತ್ರೆಯನ್ನು ನಗರದ ಚಿಂತಾಮಣಿ ಗಣಪತಿ ದೇವಾಲಯದ ಬಳಿ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಗುಂಡ್ಲುಪೇಟೆ ಮೂಲಕ ಸಂಜೆ 6 ಗಂಟೆ ವೇಳೆಗೆ ತಾಲೂಕು ಪ್ರವೇಶಿಸಿದ ಮಹದೇಶ್ವರ ಜ್ಯೋತಿ ಯಾತ್ರೆಯನ್ನು ವೀರಗಾಸೆ, ನಾದಸ್ವರ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಜ್ಯೋತಿ ಯಾತ್ರೆ ನಗರದ ಆರ್.ಪಿ.ರಸ್ತೆ ಮೂಲಕ ಸಾಗಿ ಶ್ರೀಕಂಠೇಶ್ವರ ದೇವಾಲಯ, ಶಂಕರ ಮಠ ರಸ್ತೆ ಮೂಲಕ ಹಳ್ಳದಕೇರಿ, ಗೋಳೂರು, ಗೀಕಹಳ್ಳಿ ಆಲಂಬೂರು, ನಗರ್ಲೆ ಮೂಲಕ ಸುತ್ತೂರಿಗೆ ಸಂಚರಿಸಿತು. ದಾರಿಯುದ್ದಕ್ಕೂ ಭಕ್ತರು ರಸ್ತೆಗೆ ನೀರು ಹಾಕಿ, ರಂಗೋಲೆ ಬಿಡಿಸಿ ಭಕ್ತಿ ಭಾವದಿಂದ ಬರಮಾಡಿಕೊಂಡಿದ್ದಲ್ಲದೆ, ಇಷ್ಟಾರ್ಥ ಈಡೇರಿಸುವಂತೆ ಮಹದೇಶ್ವರಸ್ವಾಮಿಯಲ್ಲಿ ಪ್ರಾರ್ಥಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿದರು. ಇದೇ ವೇಳೆ ಬುಲೆಟ್ ಮಹದೇವಪ್ಪ ಮಡುವಿನಹಳ್ಳಿ ಶಂಕರಪ್ಪ, ಜಿಪಂ ಮಾಜಿ ಸದಸ್ಯ ಸದಾನಂದ, ಜಗದೀಶ್, ಮಹದೇವಸ್ವಾಮಿ, ಮಂಜುನಾಥ್, ಶ್ರೀನಿವಾಸ್, ಅಜ್ಗರ್, ಮಹದೇವನಾಯಕ, ನಟರಾಜು ಸೇರಿದಂತೆ ಹಲವರಿದ್ದರು.

ಶೈಕ್ಷಣಿಕವಾಗಿಯೂ ಹುಣಸೂರು ಅಭಿವೃದ್ಧಿ: ಹೆಚ್‌ಪಿಎಂ



ಹುಣಸೂರು, ಅ.8– ಹುಣಸೂರು ಕ್ಷೇತ್ರ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಶನಿವಾರ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಹಾಗೂ ತರಬೇತಿ ಸಂಸ್ಥೆಯಿಂದ ಆಯೋಜಿಸಿದ್ದ ನೀಟ್ ಹಾಗೂ ಸಿಇಟಿ ಪರೀಕ್ಷೆಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ತಾಲೂಕಿನ ವಿದ್ಯಾರ್ಥಿಗಳು ಸಾವಿರಾರು ರೂ. ಖರ್ಚು ಮಾಡಿ ಬೇರೆ ಊರುಗಳಿಗೆ ತೆರಳಿ ನೀಟ್ ಮತ್ತು ಸಿಇಟಿ ಪರೀಕ್ಷೆಗಳ ತರಬೇತಿ ಪಡೆಯಬೇಕಾಗಿತ್ತು. ಇದನ್ನರಿತ ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಹಾಗೂ ತರಬೇತಿ ಸಂಸ್ಥೆ ಕಳೆದ 8 ವರ್ಷದಿಂದ ನುರಿತ ಉಪನ್ಯಾಸಕರಿಂದ ಉಚಿತವಾಗಿ ನೀಟ್ ಮತ್ತು ಸಿಇಟಿ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿದ್ದು ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಎಂದರು.

ಅಲ್ಲದೇ ಯುವಕರಿಗಾಗಿ ಪೊಲೀಸ್ ತರಬೇತಿ, ಸ್ಪೋಕನ್ ಇಂಗ್ಲಿಷ್ ಸೇರಿದಂತೆ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಮ್ಮ ತಾಯಿ ಹೆಸರಲ್ಲಿ 10 ಗ್ರಾಂ ಚಿನ್ನದ ಸರ, ಉಂಗುರ ನೀಡಲಾಗುತ್ತಿದೆ. ಅಲ್ಲದೇ ಶೇ.100 ರಷ್ಟು ಫಲಿತಾಂಶ ಪಡೆದ ಶಾಲೆ ಹಾಗೂ ಕಾಲೇಜುಗಳಿಗೆ ಶಾಸಕರ ನಿಧಿಯಿಂದ ಅನುದಾನ ನೀಡಲಾಗುತ್ತಿದೆ ಎಂದರು.

ಪ್ರತಿವರ್ಷ ನಗರದ ಟ್ಯಾಲೆಂಟ್ ಸ್ಕೂಲ್‌ನಲ್ಲಿ ನಡೆಯುತ್ತಿದ್ದ ತರಬೇತಿ ಕಾರ್ಯಾಗಾರ ಈ ಬಾರಿ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಭಾನುವಾರ ಹಾಗೂ ಸರ್ಕಾರಿ ರಜಾ ದಿನಗಳಲ್ಲಿ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2.30ರವರೆಗೆ ನಡೆಯಲಿದೆ. ವಿದ್ಯಾರ್ಥಿಗಳು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ನಗರದಲ್ಲಿ ವಿದ್ಯಾವಂತ ಯುವ ಜನರಿಗಾಗಿ ಕೌಶಲ್ಯಾಧಾರಿತ ತರಬೇತಿ ನೀಡಲು ಜಿಟಿಟಿಸಿ ಕೇಂದ್ರ ಸ್ಥಾಪಿಸಿ ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ, ಹೆಚ್.ಡಿ. ಕೋಟೆ ತಾಲೂಕಿನ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದರು.

ಆದಿಚುಂಚನಗಿರಿ ವಿವಿ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮು ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕಿನ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು, ಸ್ನೇಹಜೀವಿ ಗ್ರಾಮೀಣಾಭಿವೃದ್ಧಿ ಹಾಗೂ ತರಬೇತಿ ಸಂಸ್ಥೆ ಅಧ್ಯಕ್ಷ ಅನಂದ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದೇಗೌಡ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನರಸಿಂಹ ಸೇರಿದಂತೆ ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

ರಾಮಚಂದ್ರರಾವ್ ಶೈಲಾರ್ ನಿಧನ



ಹೆಚ್.ಡಿ.ಕೋಟೆ, ಅ.8– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ರಾಮಚಂದ್ರರಾವ್ ಶೈಲಾರ್(74) ಶುಕ್ರವಾರ ನಿಧನರಾದರು. ಮೈಸೂರಿನ ಗಾಯತ್ರಿಪುರಂನಲ್ಲಿ ವಾಸವಾಗಿದ್ದ ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

12ನೇ ವರ್ಷದ ಪುಣ್ಯಸ್ಮರಣೆ



ಪಾಪಯ್ಯನ ರಾಚಯ್ಯ
ಕುರುಬಗೇರಿ ನಂಜನಗೂಡು
ನಿಧನ: 9–10–2010

ಸದಾ ನಿಮ್ಮ ನೆನಪಿನಲ್ಲಿರುವ,
ಧರ್ಮಪತ್ನಿ ಶ್ರೀಮತಿ ಸರೋಜಮ್ಮ,
ಮಗ: ಎನ್.ಆರ್.ನಾಗೇಶ್
ಸೊಸೆ: ಶ್ರೀಮತಿ ಲತಾ ನಾಗೇಶ್,
ಮಾಲೀಕರು ಶ್ರೀ ರಾಘವೇಂದ್ರ ಟಿವಿ ಸೆಂಟರ್ ಹೆಬ್ಬಾಳ್, ಮೈಸೂರು.
ಮತ್ತು ಕುಟುಂಬವರ್ಗ



